

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 4 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 138 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ದಸರಾ ಉದ್ಘಾಟಕರಾದ ಶ್ರೀಮತಿ ಬಾನು ಮುಷ್ತಾಕರಿಗೆ ಮೈಸೂರು ಜಿಲ್ಲಾಡಳಿತದಿಂದ ಅಧಿಕೃತ ಆಹ್ವಾನ

ಮೈಸೂರು,ಸೆ.3(ಎಂಕೆ)–ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2025 ಉದ್ಘಾಟಕರಾಗಿ ಆಯ್ಕೆಯಾಗಿರುವ ಖ್ಯಾತ ಸಾಹಿತಿ ಹಾಗೂ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ವಿಜೇತರಾದ ಶ್ರೀಮತಿ ಬಾನು ಮುಷ್ತಾಕ್ ಅವರನ್ನು ಮೈಸೂರು ಜಿಲ್ಲಾಡಳಿತ ಇಂದು ಅಧಿಕೃತವಾಗಿ ಆಹ್ವಾನಿಸಿತು.

ದಸರಾ ವಿಶೇಷಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ನೇತೃತ್ವದ ಸ್ವಾಗತ ಸಮಿತಿ ವತಿಯಿಂದ ಹಾಸನದ ಅವರ ನಿವಾಸದಲ್ಲಿ ಅವರಿಗೆ ಮೈಸೂರು ಪೇಟ ತೊಡಿಸಿ, ಫಲ–ಪುಷ್ಪ ನೀಡಿ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಸೆ.22ರಂದು ಮೈಸೂರು ದಸರಾ ಉದ್ಘಾಟನೆ ನೆರವೇರಲಿದ್ದು, ಈ ಬಾರಿಯ ದಸರಾ ಉದ್ಘಾಟಕರನ್ನಾಗಿ ಶ್ರೀಮತಿ ಬಾನು ಮುಷ್ತಾಕ್‌ರನ್ನು ಸರ್ಕಾರ ಆಯ್ಕೆ ಮಾಡಿದೆ. ಹಾಗಾಗಿ ಜಿಲ್ಲಾಡಳಿತದಿಂದ ಸಾಹಿತಿ ಬಾನು ಮುಷ್ತಾಕ್ ಹಾಗೂ ಅವರ ಪರಿವಾರವನ್ನು ಇಂದು ಆಹ್ವಾನಿಸಲಾಗಿದೆ. ಅಲ್ಲದೆ, ಉತ್ಸವ ನಡೆಯುವ 10 ದಿನಗಳ ಕಾಲವೂ ದಸರಾ ಮಹೋತ್ಸವದ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿದ್ದೇವೆ ಎಂದರು.

ಸೆ.22ರಂದು ದಸರಾ ಉದ್ಘಾಟನೆ, ಅ.2ರಂದು ಜಂಬೂಸವಾರಿ ಮೆರವಣಿಗೆ ನಡೆಯಲಿದೆ. ಜಿಲ್ಲಾಡಳಿತದಿಂದ ದಸರಾ ಮಹೋತ್ಸವದ ಪೂರ್ವತಯಾರಿ ತ್ವರಿತವಾಗಿ ನಡೆಯುತ್ತಿದೆ. ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳು ಸಿದ್ಧವಾಗುತ್ತಿವೆ ಎಂದು ಮಾಹಿತಿ ನೀಡಿದರು. ಈ ವೇಳೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಜಿಪಂ ಸಿಇಒ ಎಸ್.ಯುಕೇಶ್‌ಕುಮಾರ್, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಹಾಗೂ ಸ್ವಾಗತ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾಡಳಿತದಿಂದ ಬಾನು ಮುಷ್ತಾಕ್‌ರನ್ನು ಆಹ್ವಾನಿಸಲಾಯಿತು.

> “ಈ ಸಂದರ್ಭದಲ್ಲಿ ನಾನು ನಾಡಿನ ಸಮಸ್ತ ಕನ್ನಡಿಗರಿಗೆ, ಕರ್ನಾಟಕ ಸರ್ಕಾರಕ್ಕೆ, ಮುಖ್ಯಮಂತ್ರಿಗಳಿಗೆ ಹಾಗೂ ಆಹ್ವಾನ ನೀಡಿರುವ ಜಿಲ್ಲಾಡಳಿತಕ್ಕೆ ಧನ್ಯವಾದ ಹೇಳಬಯಸುತ್ತೇನೆ. ಒಂದೆರಡು ದಿನಗಳಲ್ಲಿ ವಿದೇಶ ಪ್ರವಾಸಕ್ಕೆ ತೆರಳುತ್ತಿದ್ದು, ಮರಳಿದ ಬಳಿಕ ಜಿಲ್ಲಾಡಳಿತದೊಂದಿಗೆ ಚರ್ಚಿಸಿ ದಸರಾ ಕಾರ್ಯಕ್ರಮಗಳ ಮಾಹಿತಿ ಪಡೆಯುತ್ತೇನೆ. ನಾಡಹಬ್ಬದಲ್ಲಿ ಭಾಗವಹಿಸುತ್ತಿರುವ ಈ ಸಂತೋಷವನ್ನು ಸಮಸ್ತ ಕನ್ನಡಿಗರೊಂದಿಗೆ ಹಂಚಿಕೊಳ್ಳುತ್ತೇನೆ.
> –ಬಾನು ಮುಷ್ತಾಕ್, ಬೂಕರ್ ಪ್ರಶಸ್ತಿ ವಿಜೇತರು ಹಾಗೂ ಪ್ರಸಕ್ತ ಸಾಲಿನ ದಸರಾ ಉದ್ಘಾಟನೆ ಮಾಡಲಿರುವವರು

ಮೈಸೂರು, ಹಾಸನ ಸೇರಿ 9 ಮೆಡಿಕಲ್ ಕಾಲೇಜಲ್ಲಿ ಹೆಚ್ಚುವರಿ 450 ಸೀಟು ಲಭ್ಯ

ಬೆಂಗಳೂರು, ಸೆ.3(ಕೆಎಂಶಿ)–ರಾಜ್ಯದ 9 ವೈದ್ಯಕೀಯ ಕಾಲೇಜುಗಳಲ್ಲಿ 450 ಸೀಟುಗಳನ್ನು ಹೆಚ್ಚುವರಿಯಾಗಿ ಕೇಂದ್ರ ಸರ್ಕಾರ ಮಂಜೂರು ಮಾಡಿದೆ.

ಮೈಸೂರು, ಹಾಸನ, ಚಿಕ್ಕಬಳ್ಳಾಪುರ, ಕಲಬುರಗಿ, ರಾಯಚೂರು, ವಿಜಯನಗರ ಸರ್ಕಾರಿ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲದೆ, ಬೆಂಗಳೂರಿನ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಹಾಗೂ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಹೆಚ್ಚುವರಿಯಾಗಿ ತಲಾ 50 ಸೀಟುಗಳನ್ನು ನೀಡಿದೆ. ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ▶ 6ನೇ ಪುಟಕ್ಕೆ

ಕೇಂದ್ರದಿಂದ ಬಡವರು, ಜನಸಾಮಾನ್ಯರಿಗೆ ದಸರಾ, ದೀಪಾವಳಿ ಕೊಡುಗೆಯಾಗಿ

ಜಿಎಸ್‌ಟಿ ಬಿಗ್ ರಿಲೀಫ್

● ಸೆ.22ರಿಂದ ಹೊಸ ತೆರಿಗೆ ಜಾರಿ ● ಇನ್ನು ಶೇ.5, 18ರೊಂದಿಗೆ ತಂಬಾಕು ಉತ್ಪನ್ನ, ವಿಲಾಸಿ ವಸ್ತುಗಳಿಗೆ ಶೇ.40 ತೆರಿಗೆ ಅನ್ವಯ



ಜಿಎಸ್‌ಟಿ ಮಂಡಳಿ ಸಭೆಯಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಾತನಾಡಿದರು. ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌದರಿ, ರೆವೆನ್ಯೂ ಕಾರ್ಯದರ್ಶಿ ಅರವಿಂದ ಶ್ರೀವಾಸ್ತವ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ನವದೆಹಲಿ, ಸೆ.3– ದಸರಾ ಹಾಗೂ ದೀಪಾವಳಿಗೂ ಮುನ್ನವೇ ದೇಶದ ಜನಸಾಮಾನ್ಯರಿಗೆ ತೆರಿಗೆ ಭಾರ ಇಳಿಕೆಯ ಶುಭ ಸುದ್ದಿಯನ್ನು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ನೀಡಿದ್ದಾರೆ.

ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸರಕು ಮತ್ತು ಸೇವಾ ತೆರಿಗೆ ಮಂಡಳಿಯ (ಜಿಎಸ್‌ಟಿ ಕೌನ್ಸಿಲ್) 56ನೇ ಸಭೆಯಲ್ಲಿ ಬಡವರು ಮತ್ತು ಮಧ್ಯಮ ವರ್ಗದವರು ಬಳಸುವ ಬಹುತೇಕ ವಸ್ತುಗಳ ಜಿಎಸ್‌ಟಿ ಇಳಿಸುವ ನಿರ್ಧಾರ ಪ್ರಕಟಿಸಲಾಗಿದೆ. ಸಭೆಯು ನಾಳೆ (ಗುರುವಾರ)ಯೂ ನಡೆಯಲಿದ್ದು, ಸಭೆ ಮುಗಿದ ಬಳಿಕ ▶ 6ನೇ ಪುಟಕ್ಕೆ



> “ಸ್ವಾತಂತ್ರ್ಯ ದಿನಾಚರಣೆಯ ನನ್ನ ಭಾಷಣದಲ್ಲಿ ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಜಿಎಸ್‌ಟಿಯಲ್ಲಿ ಸುಧಾರಣೆ ತರುವ ನಮ್ಮ ಉದ್ದೇಶದ ಬಗ್ಗೆ ಮಾತನಾಡಿದ್ದೆ. ಸಾಮಾನ್ಯ ಜನತೆಯ ಜೀವನವನ್ನು ಸುಲಭಗೊಳಿಸುವ ಹಾಗೂ ಅದರ ಆರ್ಥಿಕತೆ ಬಲಪಡಿಸುವ ಗುರಿ ಹೊಂದಿರುವ ವಿಶಾಲ ಹಾಗೂ ಸೂಕ್ತ ರೀತಿಯ ಜಿಎಸ್‌ಟಿ ದರ ಸುಧಾರಣೆಗೆ ಕೇಂದ್ರ ಸರ್ಕಾರ ಪ್ರಸ್ತಾಪ ಸಿದ್ಧಪಡಿಸಿತ್ತು. ಜಿಎಸ್‌ಟಿ ದರ ಕಡಿತ ಮತ್ತು ಸುಧಾರಣೆಗಳ ಕುರಿತು ಕೇಂದ್ರ ಸರ್ಕಾರ ಸಲ್ಲಿಸಿದ ಪ್ರಸ್ತಾವನೆಗೆ ಕೇಂದ್ರ, ರಾಜ್ಯಗಳನ್ನು ಒಳಗೊಂಡಿರುವ ಜಿಎಸ್‌ಟಿ ಕೌನ್ಸಿಲ್, ಒಟ್ಟಾಗಿ ಒಪ್ಪಿಗೆ ನೀಡಿದೆ. ಇದು ಸಾಮಾನ್ಯ ನಾಗರಿಕ, ರೈತರು, ಸಣ್ಣ ಕೈಗಾರಿಕೆಗಳು, ಮಧ್ಯಮ ವರ್ಗದವರು, ಮಹಿಳೆಯರು, ಯುವ ಜನರಿಗೆ ಪ್ರಯೋಜನ ಆಗಲಿದೆ. ಇಂತಹ ವ್ಯಾಪಕ ಸುಧಾರಣೆಗಳು ನಮ್ಮ ಜನತೆಯ ಜೀವನ ಮಟ್ಟವನ್ನು ಸುಧಾರಿಸಲಿದೆ. ಜೊತೆಗೆ ಎಲ್ಲರಿಗೂ ವಿಶೇಷವಾಗಿ ಸಣ್ಣ ವ್ಯಾಪಾರಿಗಳ ವಹಿವಾಟು ಸುಧಾರಿಸಲಿದೆ.
> –ನರೇಂದ್ರ ಮೋದಿ, ಪ್ರಧಾನಮಂತ್ರಿ, (ತಮ್ಮ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯೆ)

ದೈನಂದಿನ ಬಳಕೆಯ ಅಗತ್ಯ ವಸ್ತುಗಳು

ಶೇ.18ರಿಂದ ಶೇ.5ಕ್ಕೆ ಇಳಿಕೆ: ಹೇರ್ ಆಯಿಲ್, ಶಾಂಪು, ಟೂತ್‌ಪೇಸ್ಟ್, ಟೂತ್‌ಬ್ರಷ್, ಶೇವಿಂಗ್ ಕ್ರೀಂ

ಶೇ.12ರಿಂದ ಶೇ.5ಕ್ಕೆ: ಬೆಣ್ಣೆ, ತುಪ್ಪ, ಚೀಸ್, ಡೈರಿ ಉತ್ಪನ್ನಗಳು, ಪ್ಯಾಕ್ ಮಾಡಿದ ಕುರುಕಲು ತಿಂಡಿ, ಪಾತ್ರೆಗಳು, ಮಕ್ಕಳಿಗೆ ಹಾಲುಣಿಸುವ ಬಾಟಲ್‌ಗಳು, ಮಕ್ಕಳ ನ್ಯಾಪ್ಕಿನ್‌ಗಳು, ಕ್ಲಿನಿಕಲ್ ಡೈಪರ್‌ಗಳು, ಹೊಲಿಗೆ ಯಂತ್ರಗಳು, ಬಿಡಿ ಭಾಗಗಳು.

ಕೃಷಿಗೆ ಸಂಬಂಧಿಸಿದ ಉತ್ಪನ್ನಗಳು

ಶೇ.18ರಿಂದ ಶೇ.5ಕ್ಕೆ: ಟ್ರ್ಯಾಕ್ಟರ್ ಟೈರ್‌ಗಳು ಮತ್ತು ಬಿಡಿ ಭಾಗಗಳು

ಶೇ.12ರಿಂದ ಶೇ.5ಕ್ಕೆ: ಟ್ರ್ಯಾಕ್ಟರ್‌ಗಳು, ನಿರ್ದಿಷ್ಟ ಜೈವಿಕ ಕೀಟನಾಶಕಗಳು, ಸೂಕ್ಷ್ಮ ಪೋಷಕಾಂಶಗಳು, ಹನಿ ನೀರಾವರಿ ವ್ಯವಸ್ಥೆ, ಕೃಷಿ, ತೋಟಗಾರಿಕೆ ಯಂತ್ರಗಳು.

ಆರೋಗ್ಯ ವಲಯ

ಜಿಎಸ್‌ಟಿ ವಿನಾಯಿತಿ: ವೈಯಕ್ತಿಕ ಆರೋಗ್ಯ ಮತ್ತು ಜೀವ ವಿಮೆ, ಕ್ಯಾನ್ಸರ್ ಸೇರಿದಂತೆ 33 ಜೀವರಕ್ಷಕ ಔಷಧಗಳು.

ಶೇ.18ರಿಂದ ಶೇ.5ಕ್ಕೆ: ಥರ್ಮಾಮೀಟರ್

ಶೇ.12ರಿಂದ ಶೇ.5ಕ್ಕೆ: ವೈದ್ಯಕೀಯ ದರ್ಜೆ ಆಮ್ಲಜನಕ, ಡಯಾಗ್ನೋಸ್ಟಿಕ್‌ಗಳು, ರೀ–ಏಜೆಂಟ್ಸ್, ಗ್ಲೂಕೋಮೀಟರ್, ಟೆಸ್ಟ್ ಸ್ಟ್ರಿಪ್‌ಗಳು, ದೃಷ್ಟಿ ಸರಿಪಡಿಸುವ ಕನ್ನಡಕಗಳು.

ಆಟೋಮೊಬೈಲ್ ವಸ್ತುಗಳು

ಶೇ.28ರಿಂದ ಶೇ.18ಕ್ಕೆ: ಪೆಟ್ರೋಲ್ ಮತ್ತು ಹೈಬ್ರಿಡ್, ಎಲ್‌ಪಿಜಿ, ಸಿಎನ್‌ಜಿ ಕಾರುಗಳು (1200 ಸಿಸಿ, 4 ಮೀ. ಮೀರದಂತೆ), ಡೀಸೆಲ್ ಮತ್ತು ಹೈಬ್ರಿಡ್ ಕಾರುಗಳು (1500 ಸಿಸಿ, 4 ಮೀ. ಮೀರದಂತೆ), ತ್ರಿಚಕ್ರ ವಾಹನಗಳು, ಮೋಟಾರ್ ಸೈಕಲ್‌ಗಳು (350 ಸಿಸಿ, ಕೆಳಗೆ), ಸರಕು ಸಾಗಣೆ ವಾಹನಗಳು.

ಶೈಕ್ಷಣಿಕ ಉತ್ಪನ್ನ ವಸ್ತುಗಳು

ಶೇ.12ರಿಂದ ಜಿಎಸ್‌ಟಿ ವಿನಾಯಿತಿ: ನಕ್ಷೆಗಳು, ಚಾರ್ಟ್‌ಗಳು, ಗ್ಲೋಬ್‌ಗಳು, ಪೆನ್ಸಿಲ್‌ಗಳು, ಶಾರ್ಪನರ್‌ಗಳು, ಕ್ರೆಯಾನ್‌ಗಳು, ಪೇಸ್ಟಲ್‌ಗಳು, ಅಭ್ಯಾಸ ಪುಸ್ತಕಗಳು, ನೋಟ್‌ಪುಸ್ತಕಗಳು, ಅಳಿಸುವ ರಬ್ಬರ್‌ಗಳು.

ಎಲೆಕ್ಟ್ರಾನಿಕ್ ಉಪಕರಣಗಳು

ಶೇ.28ರಿಂದ ಶೇ.18ಕ್ಕೆ: ಏರ್ ಕಂಡೀಷನರ್‌ಗಳು, ಟೆಲಿವಿಷನ್, ಮಾನಿಟರ್‌ಗಳು, ಪ್ರೊಜೆಕ್ಟರ್‌ಗಳು, ಪಾತ್ರೆ ತೊಳೆಯುವ ಯಂತ್ರಗಳು.

ತಾನೇ ಸೇದಿ ಬಿಸಾಡಿದ ಬೀಡಿಯ ಬೆಂಕಿಯಲ್ಲಿ ಜೀವಂತ ಬೆಂದ ವೃದ್ಧ!

● ಮೈಸೂರಿನ ಮಂಡಿ ಮೊಹಲ್ಲಾದಲ್ಲಿ ದುರಂತ ● ಗುಜರಿ ಪದಾರ್ಥಗಳ ರಾಶಿ ಮಧ್ಯೆ ಮಲಗಿದ್ದ ದುರ್ದೈವಿ ● ಅದೃಷ್ಟವಶಾತ್ ಮೊಮ್ಮಗಳು ಪಾರು



ಸಿದ್ದನಾಯಕ

ಮೈಸೂರು, ಸೆ.3(ಎಂಟಿವೈ)– ಬೀಡಿ ಸೇದಿ ಕಿಡಿ ಆರಿಸದೆ ಎಸೆದ ಪರಿಣಾಮ ಇಡಿ ಮನೆಯೇ ಬೆಂಕಿಗಾಹುತಿಯಾಗಿ ವೃದ್ಧರೊಬ್ಬರು ಸಜೀವ ದಹನವಾದ ಘಟನೆ ಬುಧವಾರ ಬೆಳಗ್ಗೆ ಮೈಸೂರಿನ ಮಂಡಿಮೊಹಲ್ಲಾದಲ್ಲಿ ನಡೆದಿದೆ.

ಮೊಹಲ್ಲಾದ ಬಿ.ಎನ್.ಸ್ಟ್ರೀಟ್ ನಿವಾಸಿ ಸಿದ್ದನಾಯಕ(60), ಸಜೀವ ದಹನವಾಗಿದ್ದು, ಅವರ ಮೊಮ್ಮಗಳು ಲಕ್ಷ್ಮಿ ಅದೃಷ್ಟವಶಾತ್ ದುರಂತದಲ್ಲಿ ಪಾರಾಗಿದ್ದಾಳೆ. ರಸ್ತೆ ಬದಿ ಪ್ಲಾಸ್ಟಿಕ್ ವಸ್ತುಗಳನ್ನು ಆಯ್ದು ಗುಜರಿಗೆ ಮಾರಾಟ ಮಾಡುವ ಮೂಲಕ ಜೀವನ ಸಾಗಿಸುತ್ತಿದ್ದ ಸಿದ್ದನಾಯಕ, ಪತ್ನಿ ಪುಟ್ಟಮ್ಮ ಹಾಗೂ ಮೊಮ್ಮಗಳು ಲಕ್ಷ್ಮಿಯೊಂದಿಗೆ ಮಂಡಿಮೊಹಲ್ಲಾದ ಬಿ.ಎನ್.ಸ್ಟ್ರೀಟ್‌ನಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಪತ್ನಿ ಪುಟ್ಟಮ್ಮ ಬೆಳಗ್ಗೆ ಕೆಲಸಕ್ಕೆ ಹೋಗಿದ್ದು, ಈ ವೇಳೆ ಸಿದ್ದನಾಯಕ ಬೀಡಿ ಸೇದಿ ಕಿಡಿ ಆರಿಸದೇ ಮನೆಯಲ್ಲೇ ರಾಶಿ ಬಿದ್ದಿದ್ದ ತ್ಯಾಜ್ಯ ವಸ್ತುಗಳ ಮೇಲೆ ಎಸೆದಿದ್ದಾರೆ. ಕೆಲ ಹೊತ್ತಿನಲ್ಲೇ ಬೀಡಿಯ ಕಿಡಿ ಹೊತ್ತಿಕೊಂಡಿದ್ದು, ಅದು ಮಲಗಿದ್ದ ಸಿದ್ದನಾಯಕ ಅವರ ▶ 6ನೇ ಪುಟಕ್ಕೆ

ಆಸ್ತಿಗಾಗಿ ತಂದೆಯ ಅಶ್ಲೀಲ ವೀಡಿಯೊ ಹರಿಬಿಟ್ಟ ಮಗ: ನಾಲ್ವರ ಬಂಧನ

ಮದ್ದೂರು,ಸೆ.3–ಆಸ್ತಿಗಾಗಿ ತಂದೆಯ ವಿರುದ್ಧವೇ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ವಿಡಿಯೋ ಹರಿಬಿಟ್ಟ ಆರೋಪದಡಿ ಮಗನೂ ಸೇರಿದಂತೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಪಟ್ಟಣದ ಶಿಕ್ಷಕರ ಬಡಾವಣೆ ನಿವಾಸಿ ರಾಣಿ ಐಶ್ವರ್ಯ ಡೆವಲಪರ್ಸ್ ಸಂಸ್ಥೆ ಮಾಲೀಕರಾಗಿರುವ ರಿಯಲ್ ಎಸ್ಟೇಟ್ ಉದ್ಯಮಿ ಸತೀಶ್ ಅವರ ಪುತ್ರ ಪ್ರಣಮ್ (25) ಈತನ ಸ್ನೇಹಿತರಾದ ವಳಗೆರೆಹಳ್ಳಿ ಮಹೇಶ್, ಪಟ್ಟಣದ ಹಳೆ ಒಕ್ಕಲಿಗರ ಬೀದಿ ನಿವಾಸಿ ಈಶ್ವರ್ ಹಾಗೂ ಸತೀಶ್ ಅವರ ಸೋದರ ಸಂಬಂಧಿ ಪ್ರೀತಮ್ ಬಂಧಿತ ಆರೋಪಿಗಳಾಗಿದ್ದಾರೆ. ಆರೋಪಿ ಪ್ರಣಮ್ ತನ್ನ ತಂದೆಯ ಭಾವಚಿತ್ರಕ್ಕೆ ಅಶ್ಲೀಲ ಚಿತ್ರದೊಂದಿಗೆ ವಾಯ್ಸ್ ಎಡಿಟ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟು, ಅವರನ್ನು ಬ್ಲಾಕ್‌ಮೇಲ್ ▶ 6ನೇ ಪುಟಕ್ಕೆ

ಈ ಬಾರಿ ಮತ್ತಷ್ಟು ಅದ್ಧೂರಿ ದಸರಾ ದೀಪಾಲಂಕಾರ

136 ಕಿ.ಮೀ ರಸ್ತೆ, 118 ವೃತ್ತಗಳಲ್ಲಿ ಬೆಳಕಿನ ಚಿತ್ತಾರ ಮೂಡಲಿದೆ

● ಮೈಸೂರಿನ ವಿವಿಧೆಡೆ ವರ್ಣರಂಜಿತ ಲೈಟ್‌ಗಳಿಂದ ಮೈತಳೆಯಲಿವೆ 60 ಪ್ರತಿಕೃತಿ
● ದೀಪಾಲಂಕಾರಕ್ಕೆ 2.50 ಲಕ್ಷ ಯೂನಿಟ್ ವಿದ್ಯುತ್ ಬಳಕೆ; ಆರು ಕೋಟಿ ವೆಚ್ಚ




ಮೈಸೂರಿನ ಮಾನಸಗಂಗೋತ್ರಿ ಬಯಲು ರಂಗಮಂದಿರ ರಸ್ತೆಯಲ್ಲಿ ಮಾಡಲಾಗಿರುವ ಪ್ರಾಯೋಗಿಕ ದೀಪಾಲಂಕಾರ.

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಸೆ.3– ಈ ಬಾರಿ ನಾಡಹಬ್ಬ ದಸರಾ ಮಹೋತ್ಸವದಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಬೆಳಕಲಿ ಜಗಮಗಿಸಲಿದೆ. 136 ಕಿ.ಮೀ ರಸ್ತೆ, 118 ವೃತ್ತಗಳಿಗೆ ದೀಪಾಲಂಕಾರ ಮಾಡಲಾಗುತ್ತಿದೆ. ಅಲ್ಲದೆ, ವಿವಿಧೆಡೆ ವರ್ಣರಂಜಿತ ಲೈಟ್‌ಗಳಲ್ಲಿ 60ಕ್ಕೂ ಹೆಚ್ಚು ಪ್ರತಿಕೃತಿಗಳು ಪ್ರವಾಸಿಗರ ಕಣ್ಮನ ಸೆಳೆಯಲಿವೆ.

ದಸರಾ ಮಹೋತ್ಸವವನ್ನು ಈ ಬಾರಿ ಅದ್ಧೂರಿಯಾಗಿ ಆಚರಿಸಲಾಗುತ್ತಿದ್ದು, ಪ್ರವಾಸಿಗರನ್ನು ಆಕರ್ಷಿಸಲು ಅಪರೂಪದ ಕಾರ್ಯಕ್ರಮ ರೂಪಿಸಲಾಗಿದೆ. ಪ್ರತಿ ವರ್ಷವೂ ನವರಾತ್ರಿ ವೇಳೆ ದೀಪಾಲಂಕಾರದಿಂದ ಮಿಂದೇಳುವ ಮೈಸೂರಿನ ಅಂದ ಕಣ್ತುಂಬಿಕೊಳ್ಳಲು ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದು, ಈ ಬಾರಿಯೂ ದೀಪಾಲಂಕಾರ ಅದ್ಧೂರಿಯಾಗಿರಲಿದೆ.

ದಸರಾ ದೀಪಾಲಂಕಾರವನ್ನು ಅಚ್ಚುಕಟ್ಟಾಗಿ ನೆರವೇರಿಸಲು ಈಗಾಗಲೇ ಜಿಲ್ಲಾಧಿಕಾರಿ ಹಾಗೂ ದಸರಾ ವಿಶೇಷಾಧಿಕಾರಿಗಳೂ ಆದ ಜಿ.ಲಕ್ಷ್ಮೀಕಾಂತರೆಡ್ಡಿ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಮುನಿಗೋಪಾಲರಾಜ್ ಪೂರ್ವಭಾವಿ ಸಭೆ ನಡೆಸಿ, ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಿದ್ದರು. ಅಲ್ಲದೆ, ದೀಪಾಲಂಕಾರಕ್ಕಾಗಿ ಟೆಂಡರ್ ಪಡೆದವರಿಂದ ದೀಪಾಲಂಕಾರಕ್ಕಾಗಿ ಬಳಸುವ ಬಲ್ಬ್‌ಗಳು ಮತ್ತು ವಿನ್ಯಾಸ ಕುರಿತಂತೆ ಪ್ರಾತ್ಯಕ್ಷಿಕೆ ವೀಕ್ಷಿಸಿ, ದೀಪಾಲಂಕಾರದ ಸೊಬಗು ಹೆಚ್ಚಿಸುವ ಶೈಲಿಯ ವಿನ್ಯಾಸ ಮತ್ತು ಅಂತಹ ಬಲ್ಬ್‌ಗಳನ್ನೇ ಬಳಸಲು ಆಯ್ಕೆ ▶ 6ನೇ ಪುಟಕ್ಕೆ



> “ಈ ಬಾರಿಯ ನಾಡಹಬ್ಬ ಮೈಸೂರು ದಸರಾ ದೀಪಾಲಂಕಾರ ಅದ್ಧೂರಿಯಾಗಿಯೂ, ವೈಭವಯುತವಾಗಿಯೂ ಇರಲಿದೆ. 136 ಕಿ.ಮೀ ರಸ್ತೆ 118 ವೃತ್ತಕ್ಕೆ ದೀಪಾಲಂಕಾರದ ಜೊತೆಗೆ ವರ್ಣರಂಜಿತ ಬಲ್ಬ್‌ಗಳಲ್ಲಿ 60 ಆಕೃತಿಗಳನ್ನು ರೂಪಿಸಿ ವಿವಿಧೆಡೆ ಅಳವಡಿಸಲಾಗುತ್ತಿದೆ. ಈಗಾಗಲೇ ದೀಪಾಲಂಕಾರಕ್ಕೆ ಸಿದ್ಧತೆ ಆರಂಭಿಸಲಾಗಿದ್ದು, ವಾರದೊಳಗೆ ಪೂರ್ಣ ಪ್ರಮಾಣದಲ್ಲಿ ದೀಪಾಲಂಕಾರ ಕಾಮಗಾರಿ ಪೂರ್ಣಗೊಳ್ಳಲಿದೆ.
> –ಕೆ.ಎಂ.ಮುನಿಗೋಪಾಲರಾಜ್, ವ್ಯವಸ್ಥಾಪಕ ನಿರ್ದೇಶಕ, ಸೆಸ್ಕ್



ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್ಸ್‌ಗಳು ಬೇಕಾಗಿದ್ದಾರೆ. ಸಂಬಳ: 25,000 ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.

8548089469/9164946160





ಸಿಎಂ ಭೇಟಿಯಾದ ಭಾರತಿ ವಿಷ್ಣುವರ್ಧನ್: ವಿಷ್ಣು ಸ್ಮಾರಕಕ್ಕೆ 10 ಗುಂಟೆ ಜಾಗಕ್ಕೆ ಮನವಿ

ಹಾಗೆಯೇ 'ಕರ್ನಾಟಕ ರತ್ನ' ಪ್ರಶಸ್ತಿಗೂ ಕೋರಿಕೆ



ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭಾರತಿ ವಿಷ್ಣುವರ್ಧನ್ ಮತ್ತು ಅನಿರುಧ್ ವಿಷ್ಣುವರ್ಧನ್ ಭೇಟಿ ಮಾಡಿದ್ದರು. ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಬೆಂಗಳೂರು, ಸೆ.3(ಕೆಎಂಶಿ)– ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಇಂದು ಭೇಟಿ ಮಾಡಿದ ಭಾರತಿ ವಿಷ್ಣುವರ್ಧನ್ ಮತ್ತು ಅನಿರುಧ್ ವಿಷ್ಣುವರ್ಧನ್, ಸರ್ಕಾರ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ 10 ಗುಂಟೆ ಜಾಗ ಮೀಸಲಿಡಬೇಕೆಂದು ಮನವಿ ಮಾಡಿದರು. ಕನ್ನಡ ಚಿತ್ರರಂಗದಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿದ ನಟ ವಿಷ್ಣುವರ್ಧನ್ ಅವರಿಗೆ ಮರಣೋತ್ತರ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ ಮಾಡಬೇಕು ಎಂದು ಮನವಿ ಸಹ ಮಾಡಿದರು.

ಕೇಂದ್ರ ಸರ್ಕಾರ, ಚುನಾವಣಾ ಆಯೋಗದ ವಿರುದ್ಧ ಎಸ್‌ಯುಸಿಐ ಪ್ರತಿಭಟನೆ

ಮತದಾರರ ಪಟ್ಟಿ ಪರಿಷ್ಕರಣೆ ಹೆಸರಲ್ಲಿ ಮತದಾನದ ಹಕ್ಕು ಕಸಿಯುತ್ತಿರುವ ಆರೋಪ



ಕೇಂದ್ರ ಸರ್ಕಾರ, ಚುನಾವಣಾ ಆಯೋಗ ಮತದಾರರ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ಸಾರ್ವಜನಿಕರ ಮತದಾನದ ಹಕ್ಕನ್ನು ಕಸಿದುಕೊಳ್ಳಲು ಯತ್ನಿಸುತ್ತಿವೆ ಎಂದು ಆರೋಪಿಸಿ ಎಸ್‌ಯುಸಿಐ ವತಿಯಿಂದ ಬುಧವಾರ ಮೈಸೂರಿನ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನಾ ಸಪ್ತಾಹ ನಡೆಸಲಾಯಿತು.

ಮೈಸೂರು, ಸೆ.3(ಜಿಎ)–ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗ ಮತದಾರರ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ಸಾರ್ವಜನಿಕರ ಮತದಾನದ ಹಕ್ಕನ್ನು ಕಸಿದುಕೊಳ್ಳಲು ಯತ್ನಿಸುತ್ತಿವೆ ಎಂದು ಆರೋಪಿಸಿ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಎಸ್‌ಯುಸಿಐ) ವತಿಯಿಂದ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನಾ ಸಪ್ತಾಹ ನಡೆಸಲಾಯಿತು.

ಬಿಹಾರದಲ್ಲಿ ನವೆಂಬರ್‌ನಲ್ಲಿ ವಿಧಾನ ಸಭಾ ಚುನಾವಣೆ ನಡೆಯಲಿದೆ. ಅದರ ಪೂರ್ವಭಾವಿ ತಯಾರಿಯಾಗಿ ಚುನಾವಣಾ ಆಯೋಗವು ಎಸ್‌ಐಆರ್ ಎಂಬ ಹೆಸರಿನ ಮತಪಟ್ಟಿ ಪರಿಷ್ಕರಣೆಯ ಕಾರ್ಯಕ್ಕೆ ಕೈಹಾಕಿದೆ. ಈ ಹಿಂದೆ ಆಯೋಗ ರಾಜ್ಯದಲ್ಲಿ 7.89 ಕೋಟಿ ಮತದಾರರು ಇದ್ದಾರೆ ಎಂದು ಹೇಳಿತ್ತು. ಈಗ ಮೊದಲ ಕರಡು ಪರಿಷ್ಕೃತ ಪಟ್ಟಿಯಲ್ಲಿ 65 ಲಕ್ಷ ಹೆಸರುಗಳನ್ನು ತೆಗೆದು 7.24 ಕೋಟಿ ಎಂದು ತೋರಿಸಲಾಗಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದೆ ಹೋದರೆ ಅಂತಹವರು ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಮೃತರು, ವಲಸೆ ಹೋದವರು, ಪೌರತ್ವದ ದಾಖಲೆ ನೀಡಲಾಗದವರನ್ನು ಪಟ್ಟಿಯಲ್ಲಿ ಸೇರಿಸಿಲ್ಲ ಎಂಬುದು ಚುನಾವಣಾ ಆಯೋಗದ ಸಮರ್ಥನೆ. ಪಟ್ಟಿಯಲ್ಲಿ ಹೆಸರಿಲ್ಲದೆ ಹೋದರೆ, ಮತದಾನದ ಹಕ್ಕು ಮಾತ್ರ ಹೋಗುವುದಿಲ್ಲ. ಅದು ವಾಸ್ತವದಲ್ಲಿ ಪೌರತ್ವವನ್ನೇ ನಿರಾಕರಿಸಿದಂತಾಗುತ್ತದೆ. ಮತಪಟ್ಟಿಯಲ್ಲಿ ಮೃತರು ಎಂದು ಘೋಷಿತರಾದವರೇ ಸ್ವತಹ ಆಯೋಗದ ಕಚೇರಿಗೆ ಆಗಮಿಸಿ ದೂರು ದಾಖಲಿಸಿದ ಘಟನೆಗಳು ಈ ಪರಿಷ್ಕರಣಾ ಕಾರ್ಯದ ಪೊಳ್ಳುತನ ಬಯಲು ಮಾಡಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಪೌರತ್ವದ ಮಾನದಂಡಗಳನ್ನು ಗುರುತಿಸುವುದು ಚುನಾವಣಾ ಆಯೋಗದ ಮುಖ್ಯ ಕರ್ತವ್ಯವಲ್ಲ, ಬದಲಾಗಿ, ಈ ಹಿಂದೆ, ತಾನೇ ಸೂಚಿಸಿರುವ ಗುರುತಿನ ದಾಖಲೆಗಳ ಮೂಲಕ ನಿಖರ ಮತದಾರರ ಪಟ್ಟಿ ತಯಾರಿಸಿ ಅದರ ಆಧಾರದ ಮೇಲೆ ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಸಬೇಕು ಎಂಬುದನ್ನು ಗಮನಿಸಬೇಕು. ಆದರೆ, ಅದಕ್ಕೆ ವ್ಯತಿರಿಕ್ತವಾಗಿ, ಎಸ್‌ಐಆರ್ ಮೂಲಕ ಆಯೋಗ ತದ್ವಿರುದ್ಧವಾಗಿ ಕೆಲಸ ಮಾಡುತ್ತಿದೆ. ಇದರಿಂದ ಉಂಟಾಗುವ ಪರಿಣಾಮ ವಿನಾಶಕಾರಿಯಾಗಿರುತ್ತವೆ ಎಂದರು.

ಈ ಷಡ್ಯಂತ್ರ ಪ್ರತಿರೋಧಿಸಲು ಪ್ರಜ್ಞಾಪೂರ್ವಕ ಸಂಘಟಿತ ಹೋರಾಟದ ಅಗತ್ಯ ವಿದೆ. ಆಳುವ ಪಕ್ಷಗಳ ಜನವಿರೋಧಿ ಸ್ವರೂಪವನ್ನು ನಾವು ಗುರುತಿಸಬೇಕು. ಈ ಅರಿವನ್ನು ಮೂಡಿಸುವುದು ಮತ್ತು ವಿಶಾಲ ಜನ ಚಳುವಳಿಗಳನ್ನು ಮತ್ತು ಜನ ಸಮಿತಿಗಳನ್ನು ರೂಪಿಸಬೇಕು. ಮತದಾರರ ಹಕ್ಕನ್ನು ಕಸಿದುಕೊಳ್ಳದಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಸಂಧ್ಯಾ ಪಿ.ಎಸ್, ಸೀಮಾ ಜಿ.ಎನ್, ಹರೀಶ್.ಹೆಚ್.ಎನ್, ಸುನಿಲ್.ಟಿ.ಆರ್, ಸುಮಾ, ಬಸವರಾಜ್, ಚಂದ್ರಕಲಾ, ಆಸಿಯಾ ಬೇಗಂ, ನೀತುಶ್ರೀ, ರಣಜಿತ್ ಧೂಪದ್, ಪುಷ್ಪ, ಪೂರ್ಣಿಮಾ ನಿತಿನ್, ಸ್ವಾತಿ, ಹೇಮಾಲತಾ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ರಿಯಾಯಿತಿಯಲ್ಲಿ ದಂಡ ಪಾವತಿಗೆ ವಾಹನ ಚಾಲಕರ ಉತ್ಸುಕತೆ

ಮೈಸೂರು ಜಿಲ್ಲೆಯಲ್ಲಿ ಒಂದೇ ದಿನ 3.32 ಲಕ್ಷ ದಂಡ ಸಂಗ್ರಹ



ಮೈಸೂರು, ಸೆ.3(ಬಿಎಲ್‌ಯು)– ಸಂಚಾರಿ ನಿಯಮ ಉಲ್ಲಂಘನೆಗೆ ಶೇ.50ರಷ್ಟು ರಿಯಾಯಿತಿ ನೀಡಿ ದಂಡ ಪಾವತಿಗೆ ಅವಕಾಶ ಕಲ್ಪಿಸಿರುವುದನ್ನು ವಾಹನ ಚಾಲಕರು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ನಿನ್ನೆ ಒಂದೇ ದಿನ ಮೈಸೂರು ಜಿಲ್ಲೆಯ ವಾಹನ ಚಾಲಕರು 3.32 ಲಕ್ಷ ರೂಪಾಯಿ ದಂಡ ಪಾವತಿ ಮಾಡಿದ್ದಾರೆ. ಶೇ.50ರಷ್ಟು ರಿಯಾಯಿತಿ ಬಳಸಿಕೊಂಡು ದಂಡ ಪಾವತಿ ಮಾಡುವಂತೆ ಪೊಲೀಸ್ ಇಲಾಖೆ ಟ್ವಿಟರ್, ಫೇಸ್ ಬುಕ್, ಕೆಎಸ್‌ಪಿಎಸ್ ಸೇರಿದಂತೆ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಜನರಲ್ಲಿ ಅರಿವು ಮೂಡಿಸಿದೆ.

ಸಂಚಾರ ನಿಯಮ ಉಲ್ಲಂಘನೆ ಮಾಡಿದಂತಹ ಮೈಸೂರು ಜಿಲ್ಲೆಯ ವಾಹನ ಚಾಲಕರು 1,323 ಚಲನ್‌ಗಳಲ್ಲಿ 3.32, 250 ರೂಪಾಯಿ ದಂಡ ಪಾವತಿ ಮಾಡಿದ್ದಾರೆ. ರಿಯಾಯಿತಿಯಲ್ಲಿ ದಂಡ ಪಾವತಿಗೆ ಸೆಪ್ಟೆಂಬರ್ 12 ಕೊನೆ ದಿನವಾಗಿದ್ದು, ಈ ಸಮಯದೊಳಗೆ ದಂಡ ಪಾವತಿಸಿ ಎಂದು ಮೈಸೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಲ್ಲಿಕ್, ವಾಹನ ಚಾಲಕರಿಗೆ ಸಲಹೆ ನೀಡಿದ್ದಾರೆ.

ನಾಗ, ಮಹಾರ್, ಹೊಲೆಯ, ಛಲವಾದಿ ಸಮುದಾಯದ ಸಾಂಸ್ಕೃತಿಕ, ಐತಿಹಾಸಿಕ ಹಿನ್ನೆಲೆ ಕುರಿತ ವಿಚಾರ ಸಂಕಿರಣ ನಾಳೆ

ಮೈಸೂರು, ಸೆ.3(ಜಿಎ)–ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ಹಾಗೂ ಮೈಸೂರು ವಿವಿ ಸಂಶೋಧಕರ ಸಂಘಗಳ ಸಂಯುಕ್ತಾಶ್ರಯದಲ್ಲಿ ಸೆ.5ರಂದು ಬೆಳಗ್ಗೆ 10.30ಕ್ಕೆ ಮೈಸೂರು ವಿವಿ ವಿಜ್ಞಾನ ಭವನದಲ್ಲಿ ನಾಗ, ಮಹಾರ್, ಹೊಲೆಯ, ಛಲವಾದಿ ಸಮುದಾಯದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಹಿನ್ನೆಲೆ ಕುರಿತ ಒಂದು ದಿನದ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಪಿ.ಎಂ.ನರೇಂದ್ರಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎ.ಆರ್.ಕೃಷ್ಣಮೂರ್ತಿ, ರಾಜ್ಯ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ.ಚಂದ್ರಶೇಖರಯ್ಯ, ನಿವೃತ್ತ ಇಂಜಿನಿಯರ್ ಹೆಚ್.ಆರ್.ಶಿವರಾಮು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು

11.15ಕ್ಕೆ ನಾಗ, ಮಹಾರ್, ಹೊಲೆಯ, ಛಲವಾದಿ ಸಮುದಾಯದ ಸಾಂಸ್ಕೃತಿಕ ಹಿನ್ನೆಲೆ ಮತ್ತು ಭೀಮಾ ಕೋರೆಗಾಂವ್ ಯುದ್ಧ ಕುರಿತು, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬೌದ್ಧ ಧರ್ಮ ಕುರಿತು, ನಂತರ ಡಾ.ಅಂಬೇಡ್ಕರ್ ಅವರು ಪ್ರತಿಪಾದಿಸಿದ ಬೇರ್ಪಟ್ಟ ಸಮುದಾಯದ ಸಿದ್ಧಾಂತ ಕುರಿತ ವಿಚಾರ ಮಂಡನೆ ನಡೆಯಲಿದೆ.

ಮೈಸೂರು ವಿವಿ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರೊಬ್ಬರು ಕಾರ್ಯಕ್ರಮವೊಂದರಲ್ಲಿ ಬೌದ್ಧರು, ಮಹಾರ್, ಕೋರೆಗಾಂವ್ ಯುದ್ಧ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಇದು ಖಂಡನೀಯ. ಅವರ ಹೇಳಿಕೆ ಕುರಿತು ತಾವು ಎಚ್ಚರಿಕೆ ನೀಡುತ್ತಿದ್ದೇವೆ. ಈ ಕಾರ್ಯಕ್ರಮ ಯಾವುದೇ ಜಾತಿ, ಧರ್ಮ, ವರ್ಗದ ವಿರುದ್ಧವಲ್ಲ. ಎಲ್ಲರನ್ನೂ ಒಟ್ಟಿಗೇ ಕರೆದೊಯ್ಯುವ ಉದ್ದೇಶ ಹೊಂದಿದೆ. ಎಡಗೈ, ಬಲಗೈನವರು ತಮ್ಮಲ್ಲಿನ ಭಿನ್ನಾಭಿಪ್ರಾಯ ಮರೆತು ಒಟ್ಟಿಗೇ ಸಾಗಬೇಕೆಂಬ ಸಂದೇಶ ನೀಡುತ್ತಿದೆ. ಅಂಬೇಡ್ಕರ್ ವಿರುದ್ಧ ಯಾರೇ ಮಾತನಾಡಿದರೂ ಅದರನ್ನು ಒಗ್ಗಟ್ಟಿನಿಂದ ಎದುರಿಸಬೇಕಾದ ಅಗತ್ಯವಿದೆ ಎಂದರು. ಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಸಿದ್ದಸ್ವಾಮಿ, ಮಂಜುನಾಥ್, ಪುಟ್ಟರಾಜು ಮತ್ತಿತರರು ಉಪಸ್ಥಿತರಿದ್ದರು.

ಒಡನಾಡಿ ಸೇವಾ ಸಂಸ್ಥೆಗೆ ವಿದೇಶಿ ದೇಣಿಗೆ ಬರುವುದು ಸತ್ಯ; ಈ ಸಂಬಂಧ ಇಡಿ ನಮಗೆ ನೋಟಿಸೇನು ನೀಡಿಲ್ಲ

ಒಡನಾಡಿ ಸಂಸ್ಥೆ ಸಂಸ್ಥಾಪಕ ಸ್ಟ್ಯಾನ್ಲಿ ಸ್ಪಷ್ಟನೆ



ಸ್ಟ್ಯಾನ್ಲಿ

ಮೈಸೂರು, ಸೆ.3(ಬಿಎಲ್‌ಯು)– ಒಡನಾಡಿ ಸೇವಾ ಸಂಸ್ಥೆಗೆ ಬರುತ್ತಿರುವ ವಿದೇಶಿ ದೇಣಿಗೆ ಕುರಿತಂತೆ ಇಡಿ (ಜಾರಿ ನಿರ್ದೇಶನಾಲಯ) ನಮಗೆ ಯಾವುದೇ ನೋಟಿಸ್ ನೀಡಿಲ್ಲ ಎಂದು ಸಂಸ್ಥೆಯ ಸಂಸ್ಥಾಪಕ ಸ್ಟ್ಯಾನ್ಲಿ ಸ್ಪಷ್ಟಪಡಿಸಿದರು.

ನಮ್ಮ ಸಂಸ್ಥೆಗೆ ವಿದೇಶಿ ದೇಣಿಗೆ ಬರುವುದು ಸತ್ಯ. ಆದರೆ ಯಾವ ಉದ್ದೇಶಕ್ಕೆ ನೀಡಲಾಗಿದೆಯೋ ಅದನ್ನು ಅದಕ್ಕೆ ಬಳಕೆ ಮಾಡುತ್ತಿದ್ದೇವೆ. ವಿದೇಶಿ ದೇಣಿಗೆಯನ್ನು ಮನ ಬಂದಂತೆ ಖರ್ಚು ಮಾಡುವುದಿಲ್ಲ ಎಂದು ಸ್ಪಷ್ಟನೆ ನೀಡಿದರು.

ವಿದೇಶಿ ದೇಣಿಗೆ ಬರುವುದು ಅಷ್ಟು ಸುಲಭದ ಕೆಲಸವಲ್ಲ. ಇಲ್ಲಿ ಕೆಲವರು ಬಡ್ಡಿ ವ್ಯವಹಾರ ಮಾಡಿದಂತೆ ವಿದೇಶಿ ದೇಣಿಗೆ ಬರುತ್ತದೆ ಎಂದು ಭಾವಿಸಿದ್ದಾರೆ. ಆದರೆ ವಿದೇಶಿ ದೇಣಿಗೆಯನ್ನು ಕಾನೂನು ಬದ್ಧವಾಗಿ ನೀಡಲಾಗುತ್ತಿದೆ ಎಂದರು.

ಒಂದೇ ಬಾರಿಗೆ ಪೂರ್ಣ ಪ್ರಮಾಣದಲ್ಲಿ ವಿದೇಶಿ ದೇಣಿಗೆ ಬರುವುದಿಲ್ಲ. ಹಲವು ಕಂತುಗಳಲ್ಲಿ ನೀಡಲಾಗುತ್ತದೆ. ಜೊತೆಗೆ ಅವರು ಕೊಟ್ಟ ಹಣಕ್ಕೆ ಆಗಾಗ ನಾವು ಲೆಕ್ಕ ನೀಡಬೇಕು. ಇಲ್ಲವೆಂದರೆ ನಮ್ಮ ಲೈಸನ್ಸ್ ರದ್ದಾಗುತ್ತದೆ ಎಂದು ತಿಳಿಸಿದರು.

ಇಷ್ಟೆಲ್ಲಾ ಪಾರದರ್ಶಕತೆ ಹಾಗೂ ಕಾನೂನು ನಿಯಮ ಇರುವಾಗ ನಮಗೆ ಸುಲಭವಾಗಿ ವಿದೇಶಿ ದೇಣಿಗೆ ಬರುತ್ತದೆ ಎಂದು ಹೇಳುವುದು ಶುದ್ಧ ಸುಳ್ಳು ಎಂದರು.

ಇಲ್ಲಿಯವರೆಗೆ ಇಡಿಯವರು ನಮಗೆ ಯಾವುದೇ ನೋಟಿಸ್ ನೀಡಿಲ್ಲ. ಒಂದು ವೇಳೆ ನಮ್ಮ ಸಂಸ್ಥೆಗೆ ಭೇಟಿ ನೀಡಿ, ಪರಿಶೀಲನೆ ಮಾಡಿದರೆ ಅದನ್ನು ಸ್ವಾಗತಿಸುತ್ತೇವೆ. ಯಾವುದೇ ತಪ್ಪು ಮಾಡದಿರುವಾಗ ನಾವೇಕೆ ಹೆದರಬೇಕು ಎಂದು ಸ್ಟ್ಯಾನ್ಲಿ ಹೇಳಿದರು.

ಜಾರಿ ನಿರ್ದೇಶನಾಲಯದವರು ಫೆಮಾ ಮತ್ತು ಫೆರಾ ಕಾಯ್ದೆಯಡಿ ಒಡನಾಡಿ ಮತ್ತು ಸಂವಾದ ಸಂಸ್ಥೆಗಳ ಹಣಕಾಸು ವ್ಯವಹಾರದ ಬಗ್ಗೆ ತನಿಖೆ ನಡೆಸುತ್ತಿದೆ ಎನ್ನಲಾಗಿದೆ. ಈ ಎನ್‌ಜಿಒಗಳ ಐದು ವರ್ಷದ ಬ್ಯಾಂಕ್ ವ್ಯವಹಾರ ಸೇರಿದಂತೆ ಇತರೆ ಆದಾಯ ಮೂಲವನ್ನು ಕೆದಕುತ್ತಿದೆ ಎಂದು ತಿಳಿದು ಬಂದಿದೆ.

ಆದರೆ ಈ ಆರೋಪವನ್ನು ಸಾರಾಸಗಟಾಗಿ ತಿರಸ್ಕರಿಸಿರುವ ಸ್ಟ್ಯಾನ್ಲಿ, ಯಾವ ಉದ್ದೇಶಕ್ಕೆ ವಿದೇಶಿ ದೇಣಿಗೆ ನೀಡಲಾಗಿದೆಯೋ ಅದಕ್ಕೆ ಮಾತ್ರ ಬಳಸುತ್ತಿದ್ದೇವೆ. ಈ ಮೂಲಕ ವಿದೇಶಿ ದೇಣಿಗೆಯನ್ನು ನಾವು ದುರ್ಬಳಕೆ ಮಾಡಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ದೇಶದಲ್ಲಿ ಅನ್ಯಾಯ ನಡೆಯುವಾಗ ನ್ಯಾಯ ಕೇಳಿದರೆ ಅಂತಿಮವಾಗಿ ಧರ್ಮ ದಂಗಲ್ ನಡೆಸಲಾಗುತ್ತದೆ. ಜಾತೀಯತೆಯ ಬಣ್ಣ ಕಟ್ಟುತ್ತಾರೆ. ಆದರೆ ನಾವು ಯಾರ ಪರ ಅಥವಾ ಯಾರ ವಿರುದ್ಧವೂ ಇಲ್ಲ. ಅನ್ಯಾಯಕ್ಕೊಳಗಾದ ಹೆಣ್ಣು ಮಕ್ಕಳಿಗೆ ನ್ಯಾಯ ದೊರಕಿಸುವುದೇ ನಮ್ಮ ಮೂಲ ಉದ್ದೇಶ ಎಂದು ಹೇಳಿದರು.

ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಪವಿತ್ರೋತ್ಸವ

ಮೈಸೂರು: ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಬುಧವಾರದಿಂದ ಪವಿತ್ರೋತ್ಸವ ಪ್ರಾರಂಭವಾಗಿದ್ದು, ಸೆ.9ರವರೆಗೆ ನಡೆಯಲಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ತಿಳಿಸಿದ್ದಾರೆ.

ಸೆ.21ರಂದು ಮಹಾಲಯ ಅಮಾವಾಸ್ಯೆ ಅಂಗವಾಗಿ ವಿಶೇಷ ಪೂಜೆ ನಡೆಯಲಿದೆ. ಅಂದು ಬೆಳಗ್ಗೆ 7ಗಂಟೆಗೆ ಅಭಿಷೇಕ ನಡೆಯಲಿದ್ದು, ರಾತ್ರಿ 8ಗಂಟೆಗೆ ಪ್ರಸಾದ ವಿನಿಯೋಗ ಮಾಡಲಾಗುವುದು. ಇದೇ ರೀತಿ ಸೆ.25ರಂದು 'ಸ್ವಾತಿ ನಕ್ಷತ್ರ' ವಿಶೇಷ ಪೂಜೆ ಏರ್ಪಡಿಸಲಾಗಿದ್ದು, ಅಂದು ಬೆಳಗ್ಗೆ 9 ಗಂಟೆಗೆ ಅಭಿಷೇಕ ಆರಂಭವಾಗಿ, ಮಧ್ಯಾಹ್ನ 12 ಗಂಟೆಗೆ ಪ್ರಸಾದ ವಿನಿಯೋಗಿಸಲಾಗುವುದು ಎಂದು ಅವರು ತಿಳಿಸಿದ್ದಾರೆ. ವಿವರಗಳಿಗಾಗಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಅವರನ್ನು ಮೊ.9900400000 ಸಂಪರ್ಕಿಸಲು ಕೋರಲಾಗಿದೆ.

ಸದಸ್ಯರ ಸಭೆ ಕರೆಯದೆ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ ಶತಮಾನೋತ್ಸವ

ಬ್ಯಾಂಕ್ ಸದಸ್ಯ ಟಿ.ಗೋಪಾಲ್ ಆರೋಪ

ಮೈಸೂರು, ಸೆ.3(ಜಿಎ)–ಮೈಸೂರು ದಿ.ರೈಲ್ವೆ ಕೋ ಆಪರೇಟಿವ್ ಬ್ಯಾಂಕ್‌ನ ಸರ್ವ ಸದಸ್ಯರ ಸಭೆ ಕರೆಯದೆ ಬ್ಯಾಂಕಿನ ಶತಮಾನೋತ್ಸವ ಸಮಾರಂಭವನ್ನು ಸೆ.6ರಂದು ಆಯೋಜಿಸಿದ್ದು, ಈ ಸಮಾರಂಭವನ್ನು ಬಹಿಷ್ಕರಿಸುತ್ತಿದ್ದೇವೆ ಎಂದು ಬ್ಯಾಂಕ್‌ನ ಸದಸ್ಯ ಟಿ.ಗೋಪಾಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಡಳಿತ ಮಂಡಳಿ ಸರ್ವ ಸದಸ್ಯರ ಗಮನಕ್ಕೆ ತರದೆ ಏಕಾಏಕಿ ಈ ಸಮಾರಂಭ ಆಯೋಜನೆ ಮಾಡಿದೆ. ಜೊತೆಗೆ ಸೆ.6 ಶನಿವಾರ ಅಂದು ಯಾವುದೇ ರಜೆ ಇರುವುದಿಲ್ಲ. 24X7 ರೈಲ್ವೆ ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಅವರು ಹೇಗೆ ಸಮಾರಂಭಕ್ಕೆ ಬರಲು ಸಾಧ್ಯ? ಇಂತಹ ಸಾಮಾನ್ಯ ಜ್ಞಾನ ಆಡಳಿತ ಮಂಡಳಿಯವರಿಗೆ ಹಾಗೂ ಕಾರ್ಯನಿರ್ವಾಹಣಾಧಿಕಾರಿಗೆ ಇಲ್ಲವಾಯಿತೆ ಎಂದು ಪ್ರಶ್ನಿಸಿದರು.

ಸಮಾರಂಭಕ್ಕೆ 3–4 ದಿನ ಇರುವಾಗ ಸದಸ್ಯರ ಮೊಬೈಲ್‌ಗೆ ಮೆಸೇಜ್ ಕಳುಹಿಸಿದ್ದಾರೆ. ನಿಯಮದಂತೆ ಎಲ್ಲಾ ಸದಸ್ಯರ ಮನೆಗಳಿಗೆ ಆಹ್ವಾನ ಪತ್ರಿಕೆಯನ್ನು ಪೋಸ್ಟ್ ಮೂಲಕ ಅಥವಾ ಖುದ್ದು ನೀಡಬೇಕಿತ್ತು. ಆದರೆ ಅದ್ಯಾವುದನ್ನು ಮಾಡಿಲ್ಲ ಎಂದು ಆರೋಪಿಸಿದರು.

ಬ್ಯಾಂಕ್‌ನಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದ್ದು ಈ ಸಂಬಂಧ ಸಹಕಾರ ಇಲಾಖೆಗೆ ಹಲವಾರು ಸದಸ್ಯರು ದೂರು ನೀಡಿದ್ದಾರೆ. ಆದರೆ ಇದೂವರೆಗೂ ಕ್ರಮ ಆಗಿಲ್ಲ. ಬ್ಯಾಂಕ್‌ನಲ್ಲಿ ವಾರ್ಷಿಕ 650 ಕೋಟಿ ರೂ. ವಹಿವಾಟು ಇದೆ. ಇದನ್ನು ಆಡಳಿತ ಮಂಡಳಿಯ ಕೆಲವರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಸರ್ವ ಸದಸ್ಯರ ಸಭೆ ಕರೆದರೆ ತಮ್ಮ ಭ್ರಷ್ಟಾಚಾರ ಬಯಲುಗೊಳ್ಳಲಿದೆ ಎಂಬ ಉದ್ದೇಶದಿಂದ ಸದಸ್ಯರ ಗಮನಕ್ಕೆ ತರದೆ ಸಮಾರಂಭ ಆಯೋಜನೆ ಮಾಡಿದ್ದಾರೆ. ಸೆ.7ರಂದು ಸರ್ವಸದಸ್ಯರ ಸಭೆ ಕರೆದಿದ್ದಾರೆ ಎಂದರು.

ರಾಜ್ಯ ಸರ್ಕಾರ ಮತ್ತು ಸಹಕಾರ ಇಲಾಖೆ ಕೂಡಲೇ ಮಧ್ಯಪ್ರವೇಶಿಸಿ ಬ್ಯಾಂಕ್‌ನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸಿ ಸದಸ್ಯರಿಗೆ ನ್ಯಾಯ ದೊರಕಿಸಿ ಕೊಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬ್ಯಾಂಕ್‌ನ ಸದಸ್ಯರಾದ ವೆಂಕಟೇಶ್ ನಾಯ್ಕ, ಇಮಾಮ್ ಸಾಬ್ ಧಾರವಾಡ, ಶೇಷಾದ್ರಿ ಇದ್ದರು.

ಮೈಸೂರು ದಸರಾ ವೇಳೆ ಪ್ರಯಾಣಿಕರ ಅನುಕೂಲಕ್ಕಾಗಿ ರೈಲುಗಳ ತಾತ್ಕಾಲಿಕ ನಿಲುಗಡೆ



ಮೈಸೂರು, ಸೆ.3(ಬಿಎಲ್‌ಯು)– ವಿಶ್ವವಿಖ್ಯಾತ ಮೈಸೂರು ದಸರಾ ಹಬ್ಬದ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆ ನಿವಾರಿಸಲು ಮತ್ತು ಪ್ರಯಾಣಿಕರ ಅನುಕೂಲಕ್ಕಾಗಿ ಸೆಪ್ಟೆಂಬರ್ 23ರಿಂದ ಅಕ್ಟೋಬರ್ 2ರವರೆಗೆ ಕೆಲವು ರೈಲುಗಳಿಗೆ ತಾತ್ಕಾಲಿಕ ನಿಲುಗಡೆ ನೀಡಲಾಗುವುದು ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಮೈಸೂರು–ಶಿವಮೊಗ್ಗ ಟೌನ್ ನಡುವಿನ ಮೈಸೂರು ಎಕ್ಸ್‌ಪ್ರೆಸ್ ರೈಲು ಬೆಳಗೊಳ, ಕೃಷ್ಣರಾಜ ಸಾಗರ, ಕಲ್ಲೂರು, ಎಡಹಳ್ಳಿ, ಸಾಗರಕಟ್ಟೆ, ಡೋರನಹಳ್ಳಿ, ಹಂಪಾಪುರ, ಅರ್ಜನಹಳ್ಳಿ, ಹೊಸ ಅಗ್ರಹಾರ ಮತ್ತು ಮಾವಿನಕೆರೆ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ಮೈಸೂರು–ತಾಳಗುಪ್ಪ ನಡುವಿನ ಮೈಸೂರು ಎಕ್ಸ್‌ಪ್ರೆಸ್ ರೈಲು ಕೃಷ್ಣರಾಜ ಸಾಗರ, ಕಲ್ಲೂರು, ಎಡಹಳ್ಳಿ, ಡೋರನಹಳ್ಳಿ, ಹಂಪಾಪುರ ಮತ್ತು ಅರ್ಜುನಹಳ್ಳಿಯಲ್ಲಿ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಮೈಸೂರು– ಬೆಳಗಾವಿ ನಡುವಿನ ಮೈಸೂರು ಎಕ್ಸ್‌ಪ್ರೆಸ್ ರೈಲು ಬೆಳಗೊಳ, ಸಾಗರಕಟ್ಟೆ, ಹೊಸ ಅಗ್ರಹಾರ, ಅಕ್ಕಿ ಹೆಬ್ಬಾಳು, ಬೀರಹಳ್ಳಿ, ಮಂದಗೆರೆ ಮತ್ತು ಮಾವಿನ ಕೆರೆ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ನಾಡಹಬ್ಬ ಮೈಸೂರು ದಸರಾ ಹಬ್ಬದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ತಾತ್ಕಾಲಿಕ ನಿಲುಗಡೆಯ ಅವಕಾಶ ಕಲ್ಪಿಸಿದ್ದು, ಇದನ್ನು ಸದುಪಯೋಗ ಮಾಡಿಕೊಳ್ಳುವಂತೆ ನೈರುತ್ಯ ರೈಲ್ವೆ ಇಲಾಖೆಯ ಅಧಿಕಾರಿಗಳು ಸಲಹೆ ನೀಡಿದ್ದಾರೆ.

ಸೆ.7ರಂದು ಗ್ರಹಣ ಶಾಂತಿ, ಶನಿ ಶಾಂತಿ

ಮೈಸೂರು, ಸೆ.3– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಸೆ.7ರಂದು ಭಾನುವಾರ ಹುಣ್ಣಿಮೆ ಪ್ರಯುಕ್ತ ಶನಿ ಮಹಾಶಾಂತಿಯನ್ನು ಮೇಷ, ಸಿಂಹ, ವೃಶ್ಚಿಕ, ಕುಂಭ, ಮೀನಾ ರಾಶಿಯವರಿಗೆ ವಿಶೇಷವಾಗಿ ಶನಿ ಮಹಾಶಾಂತಿ ಮಾಡಲಾಗುವುದು. ಇದಲ್ಲದೆ ಮಹಾ ಮೃತ್ಯುಂಜಯ ಹೋಮ, ಕುಜ ಶಾಂತಿ, ರಾಹು ಶಾಂತಿ ಮತ್ತು ಬಾಧಾನಿವಾರಕ ಸುದರ್ಶನ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ಬೆಳಿಗ್ಗೆ 9.30ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 12.30ಕ್ಕೆ ಮಹಾಪೂರ್ಣಾಹುತಿಯಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ




ಮಾಲ್ಕಮ್ ಫೆಲಿಕ್ಸ್ ಲೋಪೆಜ್

ಮೈಸೂರು, ಸೆ. 3–ಮೈಸೂರಿನ ಚಾಮುಂಡಿಪುರಂ ನಿವಾಸಿ ಮಾಲ್ಕಮ್ ಫೆಲಿಕ್ಸ್ ಲೋಪೆಜ್ (76) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.


ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಮ್ಮೆಸಲ್ಮಾ



ಮೈಸೂರಿನ ಶಾಂತಿನಗರದ ಮಹದೇವಪುರ ಮುಖ್ಯ ರಸ್ತೆ ನಿವಾಸಿ ಎಸ್. ಅಪ್ಸರ್ ಪಾಷಾ ಅವರ ಪತ್ನಿ ಉಮ್ಮೆಸಲ್ಮಾ (51) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಮುಸ್ಲಿಮರ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.09.2025 ಗುರುವಾರ, ಮಳೆ ನಕ್ಷತ್ರ: ಪುಬ್ಬ 31.08.2025 ರಿಂದ 13.09.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನ ಸೋಂಕು ಮತ್ತು ಕಣ್ಣಿನಲ್ಲಿ ಮಾಂಸ ಬೆಳವಣಿಗೆ ಶಿಬಿರ– ಕಣ್ಣು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ಸೋರುವುದು, ಕಣ್ಣು ತುರಿಸುವುದು, ಶುಷ್ಕ ನೇತ್ರ, ಆಭರಣ ಮತ್ತು ಸೌಂದರ್ಯ ವರ್ಧಕಗಳಿಂದ ಆಗಿರುವ ಚರ್ಮದ ಅಲರ್ಜಿ ಮತ್ತು ಚರ್ಮಕ್ಕೆ ಸಂಬಂಧಪಟ್ಟ ಕಾಯಿಲೆಗೆ ಚಿಕಿತ್ಸೆ, ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ಸಾಂಸ್ಕೃತಿಕ–ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಅಧ್ಯಕ್ಷತೆ: ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬ ಶಿವಯ್ಯ, ಮುಖ್ಯ ಅತಿಥಿಗಳು: ರಾಷ್ಟ್ರ ಮಟ್ಟದ ಹಾಕಿ ಪಟು ಕು.ಎಸ್.ಪಿ. ಕೃತಿಕ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಪ್ರಭು, ಸ್ಥಳ: ಸುವರ್ಣ ಮಹೋತ್ಸವ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ

■ **ದಸರಾ ಲಲಿತಕಲೆ ಮತ್ತು ಕರಕುಶಲ ಕಲೆ ಉಪಸಮಿತಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು :** ಟೆರಾಕೋಟಾ ಭಿತ್ತಿ ಶಿಲ್ಪಕಲಾ ಶಿಬಿರ, ಸ್ಥಳ: ಕಾವಾ ಕಾಲೇಜು ಆವರಣ, ಬೆಳಗ್ಗೆ 11.30 ರಿಂದ.

■ **ಶ್ರೀ ಹೊಸಮಠ, ಶ್ರೀ ನಟರಾಜ ಪ್ರತಿಷ್ಠಾನ :** ನಿರಂಜನ ಪಟ್ಟಾಧಿಕಾರ ಮಹೋತ್ಸವ, ಶ್ರೀ ಚಿದಾನಂದ ಮಹಾಸ್ವಾಮಿಗಳವರ ಅಮೃತ ಮಹೋತ್ಸವದ ಗುರುವಂದನೆ, ಚಿದ್ಬೆಳಕು ಗ್ರಂಥ ಮತ್ತು ಚಿದಾಮೃತ ಚಿತ್ರ ಸಂಪುಟ ಲೋಕಾರ್ಪಣೆ, ಬೆಳಗ್ಗೆ 4ಕ್ಕೆ ಎಂ.ಬಿ.ರಾಕೇಶ್‌ಗೆ ಶಿವದೀಕ್ಷೆ : ಶ್ರೀ ಉಕ್ಕಿನಕಂತೆ ಮಠದ ಶ್ರೀ ಸಾಂಬಸದಾಶಿವ ಸ್ವಾಮಿಗಳು, ಬೆಳಗ್ಗೆ 6.30ಕ್ಕೆ ಷಟ್‌ಸ್ಥಲ ಧ್ವಜಾರೋಹಣ : ಶ್ರೀ ನೀಲಕಂಠಸ್ವಾಮಿ ಮಠದ ಶ್ರೀ ಸಿದ್ಧಮಲ್ಲಸ್ವಾಮಿಗಳು, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಶ್ರೀ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿ, ಗುರುವಂದನೆ: ಶ್ರೀ ಚಿದಾನಂದ ಸ್ವಾಮೀಜಿ, ಆಶೀರ್ವಚನ: ಶ್ರೀ ಮಹಾಂತ ಸ್ವಾಮೀಜಿ, ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಕೇಂದ್ರ ಸಚಿವ ವಿ.ಸೋಮಣ್ಣ, ತ್ರೈಮಾಸಿಕ ಸಂಚಿಕೆ ಬಿಡುಗಡೆ: ಶ್ರೀ ಗುರುಮಹಾಂತಸ್ವಾಮೀಜಿ, ಚಿದ್ಬೆಳಕು ಗ್ರಂಥ ಲೋಕಾರ್ಪಣೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಚಿದಾಮೃತ ಚಿತ್ರ ಸಂಪುಟ ಲೋಕಾರ್ಪಣೆ: ಶಾಸಕ ಜಿ.ಟಿ.ದೇವೇಗೌಡ, ಗುರುವಂದನಾ ನುಡಿ: ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ಶಾಸಕರಾದ ಹೆಚ್.ಎಂ. ಗಣೇಶ್ ಪ್ರಸಾದ್, ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಸ್.ಎ.ರಾಮದಾಸ್, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಹಿನಕಲ್ ಬಸವರಾಜು, ಬಸವ ಬಳಗಗಳ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷ ಪ್ರದೀಪ್‌ಕುಮಾರ್, ಸ್ಥಳ: ಶ್ರೀ ಹೊಸಮಠ ಆವರಣ, ಬೆಳಗ್ಗೆ 10.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್ :** 64ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ಗಮಕ ವಾಚನ ಕಾರ್ಯಕ್ರಮ, ಕಾವ್ಯ : ಮನುಚೋಳ ರಗಳೆ, ವಾಚನ : ವಿದುಷಿ ಶುಭ ರಾಘವೇಂದ್ರ, ವ್ಯಾಖ್ಯಾನ: ಪ್ರೊ. ಮೊರಬದ ಮಲ್ಲಿಕಾರ್ಜುನ, ಸಂಜೆ 6.45 ರಿಂದ ವಿದ್ವಾನ್ ಅಭಿಷೇಕ್ ರಘುರಾಮ್ ಅವರಿಂದ ಗಾಯನ, ವಿದ್ವಾನ್ ಶ್ರುತಿ ಸಾಗರ್–ಕೊಳಲು, ವಿದ್ವಾನ್ ಸುಮೇಶ್ ನಾರಾಯಣ್–ಮೃದಂಗ, ವಿದ್ವಾನ್ ವಾಜಪಲ್ಲಿ ಕೃಷ್ಣಕುಮಾರ್–ಘಟಂ, ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

■ **ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಇಂಜಿನಿಯರ್ಸ್ ಡೇ ಆಚರಣೆ, ಶ್ರೀಮತಿ ಭ್ರಮರ ಬಹದ್ದೂರ್ ಮತ್ತು ಡಾ. ಎಂ.ಜಿ.ಆರ್. ಅರಸ್ ಅವರಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತು ವಿಶೇಷ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಸಂಜೆ 5.30ಕ್ಕೆ.

■ **ನೃತ್ಯ ವಿದ್ಯಾ ಪೀಠ, ಅಕಾಡೆಮಿ ಆಫ್ ಕ್ಲಾಸಿಕಲ್ ಡ್ಯಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್ :** ನರ್ತನ ದೀಪ್ತಿ–2025, ಧರ್ಮ ಬೋಧನೆ, ಮುಖ್ಯ ಅತಿಥಿಗಳು : ನೃತ್ಯ ಮಂಟಪ ಟ್ರಸ್ಟ್ ನಿರ್ದೇಶಕರಾದ ನಾಟ್ಯಶ್ರೀ ವಿದುಷಿ ರೂಪ ಉಪಾಧ್ಯ, ಉಪಸ್ಥಿತರು : ಸ್ವರ್ಣ ಶಿಕ್ಷಣ ಸಂಸ್ಥೆ, ಹೊಳೆನರಸೀಪುರ ಪ್ರಿನ್ಸಿಪಾಲ್ ಶ್ರೀಮತಿ ಶೋಭಾ ಬಾಲಕೃಷ್ಣ, ಎಲ್ ಅಂಡ್ ಟಿ ಟೆಕ್ನಾಲಜೀಸ್ ಸರ್ವೀಸಸ್ ವ್ಯವಸ್ಥಾಪಕರಾದ ಶ್ರೀಮತಿ ಜಿ.ಕೆ. ಕಮಲ, ನೃತ್ಯ ವಿದ್ಯಾಪೀಠ ಸಂಸ್ಥಾಪಕ ನಿರ್ದೇಶಕ ಗುರು ವಿದುಷಿ ಸಿ.ಎನ್. ಅನಿತಾ, ಮಹರ್ಷಿ ಪದವಿಪೂರ್ವ ಕಾಲೇಜು ಉಪನ್ಯಾಸಕ ಎನ್. ಧನಂಜಯ ಅವರಿಂದ ಧರ್ಮ ಮತ್ತು ರಂಗಭೂಮಿ ಕುರಿತು ಪ್ರವಚನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 5.45ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊ.ಸಿ.ನಾಗಣ್ಣ, ನಿರ್ಮಾಣ: ಜಿ.ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಜಯಂತಿ ವಿ.ಭಟ್ ಮತ್ತು ಎಂ.ಎ.ಜ್ಯೋತಿ, ವ್ಯಾಖ್ಯಾನ: ಡಾ.ಬಿ.ವಿ.ವಸಂತಕುಮಾರ್, 6.50–ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ.ಎಸ್.ರಾಮನಾಥನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ ನಿವೃತ್ತ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ಕೆ.ಹೆಚ್.ವಿನಯ್‌ಕುಮಾರ್, ಪ್ರಸ್ತುತಿ: ಶಾಂತಕುಮಾರ್ .ಜಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯರಾಗ, 6.50 ಕೃಷಿರಂಗ–ಮಂಡ್ಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕಾರ್ಯಚಟುವಟಿಕೆಗಳನ್ನ ಕುರಿತು ಸಂವಾದ, ಭಾಗವಹಿಸುತ್ತಾರೆ– ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರಾದ ಜಿ.ಟಿ.ಸೌಮ್ಯಶ್ರೀ ಹಾಗೂ ಮಂಡ್ಯ ತಾಲೂಕು ದುದ್ದ ಹೋಬಳಿ ಹುಲ್ಲೇನಹಳ್ಳಿಯ ಸಿ.ವಿ. ಅರ್ಪಿತಾ, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಫಾಲಗಾಟ್ ಕೆ.ವಿ. ನಾರಾಯಣ ಸ್ವಾಮಿ–ಹಾಡುಗಾರಿಕೆ, 10.00 ರಾಷ್ಟ್ರೀಯ ಪ್ರಾದೇಶಿಕ ಲಘು ಸಂಗೀತ ಕಾರ್ಯಕ್ರಮ

500 ಕೆಜಿ ಭಾರ ಹೊತ್ತು ಸಲೀಸಾಗಿ ಸಾಗಿದ ಅಭಿಮನ್ಯು



• ದಣಿವಿಲ್ಲದೆ ಗಾಂಭೀರ್ಯದ ಹೆಜ್ಜೆ ಹಾಕುತ್ತ ಗಮನ ಸೆಳೆದ ಗಜಪಡೆಯ ಕ್ಯಾಪ್ಟನ್ • ದಸರಾ ಗಜಪಡೆಗೆ ಭಾರ ಹೊರುವ ತಾಲೀಮು ಆರಂಭ

ಅರಮನೆ ಆವರಣದಲ್ಲಿ ಭಾರ ಹೊರುವ ತಾಲೀಮು ವೇಳೆ ಸೊಂಡಿಲು ಎತ್ತಿ ಹರ್ಷೋದ್ಗಾರದ ಭಾವ ವ್ಯಕ್ತಪಡಿಸಿದ ಅಭಿಮನ್ಯು.

ಮೈಸೂರು,ಸೆ.3(ಪಿಎಂ)– ದಸರಾ ಗಜಪಡೆಯ ನಾಯಕ ಅಭಿಮನ್ಯು ಸುಮಾರು 500 ಕೆಜಿ ಭಾರ ಹೊತ್ತು ಸಲೀಸಾಗಿ ಸಾಗಿತು. ಯಾವುದೇ ದಣಿವರಿಯದೇ ಗಾಂಭೀರ್ಯದ ಹೆಜ್ಜೆ ಹಾಕಿ ಅರಮನೆ ಆವರಣದಿಂದ ಬನ್ನಿ ಮಂಟಪದ ಪಂಜಿನ ಕವಾಯತು ತಲುಪಿತು. ಆ ಮೂಲಕ ವಿಜಯದಶಮಿ ಮೆರವಣಿಗೆಯಲ್ಲಿ 750 ಕೆಜಿ ಅಂಬಾರಿ ಸೇರಿದಂತೆ ಒಟ್ಟು ಸಾವಿರ ಕೆಜಿ ಹೊತ್ತು ಸಾಗುವ ಅಭಿಮನ್ಯುವಿಗೆ ಭಾರ ಹೊತ್ತು ಸಾಗುವ ತಾಲೀಮು ಆರಂಭಿಸಲಾಯಿತು.

ಈ ಬಾರಿಯ ದಸರಾ ಮಹೋತ್ಸವದ ಉದ್ಘಾಟನೆಗೆ ದಿನಗಣನೆ ಆರಂಭಗೊಂಡಿದ್ದು, ಜಂಬೂಸವಾರಿ ಮೆರವಣಿಗೆಗೆ ಗಜಪಡೆಯನ್ನು ಸಜ್ಜುಗೊಳಿಸಲಾಗುತ್ತಿದೆ. ಅಂತೆಯೇ ಬುಧವಾರ ಸಂಜೆ ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯ ಸಮೀಪದಲ್ಲಿ ಕುಮ್ಕಿ ಆನೆಗಳಾದ ಕಾವೇರಿ ಹಾಗೂ ಹೇಮಾವತಿ ಮಧ್ಯದಲ್ಲಿ ಅಭಿಮನ್ಯು ನಿಲ್ಲಿಸಿ ಪೂಜಾ ವಿಧಿವಿಧಾನ ನೆರವೇರಿಸುವ ಮೂಲಕ ಭಾರ ಹೊರುವ ತಾಲೀಮಿಗೆ ಚಾಲನೆ ನೀಡಲಾಯಿತು.

ಈ ಮೂರು ಆನೆಗಳ ಕಾಲು ತೊಳೆದು ಅರಿಶಿನ–ಕುಂಕುಮ ಹಚ್ಚಿ ಪಂಚಫಲ ನೀಡುವ ಮೂಲಕ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ಪೂಜಾ ಕೈಂಕರ್ಯ ನಡೆಸಿದರು. ಸಾಂಪ್ರದಾಯಿಕ ಪೂಜೆ ಬಳಿಕ ಮಾವುತರು, ಕಾವಾಡಿಗಳು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಸೂಚನೆಯಂತೆ ಮಂಡಿಯೂರಿ ಕುಳಿತ ಅಭಿಮನ್ಯು ಅತ್ಯಂತ ಸಮಾಧಾನವಾಗಿ ತನ್ನ ಬೆನ್ನಿನ ಮೇಲೆ ಗಾದಿ, ನಮ್ದಾವನ್ನು ಕಟ್ಟಿಸಿಕೊಂಡಿತು. ಕುಮ್ಕಿ ಆನೆಗಳಾದ ಕಾವೇರಿ ಹಾಗೂ ಹೇಮಾವತಿ ಮೇಲೆಯೂ ಹಗುರವಾದ ಗಾದಿ ಮತ್ತು ನಮ್ದಾ ಕಟ್ಟಲಾಯಿತು.

200 ಕೆಜಿ ತೂಕ ಹೊಂದಿರುವ ಗಾದಿ, ನಮ್ದಾ ಎರಡನ್ನೂ ಅಭಿಮನ್ಯು ಬೆನ್ನಿನ ಮೇಲೆ ಬಿಗಿಯಾಗಿ ಕಟ್ಟಿದ ಬಳಿಕ ಕಬ್ಬಿಣದ ತೊಟ್ಟಿಲು ಸಹ ಕಟ್ಟಿ ಅದರೊಳಗೆ ಒಟ್ಟು 300 ಕೆಜಿ ತೂಕವಿರುವ ಮರಳಿನ ಮೂಟೆಗಳನ್ನು ಹಾಕಲಾಯಿತು. ನಂತರ ಕುಮ್ಕಿ ಆನೆಗಳೊಂದಿಗೆ ಹೆಜ್ಜೆ ಹಾಕುತ್ತಾ ಸಾಗಿದ ಅಭಿಮನ್ಯು ಹಿಂದೆ ಗಜಪಡೆ ಆನೆಗಳು ಸಾಲಾಗಿ ಸಾಗಿದವು.

ಅಭಿಮನ್ಯು ನೇತೃತ್ವದಲ್ಲಿ ಸಾಗಿದ ಗಜಪಡೆ, ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನವಿರುವ ಅರಮನೆ ಉತ್ತರ ದ್ವಾರದ ಬಲರಾಮ ದ್ವಾರದ ಮೂಲಕ ಹೊರಬಂದವು. ಬಳಿಕ ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆಆರ್ ವೃತ್ತ, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ವೃತ್ತ, ಹೈವೆ ವೃತ್ತ ಮೂಲಕ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿದವು. ನಂತರ ಅದೇ ಮಾರ್ಗದಲ್ಲಿ ಅರಮನೆ ಆವರಣಕ್ಕೆ ಗಜಪಡೆ ಹಿಂತಿರುಗಿದವು. ಆ ಮೂಲಕ ಅಭಿಮನ್ಯು ಭಾರ ಹೊರುವ ಜೊತೆಗಿನ ಗಜಪಡೆ ನಡಿಗೆ ತಾಲೀಮು ಯಶಸ್ವಿಗೊಂಡಿತು.

ಇಂದಿನ ತಾಲೀಮಿನಿಂದ ಗೋಪಿ ಆನೆಗೆ ವಿಶ್ರಾಂತಿ ನೀಡಲಾಗಿತ್ತು. ಉಳಿದೆಲ್ಲಾ 13 ಆನೆಗಳು ತಾಲೀಮಿನಲ್ಲಿ ಪಾಲ್ಗೊಂಡಿದ್ದವು. ಅರಮನೆ ಆವರಣದಿಂದ ಬನ್ನಿಮಂಟಪದವರೆಗೂ ದಾರಿಯುದ್ದಕ್ಕೂ ಸಾರ್ವಜನಿಕರ ಗಜಪಡೆ ಕಂಡು ಸಂಭ್ರಮಿಸಿದರು. ಮೊಬೈಲ್ ಹಾಗೂ ಕ್ಯಾಮರಾಗಳಲ್ಲಿ ಫೋಟೋ ತೆಗೆದುಕೊಂಡು ಸಂತಸಗೊಂಡರು. ಆಗಾಗ್ಗೆ ಸೊಂಡಿಲೆತ್ತಿ ಸೆಲ್ಯೂಟ್ ಹೊಡೆದು ಗಜಪಡೆ ಆನೆಗಳು ಸಾರ್ವಜನಿಕರ ಗಮನ ಸೆಳೆದವು. ಎಂದಿನಂತೆ ಬೆಂಗಾವಲು ವಾಹನ ಹಾಗೂ ಭದ್ರತೆ ಕಲ್ಪಿಸಲಾಗಿತ್ತು. ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ, ಆರ್‌ಎಫ್‌ಓ ಸೈಯದ್ ನದೀಮ್, ಪಶುವೈದ್ಯಾಧಿಕಾರಿ ಡಾ.ಆದರ್ಶ ಸೇರಿದಂತೆ ಮತ್ತಿತರರು ಹಾಜರಿದ್ದರು.

ಬಲು ಬುದ್ಧಿವಂತ ಭೀಮ

ಅಂಬಾರಿ ಆನೆ ಅಭಿಮನ್ಯು ಹಿಂಬಾಲಿಸಿದ ದಸರಾ ಗಜಪಡೆ ಜೊತೆಗೆ ಸಾಗಲು ಭೀಮ ಆನೆಯನ್ನು ಕರೆದೊಯ್ಯಲು ಅದರ ಮೇಲೆ ಮಾವುತ ಗುಂಡ ಹತ್ತಿ ಕುಳಿತರು. ಆದರೆ ಭೀಮ ಆನೆ ವಾಸ್ತವ್ಯಕ್ಕೆ ಸ್ಥಳಾವಕಾಶ ಕಲ್ಪಿಸಿದ್ದ ಜಾಗದ ಮುಂದೆ ಕಬ್ಬಿಣದ ಬ್ಯಾರಿಕೇಡ್ ತೆರೆದಿರಲಿಲ್ಲ. ಆಗ ಮಾವುತ ಗುಂಡ, ಬ್ಯಾರಿಕೇಡ್ ಅನ್ನು ಪಕ್ಕಕ್ಕೆ ಸರಿಸುವಂತೆ ಅಲ್ಲಿ ನೆರೆದಿದ್ದ ಇಲಾಖೆ ಸಿಬ್ಬಂದಿಗೆ ಹೇಳುತ್ತಿದ್ದಂತೆ ಸ್ವತಃ ಭೀಮನೇ ತನ್ನ ಸೊಂಡಿಲಿನಿಂದ ಬ್ಯಾರಿಕೇಡ್ ಎತ್ತಿ ಬದಿಗಿಟ್ಟು ಹೊರ ಬಂದು ಮುಂದೆ ಸಾಗಿದ. ಅಲ್ಲದೆ, ದಾರಿಯುದ್ದಕ್ಕೂ ಭೀಮ ಹೆಸರು ಕೂಗಿ ಹಲವು ಸಾರ್ವಜನಿಕರು ಅದರ ಮೇಲಿನ ಅಭಿಮಾನ ಮೆರೆದರು.



ಗಾದಿ, ನಮ್ದಾ ಸೇರಿದಂತೆ ಸುಮಾರು 500 ಕೆಜಿ ಭಾರ ಹೊತ್ತು ತಾಲೀಮಿನಲ್ಲಿ ಸಾಗುತ್ತಿರುವ ಅಭಿಮನ್ಯು. ಜೊತೆಗೆ ಇಡೀ ಗಜಪಡೆ ಅಭಿಮನ್ಯು ಹಿಂದೆ ಸಾಲಾಗಿ ಸಾಗುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಅಭಿಮನ್ಯು ಸೇರಿದಂತೆ ಕನಿಷ್ಠ 4ರಿಂದ 5 ಆನೆಗಳಿಗೆ ಭಾರ ಹೊರುವ ತಾಲೀಮು; ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ

ಮೈಸೂರು,ಸೆ.3(ಪಿಎಂ)–ಇಂದು ಅಂಬಾರಿ ಆನೆ ಅಭಿಮನ್ಯುಗೆ ಭಾರ ಹೊರುವ ತಾಲೀಮು ಆರಂಭಿಸಿದ್ದೇವೆ. ಇದರ ಜೊತೆಗೆ ಧನಂಜಯ, ಮಹೇಂದ್ರ, ಪ್ರಶಾಂತ, ಭೀಮನಿಗೂ ಭಾರ ಹೊರುವ ತಾಲೀಮು ನಡೆಸಲಾಗುವುದು. ಒಟ್ಟಾರೆ ಕನಿಷ್ಠ 4ರಿಂದ 5 ಆನೆಗಳಿಗೆ ಭಾರ ಹೊರುವ ತಾಲೀಮು ನಡೆಸಿ ಜಂಬೂಸವಾರಿಗೆ ಸಜ್ಜುಗೊಳಿಸಲಾಗುವುದು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ ತಿಳಿಸಿದರು.

ಬುಧವಾರ ಸಂಜೆ ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯ ಸಮೀಪದಲ್ಲಿ ನಡೆದ ಭಾರ ಹೊರುವ ತಾಲೀಮು ಆರಂಭದ ಪೂಜಾ ಕಾರ್ಯಕ್ರಮದ ವೇಳೆ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ಕಳೆದ ಬಾರಿ ಏಕಲವ್ಯ ಆನೆಗೂ ಭಾರ ಹೊರುವ ತಾಲೀಮು ಮಾಡಿಸಿದ್ದೆವು. ಅಭಿಮನ್ಯು ಅಂಬಾರಿ ಹೊತ್ತು ಅನುಭವ ಹೊಂದಿರುವ ಆನೆ. ಈಗಾಗಲೇ ಅದು ತನ್ನ ಸಾಮರ್ಥ್ಯ ಸಾಬೀತುಪಡಿಸಿದೆ. ಆದರೂ ತಾಲೀಮು ಅಗತ್ಯ. ಭಾರ ಹೊರುವ ತಾಲೀಮು ನಂತರದಲ್ಲಿ ಮರದ ಅಂಬಾರಿ ಹೊರುವ ತಾಲೀಮು ನಡೆಸಲಾಗುವುದು ಎಂದು ಹೇಳಿದರು.

2 ಅಥವಾ 3 ದಿನ ಬಿಟ್ಟು ಬೇರೆ ಆನೆಗಳಿಗೂ ಭಾರ ಹೊರುವ ತಾಲೀಮು ನಡೆಸಲಾಗುವುದು. ಒಟ್ಟು 500 ಕೆಜಿ ಭಾರವನ್ನು ಅಭಿಮನ್ಯು ಮೇಲೆ ಹೊರಿಸಿ ತಾಲೀಮು ಮಾಡಿಸುತ್ತಿದ್ದೇವೆ. ಹಂತ ಹಂತವಾಗಿ ಭಾರವನ್ನು ಹೆಚ್ಚಿಸಲಾಗುತ್ತದೆ. ಜಂಬೂಸವಾರಿ ದಿನದಂದು 750 ಕೆಜಿ ಅಂಬಾರಿ ಜೊತೆಗೆ 250 ಕೆಜಿ ಗಾದಿ, ನಮ್ದಾ ಎಲ್ಲಾ ಸೇರಿ ಒಟ್ಟಾರೆ ಸಾವಿರ ಕೆಜಿ ಭಾರವನ್ನು ಹೊತ್ತು ಅಭಿಮನ್ಯು ಸಾಗಲಿದೆ. ಇಷ್ಟು ಪ್ರಮಾಣದ ಭಾರ ಹೊತ್ತು ಸುಲಲಿತವಾಗಿ ಸಾಗುವಂತೆ ಅಭ್ಯಾಸ ಮಾಡಿಸುತ್ತೇವೆ ಎಂದರು.

ರಾಜ್ಯದ ಪ್ರವಾಸಿ ತಾಣಗಳಲ್ಲಿ ಪಿಪಿಪಿ ಮಾದರಿಯಲ್ಲಿ ರೋಪ್‌ವೇ ನಿರ್ಮಾಣ

• ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧಾರ • ಅಂಜನಾದ್ರಿಯಲ್ಲಿ ಹಂತ–ಹಂತವಾಗಿ ಪ್ರವಾಸಿಗರಿಗೆ ಸೌಕರ್ಯ ಕಲ್ಪಿಸಲು ತೀರ್ಮಾನ



ಅಂಜನಾದ್ರಿ ಬೆಟ್ಟ ಸೇರಿದಂತೆ ಪ್ರವಾಸಿತಾಣಗಳ ಅಭಿವೃದ್ಧಿ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಬೆಂಗಳೂರಲ್ಲಿ ಸಭೆ ನಡೆಸಿದರು.

ಬೆಂಗಳೂರು, ಸೆ. 3(ಕೆಎಂಶಿ)–ರಾಜ್ಯದ 11 ಪ್ರವಾಸಿ ತಾಣಗಳಿಗೆ ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ರೋಪ್‌ವೇಗಳನ್ನು ಅಭಿವೃದ್ಧಿಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಹಸಿರು ನಿಶಾನೆ ತೋರಿದ್ದಾರೆ.

ಅಂಜನಾದ್ರಿ ಕ್ಷೇತ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾವೇರಿ ನಿವಾಸದಲ್ಲಿ ನಡೆದ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ. ಹನುಮ ಜಯಂತಿ ಸಂದರ್ಭದಲ್ಲಿ ಲಕ್ಷಾಂತರ ಜನರು ಬೆಟ್ಟಕ್ಕೆ ಭೇಟಿ ನೀಡುತ್ತಾರೆ. ಉತ್ತರ ಭಾರತದ ಪ್ರವಾಸಿಗರೂ ಹೆಚ್ಚಿನ ಸಂಖ್ಯೆಯಲ್ಲಿ ಕ್ಷೇತ್ರಕ್ಕೆ ಆಗಮಿಸುತ್ತಾರೆ. ಯಾತ್ರಿಕರು ಉಳಿದುಕೊಳ್ಳಲು ಡಾರ್ಮೆಟರಿ, ಹಿರಿಯ ಭಕ್ತಾದಿಗಳು ಬೆಟ್ಟವೇರಲು ಅನುಕೂಲವಾಗುವಂತೆ ಮೆಟ್ಟಿಲುಗಳ ವ್ಯವಸ್ಥೆ, ಸಮುದಾಯ ಭವನ ನಿರ್ಮಾಣ ಹಾಗೂ ಇತರೆ ಪ್ರವಾಸಿ ಸೌಲಭ್ಯ ಸೇರಿ ಕ್ಷೇತ್ರದ ಸುತ್ತಮುತ್ತ ಮೂಲಭೂತ ಸೌಕರ್ಯ ಅಭಿವೃದ್ಧಿ ಪಡಿಸಬೇಕಿದೆ ಎಂದರು.

ಕ್ಷೇತ್ರಕ್ಕೆ ಹಂತ–1 ಮತ್ತು ಹಂತ–2ರಲ್ಲಿ 200 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಮಂಜೂರಾಗಿದೆ. ಈವರೆಗೆ 10 ಕೋಟಿ ರೂ.ಗಳನ್ನು ಇಲಾಖೆಯಿಂದ ಬಿಡುಗಡೆ ಮಾಡಲಾಗಿದ್ದು, ಬಾಕಿ ಅನುದಾನಕ್ಕೆ ಆರ್ಥಿಕ ಇಲಾಖೆಯಿಂದ ಹೆಚ್ಚುವರಿ ಅನುದಾನ ಒದಗಿಸಬೇಕಿದೆ.

ಮಂಜೂರಾಗಿರುವ ಕಾಮಗಾರಿ ಕೈಗೊಳ್ಳಲು ಸರ್ಕಾರಿ ಜಮೀನಿನ ಕೊರತೆ ಇದ್ದು, ಅನುದಾನದ ಕೊರತೆ ಕಾರಣ ಪ್ರಸ್ತಾಪಿತ 77.28 ಎಕರೆ ಖಾಸಗಿ ಜಮೀನು ಸ್ವಾಧೀನ ಸಾಧ್ಯವಾಗಿಲ್ಲ. ಹೆಚ್ಚುವರಿ ಜಮೀನು ಒಳಗೊಂಡಂತೆ ಒಟ್ಟು 101.30 ಎಕರೆ ಖಾಸಗಿ ಜಮೀನು ಸ್ವಾಧೀನಕ್ಕೆ ಅಗತ್ಯ ಅನುದಾನವನ್ನು ಆರ್ಥಿಕ ಇಲಾಖೆಯಿಂದ ಒದಗಿಸಲಾಗುವುದು. ಮಂಜೂರಾಗಿರುವ ಬಹುತೇಕ ಕಾಮಗಾರಿ ಅರಣ್ಯ ಇಲಾಖೆ ವ್ಯಾಪ್ತಿಯ ಜಮೀನುಗಳಾಗಿದ್ದು ಕಾಮಗಾರಿ ಕೈಗೊಳ್ಳಲು ಅರಣ್ಯ ಇಲಾಖೆಯ ಎನ್‌ಓಸಿ ಅಗತ್ಯವಿದ್ದು, ಇದನ್ನು ಪಡೆಯಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಚಿನ್ನಸ್ವಾಮಿ ಕಾಲ್ತುಳಿತ ದುರಂತಕ್ಕೆ ಕೊಹ್ಲಿ ವಿಷಾದ

ಬೆಂಗಳೂರು, ಸೆ.3– ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ದುರಂತ ಸಂಭವಿಸಿ 3 ತಿಂಗಳ ಬಳಿಕ ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಅವರು ಘಟನೆಗೆ ವಿಷಾದ ವ್ಯಕ್ತಪಡಿಸಿದ್ದಾರೆ.



ಫ್ರಾಂಚೈಸಿಯು ಆರ್‌ಸಿಬಿ ಕೇರ್ಸ್ ಘೋಷಿಸಿದ ಬೆನ್ನಲ್ಲೇ ಅವರು ಈ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು, ನಾವು ಒಗ್ಗಟ್ಟಾಗಿ ಕಾಳಜಿಯಿಂದ ಮುಂದುವರಿಯುವುದಾಗಿ ತಿಳಿಸಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ 'ಜೂ.4ರಂದು ನಡೆದ ದುರಂತದಂತಹ ಘಟನೆಗಳನ್ನು ಎದುರಿಸಲು ಜೀವನದಲ್ಲಿ ಯಾವುದೇ ತಯಾರಿ ಇರುವುದಿಲ್ಲ. ಕಪ್ ಗೆಲುವು ನಮ್ಮ ಫ್ರಾಂಚೈಸಿಯ ಇತಿಹಾಸದಲ್ಲಿ ಅತ್ಯಂತ ಸಂತೋಷದಾಯಕ ಕ್ಷಣವಾಗಿರಬೇಕಾಗಿತ್ತು. ಆದರೆ ದುರಂತವಾಗಿ ಮಾರ್ಪಟ್ಟಿದೆ. ಸಂತ್ರಸ್ತ ಕುಟುಂಬ ಮತ್ತು ಗಾಯಗೊಂಡ ನಮ್ಮ ಅಭಿಮಾನಿಗಳಿಗಾಗಿ ದುಃಖ ವ್ಯಕ್ತಪಡಿಸುತ್ತೇನೆ ಮತ್ತು ಪ್ರಾರ್ಥಿಸುತ್ತಿದ್ದೇನೆ. ನಿಮ್ಮ ತುಂಬಲಾರದ ನಷ್ಟವು ಈಗ ನಮ್ಮ ತಂಡದ ಇತಿಹಾಸದ ಭಾಗವಾಗಿದೆ. ನಾವೆಲ್ಲಾ ಒಟ್ಟಾಗಿ ಕಾಳಜಿ, ಗೌರವ ಮತ್ತು ಜವಾಬ್ದಾರಿಯೊಂದಿಗೆ ಮುಂದುವರಿಯುತ್ತೇವೆ' ಎಂದು ಪೋಸ್ಟ್ ಮಾಡಿದ್ದಾರೆ.

ಪ್ರಣವಿ ಎ.ಎಂ.ಗೆ ಪ್ರಥಮ ಬಹುಮಾನ

ಮೈಸೂರು, ಸೆ.3– ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಜಯಂತಿಯ ಅಂಗವಾಗಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಪ್ರಬಂಧ ಲೇಖನ ಸ್ಪರ್ಧೆಯಲ್ಲಿ ಮೈಸೂರಿನ ಹಿಂದೂಸ್ಥಾನ್ ಕಾಲೇಜಿನ ತೃತೀಯ ಬಿ.ಕಾಂ ವಿದ್ಯಾರ್ಥಿನಿ ಎ.ಎಂ. ಪ್ರಣವಿ ಪ್ರಥಮ ಬಹುಮಾನ ಪಡೆದಿದ್ದಾರೆ.



ದಸರಾ ಮಹೋತ್ಸವದ ಮುನ್ನುಡಿಯ ಸಡಗರಕ್ಕೆ ಸಿದ್ಧತೆ

ಸೆ.10ರಿಂದ ಯುವ ಸಂಭ್ರಮದ ಸಾಂಸ್ಕೃತಿಕ ರಂಗು

■ ಕಳೆಗಟ್ಟಲಿದೆ ಯುವ ಪಡೆಯ ನೃತ್ಯ ವೈಭವ ■ ಶುಭಾಂಶು ಶುಕ್ಲಾ ಸಾಧನೆ ಅನಾವರಣಕ್ಕೂ ಅವಕಾಶ



2024ರ ದಸರಾ ಯುವ ಸಂಭ್ರಮದ ಉದ್ಘಾಟನೆ ದಿನದಂದು ಕಾಲೇಜು ತಂಡಗಳು ನೀಡಿದ ನೃತ್ಯ ಪ್ರದರ್ಶನ.



ಯುವ ಸಂಭ್ರಮ ಉದ್ಘಾಟನಾ ಸಮಾರಂಭದಲ್ಲಿ ವಿಶೇಷ ಅತಿಥಿಯಾಗಿ ಪಾಲ್ಗೊಳ್ಳುವಂತೆ ನಟ ಯುವ ರಾಜ್‌ಕುಮಾರ್ ಅವರನ್ನು ಆಹ್ವಾನಿಸುತ್ತಿರುವುದು.

ಮೈಸೂರು, ಸೆ.3(ಪಿಎಂ)–ದಸರಾ ಮಹೋತ್ಸವದ 'ಯುವ ಸಂಭ್ರಮ'ದ ಸಾಂಸ್ಕೃತಿಕ ರಂಗು ಸೆ.10ರಿಂದ ಕಳೆಗಟ್ಟಲಿದ್ದು, ಈ ಬಾರಿ 14 ವಿಶಿಷ್ಟ ವಸ್ತುವಿಷಯಗಳಡಿ (ಥೀಮ್) ರಾಜ್ಯದ ವಿವಿಧ ಕಾಲೇಜು ತಂಡಗಳು ತಮ್ಮ ಸಾಂಸ್ಕೃತಿಕ ಪ್ರೌಢಿಮೆ ಮೆರೆಯಲಿವೆ.

ವಸ್ತುವಿಷಯಗಳ ಪೈಕಿ ಗಗನಯಾತ್ರಿ ಶುಭಾಂಶು ಶುಕ್ಲಾ ಅವರ ಸಾಧನೆಯನ್ನು ನೃತ್ಯದಲ್ಲಿ ಮೂಡಿಸಲು ಅವಕಾಶ ಕಲ್ಪಿಸಿರುವುದು ವಿಶೇಷವಾಗಿದೆ. 'ಚಂದ್ರಯಾನ 3'ರ ಹಿನ್ನೆಲೆಯಲ್ಲಿ ವೈಜ್ಞಾನಿಕ ಪ್ರಗತಿಗೆ ಮೈಸೂರು ಸಂಸ್ಥಾನದ ಕೊಡುಗೆ ಹಿನ್ನೆಲೆಯಲ್ಲಿಯೂ ನೃತ್ಯ ಮೂಡಿಸಲು ಯುವ ಪಡೆ ಸಜ್ಜುಗೊಳ್ಳಬಹುದಾಗಿದೆ. 'ಮೈಸೂರು ದಸರಾ ವೈಭವ ಅಂದು–ಇಂದು' ಸಹ ಥೀಮ್‌ನಲ್ಲಿ ಸೇರಿದೆ.

ದಸರಾ ಮಹೋತ್ಸವ ಆರಂಭಕ್ಕೂ ಮುನ್ನವೇ ಯುವ ಪಡೆಯನ್ನು ಕುಣಿದು ಕುಪ್ಪಳಿಸುವಂತೆ ಮಾಡುವ ಯುವ ಸಂಭ್ರಮ ಸೆ.17ರವರೆಗೆ ನಡೆಯಲಿದ್ದು, ಈ ಬಾರಿಯೂ ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗಮಂದಿರಲ್ಲಿ 8 ದಿನಗಳ ಕಾಲ ಸಾಂಸ್ಕೃತಿಕ ಸಂಭ್ರಮ ರಸದೌತಣ ಉಣಬಡಿಸಲಿದೆ.

ರಾಜ್ಯದ ವಿವಿಧ ಕಾಲೇಜುಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಲು ಈಗಾಗಲೇ ಆಹ್ವಾನ ನೀಡಿದ್ದು, ಆಯಾ ಕಾಲೇಜುಗಳ ವಿದ್ಯಾರ್ಥಿ ತಂಡಗಳು ಸದ್ದಿಲ್ಲದೇ ತಾಲೀಮು ನಡೆಸುತ್ತಿವೆ. ಪ್ರತಿದಿನ ಸಂಜೆ 5ರಿಂದ ರಾತ್ರಿ 10ರವರೆಗೆ ನಡೆಯುವ ಯುವ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಶೇಷವಾಗಿ ಯುವ ಪಡೆಯನ್ನು ಹುಚ್ಚೆದ್ದು ಕುಣಿಯುವಂತೆ ಮಾಡಲಿದೆ.

ದಸರಾ ಯುವ ಸಂಭ್ರಮ ಉಪಸಮಿತಿಯು 14 ಮುಖ್ಯ ವಸ್ತು ವಿಷಯಗಳೊಂದಿಗೆ ಹಲವು ಮಹತ್ವದ ವಿಷಯಗಳನ್ನು ನೀಡಿದ್ದು, ಅದರಂತೆ ಸಜ್ಜುಗೊಳ್ಳಲು ಕಾಲೇಜು ತಂಡಗಳು ತಯಾರಿ ನಡೆಸುತ್ತಿವೆ. ನೃತ್ಯದ ಸಂಭ್ರಮದೊಂದಿಗೆ ಸಾಮಾಜಿಕ ಕಳಕಳಿ ಸಾರುವಂತೆ ವಸ್ತುವಿಷಯಗಳನ್ನು ಉಪಸಮಿತಿ ನೀಡಿದೆ. ಕರ್ನಾಟಕ ಜಾನಪದ ವೈವಿಧ್ಯತೆ ಮತ್ತು ಪರಂಪರೆ, ಪ್ರತಿ ಜಿಲ್ಲೆಯ ಪ್ರಚಲಿತ ನೃತ್ಯಪ್ರಕಾರ, ಕನ್ನಡ ಸಿನಿಮಾಧಾರಿತ ಆಧುನಿಕ ನೃತ್ಯ ಪ್ರಕಾರಗಳು, ಹಳೇ ಹಾಗೂ ಹೊಸ ಗೀತ ಗಾಯನಗಳ ಸಂಯೋಜನೆಯೊಂದಿಗೆ ಕರ್ನಾಟಕದ ವೈಭವ ಸಾರುವಂತ ನೃತ್ಯ ಪ್ರದರ್ಶನಕ್ಕೂ ಅವಕಾಶ ಕಲ್ಪಿಸಲಾಗಿದೆ.

ಇದಲ್ಲದೆ, ಮೈಸೂರು ದಸರಾ ವೈಭವ ಅಂದು–ಇಂದು, ಕನ್ನಡ ಸಾಹಿತ್ಯ–ಕವಿ, ಕರ್ನಾಟಕ ಸಾಹಿತ್ಯ ಪರಂಪರೆ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ವ್ಯಕ್ತಿಗಳ ಜೀವನ ಚರಿತ್ರೆ ಪ್ರತಿಬಿಂಬಿಸುವ ನೃತ್ಯ ರೂಪಕ ಪ್ರದರ್ಶನಕ್ಕೂ ಅವಕಾಶ ನೀಡಲಾಗಿದೆ. 'ದೇಶಭಕ್ತಿ ಅನಾವರಣಗೊಳಿಸುವಂತೆಯೂ ನೃತ್ಯ ಸಂಯೋಜನೆ ಮಾಡಬಹುದಾಗಿದ್ದು, ಸ್ವಾತಂತ್ರ್ಯ ಚಳುವಳಿ, ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆ ಸಹ ನೃತ್ಯ ಕೌಶಲದಲ್ಲಿ ಮೂಡಿಸಬಹುದಾಗಿದೆ. ಆಪರೇಷನ್ ಸಿಂಧೂರ್ ಹಿನ್ನೆಲೆಯಲ್ಲಿ ಭಾರತೀಯ ಸೈನ್ಯದಲ್ಲಿ ಮಹಿಳಾ ಯೋಧರು ಪಾತ್ರ ಅನಾವರಣಕ್ಕೂ ಅವಕಾಶವಿದೆ.

ವಿವಿಧತೆಯಲ್ಲಿ ಏಕತೆ ಬಿಂಬಿಸುವ ನೃತ್ಯ ಪ್ರದರ್ಶನ ಹಾಗೂ ಯೋಧ ಮತ್ತು ರೈತ ಸಮುದಾಯದ ಕೊಡುಗೆಗಳನ್ನು ವೇದಿಕೆಯಲ್ಲಿ ಬಿಂಬಿಸಬಹುದಾಗಿದೆ. ಜೊತೆಗೆ ಲಿಂಗ ಸಮಾನತೆಯೊಂದಿಗೆ ಮಹಿಳಾ ಸಬಲೀಕರಣ ಹಾಗೂ ಮಹಿಳಾ ಸ್ವಯಂ ರಕ್ಷಣಾ ಕಲೆಯನ್ನು ನೃತ್ಯದಲ್ಲಿ ಮೂಡಿಸಬಹುದಾಗಿದೆ.

ಮಾನವನ ಆಧುನಿಕ ಜೀವನ ಶೈಲಿಯಿಂದ ಪರಿಸರದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವಂತೆಯೂ ನೃತ್ಯ ಸಂಯೋಜಿಸಿ ಪ್ರದರ್ಶಿಸಬಹುದಾಗಿದೆ. ಪ್ರಸ್ತುತದಲ್ಲಿ ಆಗಾಗ್ಗೆ ಮಾನವ ಮತ್ತು ಪ್ರಾಣಿ ಸಂಘರ್ಷ ಕಂಡುಬರುತ್ತಿದ್ದು, ಈ ಬಗ್ಗೆಯೂ ನೃತ್ಯದ ಮೂಲಕ ಸಂದೇಶ ನೀಡಲು ಅವಕಾಶ ಕಲ್ಪಿಸಲಾಗಿದೆ. ಬಹುತ್ವದ ಸಮಾಜಕ್ಕೆ ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳು ವಿಷಯ ಕುರಿತು ಸಹ ನೃತ್ಯ ಪ್ರದರ್ಶಿಸಲು ಅವಕಾಶ ನೀಡಲಾಗಿದೆ. ದುಶ್ಚಟಗಳಿಂದ ದೂರವಿರಬೇಕೆಂಬ ಸಂದೇಶವೂ ನೃತ್ಯ ಮುಖೇನ ಮೂಡಿಸಬಹುದಾಗಿದೆ.

ಒಂದು ತಂಡದಲ್ಲಿ 30ರಿಂದ 40 ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರದರ್ಶನಕ್ಕೆ ಐದು ನಿಮಿಷ ನಿಗದಿ ಮಾಡಲಾಗಿದೆ. ಅಪರಾಧ ಪ್ರಕರಣಗಳಲ್ಲಿ ಸಿಲುಕಿರುವ ಮತ್ತು ಅಪರಾಧ ಪ್ರಕರಣ ದಾಖಲಾಗಿರುವ ವ್ಯಕ್ತಿಗಳ ಭಾವಚಿತ್ರವನ್ನು ವೇದಿಕೆಯಲ್ಲಿ ವಿಜೃಂಭಿಸುವಂತಿಲ್ಲ ಹಾಗೂ ವೇದಿಕೆ ಮೇಲೆ ಪ್ರದರ್ಶಿಸುವ ನೃತ್ಯ ಮತ್ತು ರೂಪಕದಲ್ಲಿ ಅವರ ಫೋಟೋ ಹಾಗೂ ಬ್ಯಾನರ್ ಅನಾವರಣ ಮಾಡುವಂತಿಲ್ಲ ಎಂಬುದು ವಿಧಿಸಿರುವ ಷರತ್ತುಗಳ ಪೈಕಿ ಪ್ರಮುಖವಾದುದು.

ಉದ್ಘಾಟನಾ ಸಮಾರಂಭದಲ್ಲಿ ನಟ ಯುವ ರಾಜ್‌ಕುಮಾರ್ ಭಾಗಿ...

ಇದೇ 10ರಂದು ನಡೆಯಲಿರುವ ಯುವ ಸಂಭ್ರಮ ಉದ್ಘಾಟನಾ ಸಮಾರಂಭಕ್ಕೆ ಕನ್ನಡ ಚಲನಚಿತ್ರ ರಂಗದ ಉದಯೋನ್ಮುಖ ನಟ ಯುವರಾಜ್‌ಕುಮಾರ್ ಅವರನ್ನು ವಿಶೇಷ ಅತಿಥಿಯಾಗಿ ಆಹ್ವಾನಿಸಲಾಗಿದೆ. ಇತ್ತೀಚೆಗೆ ಮೈಸೂರಿನ ಖಾಸಗಿ ಹೋಟೆಲ್ ಆವರಣದಲ್ಲಿ ಮೈಸೂರು ಉಪ ವಿಭಾಗಾಧಿಕಾರಿಗಳೂ ಆದ ಯುವ ಸಂಭ್ರಮ ಉಪಸಮಿತಿ ಕಾರ್ಯಾಧ್ಯಕ್ಷ ಆಶಪ್ಪ ನೇತೃತ್ವದಲ್ಲಿ ಅವರನ್ನು ಆಹ್ವಾನಿಸಲಾಯಿತು. ಪಾಲಿಕೆ ವಲಯಾಧಿಕಾರಿ ಪ್ರತಿಮಾ, ಉಪಸಮಿತಿ ಸಮನ್ವಯಾಧಿಕಾರಿ ಡಾ.ಆರ್.ನಿಂಗರಾಜು ಮತ್ತಿತರರು ಈ ವೇಳೆ ಹಾಜರಿದ್ದರು. ಯುವ ಸಂಭ್ರಮ ನಡೆಯುವ 8 ದಿನಗಳಲ್ಲಿ 450ರಿಂದ 500 ಕಾಲೇಜು ತಂಡಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಲಿವೆ ಎಂದು ಉಪಸಮಿತಿ ನಿರೀಕ್ಷಿಸಿದೆ.

ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ ಶಿಕ್ಷಕರ ಸ್ಥಿತಿ ಶೋಚನೀಯ

• ವಿಧಾನ ಪರಿಷತ್ ಸದಸ್ಯ ವಿವೇಕಾನಂದ ನೋವಿನ ನುಡಿ • ಸರ್ಕಾರವೇ ತನ್ನ ಶಾಲೆಗಳ ಮುಚ್ಚುವ ದುಸ್ಥಿತಿ ಬಂದಿದೆ



2024–25ನೇ ಸಾಲಿನಲ್ಲಿ ಶೈಕ್ಷಣಿಕ ಸಾಧನೆಗೈದ ಪದವೀಧರ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಸೆ.3(ವಿವಿಹೆಚ್)– 2006ರಿಂದ ಈಚೆಗೆ ಒಂದೂವರೆ ಲಕ್ಷ ಶಿಕ್ಷಕರ ಹುದ್ದೆಗಳು ಖಾಲಿಯಿದ್ದು, ತ್ವರಿತವಾಗಿ ಅವುಗಳ ಭರ್ತಿ ಕಾರ್ಯಕ್ಕೆ ಸರ್ಕಾರ ಮುಂದಾಗಬೇಕು ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಆಗ್ರಹಿಸಿದರು.

ನಗರದ ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ಬುಧವಾರ ಆಯೋಜಿಸಿದ್ದ 3ನೇ ವಾರ್ಷಿಕ ಘಟಿಕೋತ್ಸವ ಮತ್ತು ಅಂತರ ರಾಷ್ಟ್ರೀಯ ತಾಂತ್ರಿಕ ಪ್ರಬಂಧ ಪ್ರಸ್ತುತಿ–2025 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇದೇ ವೇಳೆ ಶೈಕ್ಷಣಿಕವಾಗಿ ಅತ್ಯುತ್ತಮ ಸಾಧನೆಗೈದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಶೈಕ್ಷಣಿಕ ಸಾಧನೆ ತೋರಿದ 8 ಪ್ರಥಮ ರ‍್ಯಾಂಕ್ ಮತ್ತು 9 ದ್ವಿತೀಯ ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಪದಕ ಮತ್ತು ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಯಿತು.

2006ರ ಬಳಿಕ ಈವರೆಗೆ ಯಾವುದೇ ಶಾಲಾ, ಕಾಲೇಜು ಶಿಕ್ಷಕರ ನೇಮಕವನ್ನೇ ಸರ್ಕಾರ ಮಾಡಿಲ್ಲ. ಮೂರ್ನಾಲ್ಕು ಪದವಿಗಳನ್ನು ಪಡೆದವರನ್ನು ಅತಿಥಿ ಶಿಕ್ಷಕರನ್ನಾಗಿ ನೇಮಿಸಿಕೊಂಡು ಒಬ್ಬರ ಸಂಬಳದಲ್ಲಿ 12 ಮಂದಿಯಿಂದ ದುಡಿಸಿಕೊಳ್ಳುವ ನೀಚ ಕೆಲಸಕ್ಕೆ ಸರ್ಕಾರ ಕೈ ಹಾಕಿದೆ ಎಂದು ಕಿಡಿಕಾರಿದರು. ಶಿಕ್ಷಣ ಕ್ಷೇತ್ರವನ್ನೇ ನಂಬಿಕೊಂಡವರಿಂದು ಅತಿಥಿ ಶಿಕ್ಷಕರಾಗಿ ಕೇವಲ 12 ಸಾವಿರ ರೂ. ಗಳಿಗೆ ಕೆಲಸ ಮಾಡುವ ದುಸ್ಥಿತಿ ಬಂದಿದೆ. ವಿದ್ಯೆ ಕೊಡುವ ಗುರುವಿಗೆ ಇಂದು ಘೋರ ಅನ್ಯಾಯ ಆಗುತ್ತಿದೆ. ಸಮಾಜದ ಏಳಿಗೆಗೆ, ದೇಶದ ಅಭಿವೃದ್ಧಿಗೆ ಶ್ರಮಿಸುವ ಶ್ರಮಜೀವಿ ಶಿಕ್ಷಕನ ಬದುಕೇ ಇಂದು ಶೋಚನೀಯ ಹಂತಕ್ಕೆ ತಲುಪಿರುವುದು ಖಂಡನೀಯ ಎಂದರು.

ವಿದ್ಯಾರ್ಥಿಗಳು ಕಾಲೇಜು ಹಂತದಲ್ಲಿ ಪಾಸಾಗುವುದೇ ದೊಡ್ಡ ಸಾಹಸವಾಗಿ ಪರಿಣಮಿಸಿದೆ. ಎಐ ಸೇರಿದಂತೆ ತಾಂತ್ರಿಕವಾಗಿ ಬಹಳ ಮುಂದೆ ಇದ್ದರೂ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಬದಲಾಗಿ ಸರ್ಕಾರವೇ ತನ್ನ ಶಾಲೆಗಳನ್ನು ಮುಚ್ಚುತ್ತಿದೆ. ರಾಜ್ಯದಲ್ಲಿನ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಕೇವಲ ಇಬ್ಬರೂ, ಮೂವರು ಶಿಕ್ಷಕರು ಒಂದು ಶಾಲೆಯನ್ನು ನಡೆಸುವ ಸ್ಥಿತಿಗೆ ಸರ್ಕಾರಿ ಶಾಲೆಗಳು ತಲುಪಿವೆ. ರಾಜ್ಯ, ದೇಶದ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣವೇ ಪ್ರಮುಖ ಅಸ್ತ್ರವಾಗಿದ್ದು, ಶಿಕ್ಷಣ ನೀಡುವ ಶಾಲೆಗಳು, ಶಿಕ್ಷಕನ ಬದುಕು ಇಂದು ಶೋಚನೀಯ ಸ್ಥಿತಿಗೆ ತಲುಪಿರುವುದು ದುರಂತ ಎಂದು ಬೇಸರ ವ್ಯಕ್ತಪಡಿಸಿದರು.


ಪಂಚ ಗ್ಯಾರಂಟಿಗಳ ಹೆಸರಲ್ಲಿ ಅಭಿವೃದ್ಧಿ ಮಾಡಲು ಹೊರಟಿರುವ ಸರ್ಕಾರ, ಸಮಾಜಕ್ಕೆ ಅಗತ್ಯವಾಗಿ ಬೇಕಾಗಿರುವ ಶಿಕ್ಷಣ, ಆರೋಗ್ಯವನ್ನು ನಿರ್ಲಕ್ಷ್ಯಿಸಿದೆ. ಪಂಚ ಗ್ಯಾರಂಟಿಗಳನ್ನು ತೆಗೆದು, ಗುಣಮಟ್ಟದ ಶಿಕ್ಷಣ, ಉಚಿತ ಆರೋಗ್ಯ ಒದಗಿಸಬೇಕು. ಶಿಕ್ಷಣದ ಸಮಗ್ರ ಅಭಿವೃದ್ಧಿಗೆ ಬೇಕಾದ ಎಲ್ಲಾ ಕೆಲಸಗಳನ್ನು, ಸರ್ಕಾರ ಮಾಡುವ ಮೂಲಕ ರಾಜ್ಯದಲ್ಲಿನ ಶಿಕ್ಷಣ ಕ್ಷೇತ್ರದ ಬಲವರ್ಧನೆಗೆ ಶ್ರಮಿಸಬೇಕು ಎಂದರು.

ಪಿರಿಯಾಪಟ್ಟಣ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಂಶುಪಾಲ ಎಚ್.ಎನ್.ರವಿ ಮಾತನಾಡಿ, ವಿದ್ಯಾರ್ಥಿಗಳಿಗೆ ಪ್ರಬಂಧ ಪ್ರಸ್ತುತಿ ಎಂಬುದು ಬಹಳ ಮುಖ್ಯವಾದ ಘಟ್ಟ, ಪ್ರಪಂಚದಾದ್ಯಂತ ನವ ಉದ್ಯಮ ಹುಟ್ಟಲು, ಆರ್ಥಿಕ ಸಬಲೀಕರಣಕ್ಕೆ ಇದು ಸಹಕಾರಿಯಾಗಿದೆ. ನಮ್ಮ ಟೆಕ್ನಾಲಜಿ ಹೇಗೆ ಅಭಿವೃದ್ಧಿ ಹೊಂದಿ ಮುಂದೆ ಸಾಗುತ್ತಿದೆ ಎಂಬುದಕ್ಕೆ ಅಪರೇಷನ್ ಸಿಂಧೂರ್ ಸಾಕ್ಷಿಯಾಗಿದೆ. ಇವುಗಳೆಲ್ಲವೂ ಸಂಶೋಧನೆಗಳಿಂದ ಮಾತ್ರ ಸಾಧ್ಯ. ಇಂತಹುಗಳನ್ನು ತಿಳಿಯಲು ಪ್ರಬಂಧ ಪ್ರಸ್ತುತಿ ಬಹಳ ಮುಖ್ಯ ಎಂದು ವಿವರಿಸಿದರು.

ಇನ್ಫೋಸಿಸ್ ಲಿಮಿಟೆಡ್ ಹಿರಿಯ ಪ್ರಾಂಶುಪಾಲರಾದ ಶ್ರೀಕಾಂತಗುಪ್ತ, ಪ್ರಾಂಶುಪಾಲರಾದ ಡಾ. ಎಸ್.ಭಕ್ತವತ್ಸಲ ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಪ್ರಾಂಶುಪಾಲರಾದ ವಿ.ಬಿ.ಲೋಕೇಶ್, ಜೆಎಸ್‌ಎಸ್ ಪಾಲಿಟೆಕ್ನಿಕ್‌ನ ವಿಭಾಗ ಮುಖ್ಯಸ್ಥರು, ಸಿಬ್ಬಂದಿ ವರ್ಗದವರು, 2024–25ನೇ ಸಾಲಿನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಉಪಸ್ಥಿತರಿದ್ದರು.

ದಸರಾ ಉದ್ಘಾಟಕರ ಆಯ್ಕೆ ಬಗ್ಗೆ ವಿಪಕ್ಷ ನಾಯಕ ಅಶೋಕ್ ಅಸಮಾಧಾನ

ಬೆಂಗಳೂರು, ಸೆ. 3(ಕೆಎಂಶಿ)–ನಾಡಹಬ್ಬ ದಸರಾ ಉದ್ಘಾಟನೆಗೆ ಮುಸ್ಲಿಂ ವ್ಯಕ್ತಿಯನ್ನು ಆಹ್ವಾನಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದೂ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ ಎಂದು ವಿಧಾನ ಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.



ಈ ಸಂಬಂಧ ಟ್ವೀಟ್ ಮಾಡಿರುವ ಅವರು, ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ತುಷ್ಟೀಕರಣದ ಮೂಲಕ ಲಜ್ಜೆಗೆಟ್ಟ ರಾಜಕಾರಣ ಮಾಡುತ್ತಿದೆ ಎಂದಿದ್ದಾರೆ.

ಹಣೆಯಲ್ಲಿ ಕುಂಕುಮ ಇಲ್ಲದಿದ್ದರೂ ಪರವಾಗಿಲ್ಲ, ಹಿಂದೂ ಧರ್ಮದ ಬಗ್ಗೆ ನಂಬಿಕೆ ಇಲ್ಲದಿದ್ದರೂ ಪರವಾಗಿಲ್ಲ, ಹಿಂದೂ ದೇವತೆಗಳ ಬಗ್ಗೆ ಶ್ರದ್ಧೆ ಇಲ್ಲದಿದ್ದರೂ ಪರವಾಗಿಲ್ಲ. ಇಫ್ತಾರ್ ಕೂಟಕ್ಕೆ ಹೋಗುವವರು ಮಾತ್ರ ತಲೆಗೆ ಮುಸ್ಲಿಂ ಟೋಪಿ ಧರಿಸದಿದ್ದರೆ ಗಂಟಲಿನಲ್ಲಿ ಬಿರಿಯಾನಿ ಇಳಿಯುವುದಿಲ್ಲ ಅಲ್ಲವೇ? ಎಂದು ಮುಖ್ಯಮಂತ್ರಿ ಅವರನ್ನು ಅಶೋಕ್ ಛೇಡಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಸರ್ದಾರ್‌ಜೀ ಮನೆಯ ವಿದ್ಯುತ್ (ಎಲೆಕ್ಟ್ರಿಕ್) ಪ್ಲಗ್‌ನಲ್ಲಿ ಹೊಗೆ ಬರ್ತಾ ಇತ್ತು. ಸರ್ದಾರ್‌ಜೀ ಸಿಟ್ಟಿನಿಂದ ಕೆಇಬಿಗೆ ಫೋನ್ ಮಾಡಿ

ಯಾರ್ರೀ ಅದು, ನಿಮ್ಮ ಆಫೀಸ್‌ನಲ್ಲಿ ಸಿಗರೇಟ್ ಸೇದಿ ನಮ್ಮ ಮನೆ ಪ್ಲಗ್‌ನಲ್ಲಿ ಹೊಗೆ ಬಿಡ್ತಾ ಇದ್ದೀರಾ !

ಮೈಸೂರು ಮಿತ್ರ

ಗುರುವಾರ, 3 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಜಗತ್ತಿನ ಅಗ್ಗದ ವಸ್ತುವೆಂದರೆ 'ಸಲಹೆ', ಒಬ್ಬರನ್ನು ಕೇಳಿದರೆ, ಸಾವಿರ ಜನ ನೀಡುತ್ತಾರೆ. ಜಗತ್ತಿನ ದುಬಾರಿ ವಸ್ತುವೆಂದರೆ 'ಸಹಾಯ'. ಸಾವಿರ ಜನರನ್ನು ಕೇಳಿದಾಗ ಒಬ್ಬನು ಮಾಡುತ್ತಾನೆ. –ಶ್ರೀ ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.

ನಿಮ್ಮ ಪತ್ರಗಳು

ಏಕರೂಪದ ಶುಲ್ಕ ವ್ಯವಸ್ಥೆ ಜಾರಿಗೆ ಬರಲಿ

ಮಾನ್ಯರೆ,

ಇಂಜಿನಿಯರಿಂಗ್ ಶಿಕ್ಷಣ ಒದಗಿಸುತ್ತಿರುವ ಖಾಸಗಿ ವಿಶ್ವವಿದ್ಯಾಲಯಗಳು ವಿಟಿಯು ನಿಗದಿಪಡಿಸಿದ 10,000 ಶುಲ್ಕಕ್ಕಿಂತ ನಾಲ್ಕು ಪಟ್ಟು ಹೆಚ್ಚು ಶುಲ್ಕವನ್ನು ವಿದ್ಯಾರ್ಥಿಗಳಿಂದ ವಸೂಲಿ ಮಾಡುತ್ತಿರುವುದು ಅನ್ಯಾಯ. ಇದು ಕೆಸಿಇಟಿ ಮೂಲಕ ಸರ್ಕಾರ ನಿಗದಿ ಮಾಡಿದ ಸೀಟ್ ಹಂಚಿಕೆಯ ಉದ್ದೇಶವನ್ನೇ ಹಾಳು ಮಾಡುತ್ತಿದೆ. ಶುಲ್ಕವನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ಯಾವುದೇ ಪ್ರಯತ್ನ ಮಾಡದಿರುವುದು ದುರದೃಷ್ಟಕರ. ರಾಜ್ಯದಲ್ಲಿ ನಾಯಿಕೊಡೆಯಂತೆ ಖಾಸಗಿ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡು ಗುಣಮಟ್ಟದ ವೃತ್ತಿಪರ ಶಿಕ್ಷಣ ಒದಗಿಸುವ ಮೂಲ ಉದ್ದೇಶ ಮರೆತು ಹಣಗಳಿಸುವ ಏಕಮಾತ್ರ ಗುರಿ ಹೊಂದಿರುವುದು ಸಮಾಜಕ್ಕೆ ಮಾರಕ. ನಿಗದಿಗಿಂತ ಹೆಚ್ಚು ಶುಲ್ಕ ವಸೂಲಿ ವಿದ್ಯಾರ್ಥಿಗಳು ಮತ್ತು ಪೋಷಕರ ಮೇಲೆ ಆರ್ಥಿಕ ಒತ್ತಡ ಹೇರುತ್ತದೆ. ನಿಗದಿಪಡಿಸಿದ ಶುಲ್ಕವಷ್ಟೇ ವಿದ್ಯಾರ್ಥಿಗಳಿಂದ ಪಡೆಯಬೇಕು ಎಂದು ಸ್ಪಷ್ಟವಾಗಿ ಹೇಳಿರುವ ಯುಜಿಸಿ ನಿಯಮಗಳನ್ನು ಖಾಸಗಿ ವಿಶ್ವವಿದ್ಯಾಲಯಗಳು ನೇರವಾಗಿ ಉಲ್ಲಂಘಿಸುತ್ತವೆ. ವಿಶ್ವವಿದ್ಯಾಲಯಗಳು ಇಂತಹ ನಿಯಮಗಳನ್ನು ಮೀರಿ ಕಾರ್ಯನಿರ್ವಹಿಸಲು ಅವಕಾಶ ನೀಡುವುದು, ಶಿಕ್ಷಣ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕುಂದಿಸುತ್ತದೆ ಮತ್ತು ಸರಳ ಹಿನ್ನೆಲೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕಷ್ಟಗೊಳಿಸುತ್ತದೆ. ಸರ್ಕಾರವು ತಕ್ಷಣವೇ ಏಕರೂಪದ ಶುಲ್ಕ ವ್ಯವಸ್ಥೆಯನ್ನು ಜಾರಿಗೆ ತಂದು, ಅದನ್ನು ಪರಸ್ಪರ ಒಪ್ಪಂದದ ಮೂಲಕ ಕಾನೂನುಬದ್ಧಗೊಳಿಸಿ, ಉಲ್ಲಂಘನೆಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಶುಲ್ಕ ನೀತಿಗಳಲ್ಲಿ ಪಾರದರ್ಶಕತೆಯನ್ನು ಕಡ್ಡಾಯಗೊಳಿಸಬೇಕು. ಉನ್ನತ ಶಿಕ್ಷಣವು ವ್ಯಾಪಾರವಾಗಬಾರದು. ನ್ಯಾಯ, ಸಮಾನತೆ ಮತ್ತು ಹೊಣೆಗಾರಿಕೆಯನ್ನು ಅರಿತುಕೊಂಡು ಖಾಸಗಿ ವೃತ್ತಿಪರ ವಿಶ್ವವಿದ್ಯಾಲಯಗಳು ಯುಜಿಸಿ ನಿಯಮಗಳನ್ನು ಪಾಲಿಸಬೇಕು ಹೊರತು ವಿದ್ಯಾರ್ಥಿಗಳಿಗೆ ಆರ್ಥಿಕ ಒತ್ತಡ ಹೇರಬಾರದು.

–ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.

ಆಹಾ! ಎಂತಹ ಘೋಷಣೆ!

ಮಾನ್ಯರೆ,

ಜನಸಂಖ್ಯೆಗೆ ಅನುಗುಣವಾಗಿ ಬಾರ್ ಮತ್ತು ವೈನ್‌ಶಾಪ್‌ಗಳಿಗೆ ಹೊಸದಾಗಿ ಪರವಾನಗಿ ನೀಡುವುದಾಗಿ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ್ ಘೋಷಿಸಿದ್ದಾರೆ. ('ಮೈಸೂರು ಮಿತ್ರ' 02.09.2025)

ಆಹಾ! ಎಂತಹ ಘೋಷಣೆ! ಬಾರ್ ಮತ್ತು ವೈನ್‌ಶಾಪ್‌ಗಳು ಇರಬೇಕಾದದ್ದು ಜನಸಂಖ್ಯೆಗೆ ಅನುಗುಣವಾಗಿ ಅಲ್ಲ. ಕುಡುಕರ ಸಂಖ್ಯೆಗೆ ಅನುಗುಣವಾಗಿ! ಜನಸಂಖ್ಯೆಗೆ ಅನುಗುಣವಾಗಿ ಸರಕಾರಿ ಶಾಲಾ ಕಾಲೇಜುಗಳು, ಆಸ್ಪತ್ರೆಗಳು, ಆಂಬುಲೆನ್ಸ್‌ಗಳು, ಸರಕಾರಿ ಬಸ್ಸುಗಳು, ಬಸ್ ನಿಲ್ದಾಣಗಳು, ತಂಗುದಾಣಗಳು, ಪಾರ್ಕುಗಳು, ವಾಚನಾಲಯಗಳು, ಅಂಗನವಾಡಿ ಕೇಂದ್ರಗಳು, ನ್ಯಾಯಬೆಲೆ ಅಂಗಡಿಗಳು, ಇಂದಿರಾ ಕ್ಯಾಂಟೀನುಗಳು, ಜನೌಷಧಿ ಕೇಂದ್ರಗಳು ಇರಬೇಕು ಎನ್ನುವುದು ಜಾಣತನ. ಜನಸಂಖ್ಯೆಗನುಗುಣವಾಗಿ ಬಾರ್ ಮತ್ತು ವೈನ್ ಶಾಪ್‌ಗಳು ಇರಬೇಕು ಎನ್ನುವುದು ಮೂರ್ಖತನ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಮೈಸೂರಿನ ಆಯಿಷ್ ದೇಶದ ಹೆಮ್ಮೆ

ಮಾನ್ಯರೆ,

ಮೈಸೂರಿನಲ್ಲಿರುವ ಆಯಿಷ್ ಸಂಸ್ಥೆಯ ವಜ್ರ ಮಹೋತ್ಸವದಲ್ಲಿ ಭಾಗಿಯಾಗಿ, ನವತಂತ್ರಜ್ಞಾನಗಳ ಬಳಕೆಯಿಂದ ದೇಶದಲ್ಲಿ ವಾಕ್ ಮತ್ತು ಶ್ರವಣ ಸಮಸ್ಯೆಯುಳ್ಳವರಿಗೆ ಅನೇಕ ನೂತನ ತಂತ್ರಜ್ಞಾನ ಈ ಕಾಲಘಟ್ಟದಲ್ಲಿ ಜಾರಿಗೆ ಬಂದಿದೆ. ಆದರೆ, ಇಂತಹ ತಂತ್ರಜ್ಞಾನಗಳನ್ನು ಸಾಮಾನ್ಯ ವರ್ಗದ ಜನತೆಗೂ ತಲುಪಿಸುವಲ್ಲಿ ಹೆಚ್ಚಿನ ಪರಿಶ್ರಮ ವಹಿಸುವುದು ಅಗತ್ಯವಿದೆ ಹಾಗೂ ಅವರ ನೆರವಿಗೆ ಮುಂದಾಗಿ ಶಾಶ್ವತವಾಗಿ ಸಮಸ್ಯೆ ಪರಿಹಾರಕ್ಕೆ ಮುಂದಾಗಬೇಕು ಎಂದು ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು ಅವರು ಕರೆ ನೀಡಿರುವುದು ಶ್ಲಾಘನೀಯ. ಶ್ರವಣ ಸಾಧನಗಳ ದೇಶಿ ಉತ್ಪಾದನೆಗೆ ಆತ್ಮ ನಿರ್ಭರ್ ಭಾರತದ ಯೋಜನೆಯನ್ನು ಪರಿಗಣಿಸಿ ಉದ್ದೇಶಿತ ಗುರಿ ತಲುಪಬೇಕಾದ ಅವಶ್ಯಕತೆ ಇದೆ ಎಂದು ಹೇಳಿರುವುದು ಹಾಗೂ ಮೈಸೂರಿನ ರಾಜಮನೆತನದ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರು ಉದಾರವಾಗಿ ಭೂಮಿ ಧಾನ ನೀಡಿರುವುದರ ಜೊತೆಗೆ ಅವರ ಕುಟುಂಬದ ಯದುವೀರ್ ಒಡೆಯರ್ ಅವರು ಉಪಸ್ಥಿತರಿರುವುದು ಖುಷಿ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿ ಮೈಸೂರಿನ ಆಯಿಷ್ ದೇಶದ ಹೆಮ್ಮೆ ಎಂದು ಹೇಳಿರುವುದು ಸ್ವಾಗತಾರ್ಹ.

ವರುಣ ಕ್ಷೇತ್ರದಲ್ಲಿ ಆಯಿಷ್ ಸಂಸ್ಥೆಯ ಕ್ಲಿನಿಕಲ್ ಮತ್ತು ಪುನರ್ವಸತಿ ಕಾರ್ಯವನ್ನು ಇನ್ನಷ್ಟು ವಿಸ್ತರಿಸಲು 10 ಎಕರೆ ಭೂಮಿಯನ್ನು ಉಚಿತವಾಗಿ ನಮ್ಮ ಸರ್ಕಾರ ನೀಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವುದು ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.

ಮೈಸೂರು ಸಮೀಪದ ಗ್ರಾಮಗಳಲ್ಲಿ ಓಡಾಡುತ್ತಿರುವ ಹುಲಿಗಳ ಹಿಡಿಯಿರಿ

ಮಾನ್ಯರೆ,

ಮೈಸೂರು ನಗರದ ಹೊರವಲಯದ ಇಲವಾಲ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಮೀಸಲು ಅರಣ್ಯದಲ್ಲಿ ಕಳೆದ ಎರಡು ತಿಂಗಳಿಂದ ಹುಲಿಯೊಂದು ತನ್ನ ಎರಡು ಮರಿಗಳೊಂದಿಗೆ ಸೇರಿಕೊಂಡಿರುವುದು ಸರಿಯಷ್ಟೇ. ಇತ್ತೀಚೆಗೆ ಹೆದ್ದಾರಿಯಲ್ಲಿನ ಗ್ರಾಮ ಕಾಮನಕೊಪ್ಪಲಿನಲ್ಲಿ ಎರಡು ಹಸುಗಳ ಮೇಲೆ ದಾಳಿ ಮಾಡಿ ಜೀವ ತೆಗೆದಿರುತ್ತದೆ. ಈಗ ಹುಲಿಯು ಇಲವಾಲದಲ್ಲಿರುವ ಬಾಬಾ ಅಣು ಸಂಶೋಧನಾ ಕೇಂದ್ರವನ್ನು ಹೊಕ್ಕಿರುತ್ತದೆ. ಇದರಿಂದಾಗಿ ಅಣು ಸಂಶೋಧನಾ ಕೇಂದ್ರದ ನೌಕರರು ಭಯದಿಂದ ಕರ್ತವ್ಯ ನಿರ್ವಹಿಸುವಂತಾಗಿದೆ. ರಾತ್ರಿಯ ವೇಳೆಯಲ್ಲಿ ಕರ್ತವ್ಯ ನಿರ್ವಹಿಸುವುದು ಬಹಳ ಕಷ್ಟವಾಗಿದೆ.

ಹಾಗೆಯೇ ಇಲವಾಲ ಸುತ್ತಮುತ್ತಲಿನ ಗ್ರಾಮದ ಜನರೂ ಸಹ ಬಹಳ ಹೆದರಿಕೆಯಿಂದ ಓಡಾಡುವ ಪರಿಸ್ಥಿತಿ ಬಂದಿದೆ. ಆದುದರಿಂದ ಅರಣ್ಯ ಇಲಾಖೆಯ ಸಿಬ್ಬಂದಿಯವರು ಆದಷ್ಟು ಬೇಗ ಗಮನಹರಿಸಿ ಜಾಗ್ರತೆಯಿಂದ ಹುಲಿ ಹಾಗೂ ಅದರ ಮರಿಗಳನ್ನು ಸೆರೆಹಿಡಿಯಬೇಕೆಂದು ಮನವಿ.

–ಸೋಮಶೇಖರ್, ಇಲವಾಲ

ಮಂಥನ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ನಮ್ಮೂರ ಸಾಹಿತ್ಯ ಧ್ರುವತಾರೆ ತ್ರಿವೇಣಿ

ಇತ್ತೀಚೆಗೆ ಹಾಗೇ ಸುಮ್ಮನೆ ಯಾವುದಾದರೊಂದು ಸಿನಿಮಾ ನೋಡೋಣವೆಂದು ನೆಟ್‌ಫ್ಲಿಕ್ಸ್‌ನಲ್ಲಿ ಹುಡುಕುತ್ತಿರುವಾಗ, Feel Good Moviesನ ಪಟ್ಟಿಯಲ್ಲಿ 'ಮಿಸ್ಸೆಸ್ ಹ್ಯಾರಿಸ್ ಗೋಸ್ ಟು ಪ್ಯಾರಿಸ್' ಚಲನಚಿತ್ರ ರೆಕಮೆಂಡೇಷನ್‌ನಲ್ಲಿ ಇದ್ದುದನ್ನು ಕಂಡು ಅದರ ವಿವರ ಓದಿದ ಮೇಲೆ ಕುತೂಹಲವೆನಿಸಿ ನೋಡಬೇಕೆನಿಸಿ, ರಿಮೋಟ್ ಕ್ಲಿಕ್ಕಿಸಿದೆ.

ಆಕೆ ಲಂಡನ್ ನಗರದಲ್ಲಿ ವಾಸಿಸುವ ಒಬ್ಬ ಸಾಮಾನ್ಯ ಸೈನಿಕನ ಪತ್ನಿ. ಈಗ ವಿಧವೆ. ಗಂಡ ಸತ್ತ ನಂತರ ಈಕೆ ಮನೆಗೆಲಸ ಮಾಡಿಕೊಂಡು ಹೇಗೋ ಜೀವನಯಾಪನೆ ಮಾಡುತ್ತಿರುತ್ತಾಳೆ. ಆಕೆ ಕೆಲಸ ಮಾಡುತ್ತಿರುವ ಮನೆಯೊಂದರ ಮಾಲಕಿ ಬಳಿ ಪ್ಯಾರಿಸ್‌ನ ಪ್ರಸಿದ್ಧ ಡಿಸೈನರ್ ಒಬ್ಬ ತಯಾರಿಸಿದ್ದ ಸುಂದರ ಉಡುಪು ಮಿ.ಹ್ಯಾರಿಸ್‌ನ ಮನಸೆಳೆದಿರುತ್ತದೆ. ಎಷ್ಟರಮಟ್ಟಿಗೆ ಎಂದರೆ, ಒಂದಲ್ಲಾ ಒಂದು ದಿನ ತಾನು ಅದೇ ಡಿಸೈನರ್ ಬಳಿ ತನಗಾಗಿ ಡ್ರೆಸ್ ಒಂದನ್ನು ಖರೀದಿಸಿಯೇ ತೀರುತ್ತೇನೆ ಎಂಬ ನಿರ್ಧಾರದೊಂದಿಗೆ ತನ್ನೆಲ್ಲ ಸಂಪಾದನೆಯ ಹಣವನ್ನು ಆಕೆ ಕೂಡಿಟ್ಟಿರುತ್ತಾಳೆ. ಪ್ಯಾರಿಸ್‌ನ ಆ ದುಬಾರಿ ಡಿಸೈನರ್‌ನ ಡ್ರೆಸ್ ಕೊಳ್ಳುವ ಹ್ಯಾರಿಸ್‌ಳ ಕನಸು ಆಕೆಯ ಒಡತಿಗೆ ಹಾಸ್ಯದ ವಿಷಯವೆನಿಸುತ್ತದೆ. ಅದೇ ಸಮಯಕ್ಕೆ ಸೈನಿಕರ ವಿಧವೆಯರಿಗಾಗಿ ಸರ್ಕಾರ ಕೊಡಮಾಡುವ ಒಂದಷ್ಟು ಹಣವೂ ಆಕೆಯ ಕೈಸೇರುತ್ತದೆ. ತನ್ನ ಉಳಿತಾಯದ ಹಣದೊಂದಿಗೆ ಅದನ್ನೂ ಸೇರಿಸಿ ಮಿ.ಹ್ಯಾರಿಸ್, ಪ್ಯಾರಿಸ್‌ಗೆ ಹೊರಟೇ ಬಿಡುತ್ತಾಳೆ. ಅಲ್ಲಿ ನಡೆಯುವ ಒಂದಷ್ಟು ಘಟನೆಗಳಿಂದಾಗಿ ಮಿ.ಹ್ಯಾರಿಸ್ ಎಲ್ಲರಿಗೂ ಪ್ರಿಯಳಾಗುತ್ತಾಳೆ. ಪ್ರೀತಿಸಿದ್ದರೂ ಅಭಿವ್ಯಕ್ತಿಸಲು ಹಿಂಜರಿಯುತ್ತಿದ್ದ ಜೋಡಿಯೊಂದನ್ನು ಒಂದು ಮಾಡುತ್ತಾಳೆ. ಪ್ರಸಿದ್ಧವಾಗಿದ್ದರೂ ನಷ್ಟದಲ್ಲಿದ್ದ ಡಿಸೈನರ್‌ನ ಕಂಪನಿಯನ್ನು ಉಳಿಸಲು ಸರಿಯಾದ ಉಪಾಯ ಹೊಂದಿದ್ದ ವ್ಯಕ್ತಿಯನ್ನು ಡಿಸೈನರ್‌ನ ಮುಂದೆ ಕರೆದುಕೊಂಡು ಹೋಗಿ ನಿಲ್ಲಿಸುತ್ತಾಳೆ. ಆಶ್ಚರ್ಯಕರವೆಂಬಂತೆ ಕಂಪನಿಯ ಮಾಲೀಕನಿಗೆ ಆ ಉಪಾಯ ಇಷ್ಟವಾಗಿ, ಆ ಉಪಾಯ ನೀಡಿದವನಿಗೆ ಬಡ್ತಿ ದೊರೆತಿದ್ದು ಮಾತ್ರವಲ್ಲದೆ, ಕಂಪನಿ ಹೊಸ ಹುರುಪಿನಿಂದ ಕೆಲಸ ಮಾಡಲು ತೊಡಗುತ್ತದೆ. ಸಿದ್ಧವಾದ ತನ್ನ ಉಡುಪನ್ನು ತೆಗೆದುಕೊಂಡು ಲಂಡನ್‌ಗೆ ಮರಳುವ ಹ್ಯಾರಿಸ್, ಆ ಡ್ರೆಸ್ ಅನ್ನು ತಾನು ಇನ್ನೂ ತೊಡದಿದ್ದರೂ, ಒಬ್ಬ ಉದಯೋನ್ಮುಖ ಮಾಡೆಲ್‌ಗೆ ಅವಳ ಆಡಿಷನ್ ದಿನ ಧರಿಸಲು ಪ್ರೀತಿಯಿಂದ ಮನಸಾರೆ ನೀಡುತ್ತಾಳೆ. ದುರದೃಷ್ಟವಶಾತ್ ಆ ಹುಡುಗಿ ಬೆಂಕಿ ಅಪಘಾತಕ್ಕೆ ಸಿಲುಕಿ, ಅವಳಿಗೆ ಅಪಾಯವಾಗದಿದ್ದರೂ, ಮಿ.ಹ್ಯಾರಿಸ್‌ನ ಆ ಕನಸಿನ ಡ್ರೆಸ್ ಸುಟ್ಟುಹೋಗುತ್ತದೆ. ಆದರೂ ಮಿ.ಹ್ಯಾರಿಸ್ ನಿಟ್ಟುಸಿರೊಂದನ್ನು ಹೊರಹಾಕಿ ಆ ಹುಡುಗಿ ಬಚಾವಾಗಿದ್ದಕ್ಕೆ ಸಂತಸಪಡುತ್ತಾಳೆ. ಈ ವಿಷಯ ಪತ್ರಿಕೆಯಲ್ಲಿಯೂ ಪ್ರಕಟವಾಗುತ್ತದೆ. ಕಂಪನಿಯ ಮಾಲೀಕ ಅದನ್ನು ಓದಿ ಮಿ.ಹ್ಯಾರಿಸ್‌ಳ ಎಲ್ಲ ಉಪಕಾರವನ್ನು ನೆನಪಿಸಿಕೊಂಡು ಅವಳಿಗೆ ಮತ್ತೊಂದು ಡ್ರೆಸ್ ಅನ್ನು ತಯಾರಿಸಿ ಕಳುಹಿಸುತ್ತಾನೆ. ಅದನ್ನು ನಿರೀಕ್ಷೆಯೇ ಮಾಡಿರದ ಮಿ. ಹ್ಯಾರಿಸ್‌ಳ ಸಂತಸವನ್ನು ನಾವು ಅನುಭವಿಸಿಯೇ ಅರಿಯಬೇಕು!

ಈ ಚಿತ್ರ ನೋಡಿ ಮುಗಿಸಿದ ತಕ್ಷಣ ನನಗೆ ತ್ರಿವೇಣಿ ಅವರ 'ಕಾಶೀಯಾತ್ರೆ' ಕಾದಂಬರಿಯ ನೆನಪಾಯಿತು. ಎಲ್ಲಿಯ ಲಂಡನ್ ಎಲ್ಲಿಯ ಮೈಸೂರಿನ ಅಗ್ರಹಾರ....! ಕಾಶೀಯಾತ್ರೆಯಲ್ಲಿಯೂ ಪಾತಜ್ಜಿ ವಿಧವೆ. ಅವಳ ಜೀವನದ ಗುರಿಯೇ ಕಾಶೀಯಾತ್ರೆ. ವಿಧವೆಯಾದ ಆಕೆ ಜೀವನದುದ್ದಕ್ಕೂ ಯಾವ ಸುಖ ಸಂತೋಷವನ್ನೂ ಅನುಭವಿಸದೇ, ಪರರ ಹಿತಕ್ಕಾಗಿ ದುಡಿಯುತ್ತಾ, ಸಹಾಯ ಮಾಡುತ್ತಾ ಬಂದವಳು. ತನ್ನ ಅಲ್ಪಸ್ವಲ್ಪ ಗಳಿಕೆಯಲ್ಲಿಯೇ ತಕ್ಕಮಟ್ಟಿಗೆ ಉಳಿಸುತ್ತಾ ಕಾಶೀಯಾತ್ರೆಯ ಕನಸನ್ನು ಕಾಣುತ್ತಿದ್ದವಳು. ಆದರೆ ತನ್ನ ಮುಂದೆಯೇ ಬೆಳೆದ ಅನಾಥ ಮುದ್ದು ಹುಡುಗಿಯ ಮದುವೆ ನಿಂತುಹೋಗುತ್ತದೆ ಎಂದಾಗ ಎರಡನೆಯ ಯೋಚನೆ ಮಾಡದೆ ತನ್ನೆಲ್ಲ ಉಳಿಕೆಯ ಹಣವನ್ನು ನೀಡಿ ಮದುವೆ ಆಗುವಂತೆ ಮಾಡುತ್ತಾಳೆ. ತನಗೆ ಯಾವ ರೀತಿಯಲ್ಲಿಯೂ ಸಂಬಂಧವಿರದ ಹುಡುಗಿಯ ಭವಿಷ್ಯಕ್ಕಾಗಿ ತುಡಿಯುವ ನಮ್ಮ ನಿಸ್ವಾರ್ಥ ಪಾತಜ್ಜಿಯಂತೆಯೇ ಮಿ. ಹ್ಯಾರಿಸ್ ಎನಿಸಿದ್ದು ಸಹಜವೇ, ಅಲ್ಲವೇ?

'ಮಿಸ್ಸಸ್ ಹ್ಯಾರಿಸ್ ಗೋಸ್ ಟು ಪ್ಯಾರಿಸ್' ಚಿತ್ರ ಕೂಡ ಕಾದಂಬರಿ ಆಧಾರಿತ ಚಿತ್ರವೇ! ಪಾಲ್ ವಿಲಿಯಮ್ ಗಾಲಿಕೋನ 'ಮಿಸ್ಸೆಸ್ ಹ್ಯಾರಿಸ್ ಗೋಸ್ ಟು ಪ್ಯಾರಿಸ್' ಚಿತ್ರದ ರೂಪ. ಲೆಸಿ ಮ್ಯಾನ್‌ವಿಲ್‌ನ ಸಹಜಾಭಿನಯ ಚಿತ್ರದ ಜೀವಾಳ. 1950ರ ಸಮಯದ ಲಂಡನ್‌ನಲ್ಲಿ ಈ ಕತೆ ನಡೆದರೆ, ಅದೇ ಸುಮಾರಿನಲ್ಲಿ ಇಲ್ಲಿ ಕಾಶೀಯಾತ್ರೆಯ ಕತೆ ನಡೆಯುತ್ತದೆ! ನನಗೆ ಇವ್ಯಾವುವೂ ತಿಳಿದಿರಲಿಲ್ಲ. ಚಿತ್ರ ನೋಡಿದ ಮೇಲೆ ಅದರ ಬಗ್ಗೆ ಹೆಚ್ಚು ತಿಳಿಯಲು ಗೂಗಲ್ ಮೊರೆ ಹೊಕ್ಕಾಗ ಇವೆಲ್ಲ ತಿಳಿಯಿತು. ನನಗಾದ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ.

ಕಾಕತಾಳೀಯವೆಂಬಂತೆ ತ್ರಿವೇಣಿ ಅವರ ಹುಟ್ಟುಹಬ್ಬ ಸೆಪ್ಟೆಂಬರ್ 1, ಸನಿಹದಲ್ಲಿಯೇ ಇತ್ತು. ಹಾಗಾಗಿ ಇದನ್ನು ಹಂಚಿಕೊಳ್ಳಲು ಇದಕ್ಕಿಂತ ಸುಸಂದರ್ಭ ಮತ್ತೊಂದಿಲ್ಲವೆನಿಸಿತು.

ಪ್ರಪಂಚದ ಯಾವ ಮೂಲೆಗೆ ಹೋದರೂ ಸಂಬಂಧಗಳು– ಭಾವನೆಗಳು, ಸುಖ–ದುಃಖಗಳು, ನೋವು–ನಲಿವುಗಳು ಒಂದೇ, ಅಲ್ಲವೇ? ಎಲ್ಲ ಕಡೆಯೂ ಎಲ್ಲ ಕಾಲದಲ್ಲಿಯೂ ಒಳ್ಳೆಯವರು– ಕೆಟ್ಟವರು ಜೊತೆಜೊತೆಗೇ ಜೀವಿಸಿರುತ್ತಾರೆ. ಅದಕ್ಕೆ ಉದಾಹರಣೆ



ಲೇಖಕಿ ತ್ರಿವೇಣಿ

> "ತ್ರಿವೇಣಿಯವರನ್ನು ಓದಿದಾಗ, ಯಾರೇ ಆದರೂ ಅವರ ಸಾಹಿತ್ಯವನ್ನು ಮೆಚ್ಚುವುದು ಸಹಜ. ಆದರೆ ನನಗೆ ಅವರ ಕಾದಂಬರಿಗಳನ್ನು ಓದಿದಾಗ ಭಾರಿ ಆಶ್ಚರ್ಯವಾಗಿತ್ತು. ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಅವರು ಸೃಷ್ಟಿಸಿದ ಪಾತ್ರಗಳ ವೈವಿಧ್ಯ, ಅವುಗಳನ್ನು ರೂಪಿಸುವಾಗ ಅವಕ್ಕೆ ಧಾರೆ ಎರೆದ ವ್ಯಕ್ತಿತ್ವಗಳಲ್ಲಿನ ಗಾಂಭೀರ್ಯ, ಆಳ, ಜೀವನದ ಸಂಕೀರ್ಣತೆ ತೆರೆದಿಡುವ ಪರಿ, ಮನುಷ್ಯ ಸ್ವಭಾವಗಳ ಅನಾವರಣ ಈ ಎಲ್ಲವೂ ಹೇಗೆ ಸಾಧ್ಯವಾಯಿತು ಅವರಿಗೆ ಎನ್ನುವುದು ಈಗಲೂ ನನ್ನನ್ನು ಕಾಡುವ ಪ್ರಶ್ನೆ.

ನನ್ನ ಕಣ್ಣಮುಂದೆ ಮತ್ತೊಮ್ಮೆ ಬಂದಂತಾಯಿತು.

ತ್ರಿವೇಣಿ ಅವರನ್ನು ಕನ್ನಡಿಗರು ಮರೆಯುವ ಹಾಗೆಯೇ ಇಲ್ಲ. ಕನ್ನಡ ಸಾಹಿತ್ಯ ಲೋಕಕ್ಕೆ ಚಿಕ್ಕ ವಯಸ್ಸಿನಲ್ಲಿಯೇ ಕಾಲಿಟ್ಟು ಅಪರಿಮಿತ ವೇಗದಲ್ಲಿ ಕಾದಂಬರಿಗಳು ಮತ್ತು ಸಣ್ಣಕಥೆಗಳನ್ನು ರಚಿಸಿ, ಕನ್ನಡದ ಹೆಣ್ಣುಮಕ್ಕಳಿಗೆ ಓದಿನ ರುಚಿ ಹತ್ತಿಸಿ, ವಿಮರ್ಶಕರೂ ಮೂಗಿನ ಮೇಲೆ ಬೆರಳಿಡುವಂತೆ ಬರೆದು ಸೈ ಎನಿಸಿಕೊಂಡು, ಚಲನಚಿತ್ರ ಪರದೆಯ ಮೇಲೂ ತನ್ನ ಪಾತ್ರಗಳನ್ನು ಚಿರಸ್ಥಾಯಿಯಾಗಿಸಿ, ಬಂದ ವೇಗದಲ್ಲಿಯೇ ಇಹಲೋಕದಿಂದ ನಡೆದುಹೋದ ತ್ರಿವೇಣಿ, ಮಹಿಳಾ ಲೇಖಕಿಯರಿಗೆ ಧ್ರುವತಾರೆಯೇ....

ತ್ರಿವೇಣಿಯವರ ಒಂದೊಂದು ಕಾದಂಬರಿಯೂ ಹೆಣ್ಣಿನ ಮನೋಲೋಕಕ್ಕೆ ಒಂದು ಬೆಳಕಿನಕಿಂಡಿ. ಅವರ ನಾಯಕಿಯರಲ್ಲಿ ಸುಂದರ ದಾಂಪತ್ಯದ ಸಾಕ್ಷಿಗಳಿದ್ದಾರೆ, ಕ್ರೌರ್ಯಕ್ಕೆ ನಲುಗಿದವರಿದ್ದಾರೆ, ಸೂಕ್ಷ್ಮ ಮನಃಸ್ಥಿತಿಯಿಂದ ಮಾನಸಿಕ ತೊಂದರೆಗೊಳಗಾದವರಿದ್ದಾರೆ, ಸಾಧನೆಗೈದವರಿದ್ದಾರೆ, ಸಮಾಜದ ಟ್ಯಾಬೂಗಳಿಂದ ನರಳಿದವರಿದ್ದಾರೆ, ಸಿಹಿಪ್ರೇಮದ ಸವಿಯುಣಿಸುವವರಿದ್ದಾರೆ, ನೊಂದರೂ ಬೆಳಕನ್ನು ಕಂಡುಕೊಂಡವರಿದ್ದಾರೆ, ತ್ಯಾಗಮಯಿಗಳಿದ್ದಾರೆ, ಸಮಾಜದ ನಿರ್ಬಂಧಗಳನ್ನು ಸಕಾರಣವಾಗಿ ದಾಟಿದವರಿದ್ದಾರೆ, ದಿಟ್ಟ ನಿರ್ಧಾರವನ್ನು ತೆಗೆದುಕೊಂಡವರಿದ್ದಾರೆ? ಅಬ್ಬಾ!

ತ್ರಿವೇಣಿಯವರನ್ನು ಓದಿದಾಗ, ಯಾರೇ ಆದರೂ ಅವರ ಸಾಹಿತ್ಯವನ್ನು ಮೆಚ್ಚುವುದು ಸಹಜ. ಆದರೆ ನನಗೆ ಅವರ ಕಾದಂಬರಿಗಳನ್ನು ಓದಿದಾಗ ಭಾರಿ ಆಶ್ಚರ್ಯವಾಗಿತ್ತು. ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಅವರು ಸೃಷ್ಟಿಸಿದ ಪಾತ್ರಗಳ ವೈವಿಧ್ಯ, ಅವುಗಳನ್ನು ರೂಪಿಸುವಾಗ ಅವಕ್ಕೆ ಧಾರೆ ಎರೆದ ವ್ಯಕ್ತಿತ್ವಗಳಲ್ಲಿನ ಗಾಂಭೀರ್ಯ, ಆಳ, ಜೀವನದ ಸಂಕೀರ್ಣತೆಯನ್ನು ತೆರೆದಿಡುವ ಪರಿ, ಮನುಷ್ಯ ಸ್ವಭಾವಗಳ ಅನಾವರಣ ಈ ಎಲ್ಲವೂ ಹೇಗೆ ಸಾಧ್ಯವಾಯಿತು ಅವರಿಗೆ ಎನ್ನುವುದು ಈಗಲೂ ನನ್ನನ್ನು ಕಾಡುವ ಪ್ರಶ್ನೆ.

'ಹೂವು ಹಣ್ಣು' ಕಾದಂಬರಿ ರಚಿಸುವಾಗ ತ್ರಿವೇಣಿ ಅವರಿಗೆ ಕೇವಲ 25 ವರ್ಷಗಳು! ಬೆಕ್ಕಿನ ಕಣ್ಣು ಹೊರಬಂದಾಗ 26 ವರ್ಷಗಳು, 'ಶರಪಂಜರ' ಬರೆದಾಗ 33. ಹೊರಜಗತ್ತಿನ ಪರಿಚಯ ಮಾಡಿಕೊಳ್ಳಲು ಹೆಣ್ಣಿಗೆ ಇನ್ನೂ ಅಷ್ಟಾಗಿ ಸ್ವಾತಂತ್ರ್ಯ ಸಿಕ್ಕಿರದ ಕಾಲ. ಅಂತಹ ಒಂದು ಕಾಲಘಟ್ಟದಲ್ಲಿ ಸಮಾಜದಲ್ಲಿನ ಅನಿಷ್ಟ ಪದ್ಧತಿಗಳು, ಹೆಣ್ಣಿನ ಸಂದಿಗ್ಧಗಳು, ಮಾನಸಿಕ ಅಸ್ವಸ್ಥತೆಯ ಬಗ್ಗೆ ಮಾತ್ರವಲ್ಲದೆ ಅದಕ್ಕೆ ಪರಿಹಾರ ಸುಲಭ ಸಾಧ್ಯ ಎಂಬ ಸತ್ಯವನ್ನು ತ್ರಿವೇಣಿಯವರು ಹೇಳುತ್ತಾರೆ. ಅವರಿಗೆ ಹೇಗೆ ಸಾಧ್ಯವಾಯಿತು?!!

ಹೆನ್ರಿಕ್ ಇಬ್ಸನ್‌ನ The Dolls House ನಾಟಕ 1879ರಲ್ಲಿ ರಚಿತವಾಗಿದ್ದು. ಆ ನಾಟಕದಲ್ಲಿ ನಾಯಕಿ ನೋರಾ ತೆಗೆದುಕೊಳ್ಳುವ ನಿರ್ಧಾರ, ಅಂದಿನ ಸಮಾಜದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿತ್ತು. ತ್ರಿವೇಣಿ ಅವರ 'ಬೆಳ್ಳಿಮೋಡ' ಕಾದಂಬರಿಯಲ್ಲಿ ನಾಯಕಿ ಇಂದಿರೆ ತೆಗೆದುಕೊಳ್ಳುವ ನಿರ್ಧಾರವೂ ಅಷ್ಟೇ Path Breaking ಎನ್ನುವುದು ನಿರ್ವಿವಾದಿತ. 'ಹೂವುಹಣ್ಣು' ಕಾದಂಬರಿಯಲ್ಲಿ ಆ ತಾಯಿಯ ಅನಿವಾರ್ಯತೆ, ನೋವು, ತೊಳಲಾಟ, ಅಸಹಾಯಕತೆ ಓದುಗರ ಕಣ್ಣಲ್ಲಿ ನೀರು ಜಿನುಗಿಸುವ ಜೊತೆಗೇ ವೇಶ್ಯಾವಾಟಿಕೆಯ ಕರಾಳ ಲೋಕ ಬೆಚ್ಚಿಬೀಳಿಸುತ್ತದೆ. ಮಗಳ ರಕ್ಷಣೆಗಾಗಿ ದುರ್ಗೆಯಾಗುವ ಆ ತಾಯಿ ಮೊಮ್ಮಗಳಿಗಾಗಿ ಮಿಡಿಯುತ್ತಾಳೆ, ಸಂತಸದಿಂದ ದೂರ ಸರಿಯುತ್ತಾಳೆ. ಎಂತಹ ಸಶಕ್ತ ನಿರೂಪಣೆ!

'ಶರಪಂಜರ', 'ದೂರದ ಬೆಟ್ಟ', 'ತಾವರೆ ಕೊಳ', 'ಮುಚ್ಚಿದ ಬಾಗಿಲು' ಅವರ ಮನೋವಿಜ್ಞಾನದ ಮೇಲಿನ ಶ್ರದ್ಧೆ ಮತ್ತು ಪ್ರೀತಿಗಳಿಗೆ ಅತ್ಯುತ್ತಮ ಉದಾಹರಣೆಗಳು. ಮನೋವಿಜ್ಞಾನದಲ್ಲಿ ಅವರಿಗೆ ರ್‍ಯಾಂಕ್ ಬಂದಿತ್ತು, ಚಿನ್ನದ ಪದಕ ದಕ್ಕಿತ್ತು ಎನ್ನುವುದು ನಿಜವಾದರೂ, ಮನೋವಿಜ್ಞಾನವನ್ನು ಸಾಹಿತ್ಯದ ಜೊತೆಗೆ ಹದವಾಗಿ ಬೆರೆಸಿ ಕಾದಂಬರಿಯ ರಸಪಾಕ ತೆಗೆಯುವ ಅನನ್ಯ ಕಲೆ ತ್ರಿವೇಣಿ ಅವರಿಗೆ ವರವಾಗಿ ಬಂದದ್ದು.

'ವಸಂತಗಾನ', 'ಹೃದಯಗೀತೆ', 'ಬಾನು ಬೆಳಗಿತು' ಕಾದಂಬರಿಗಳಂತೂ ಮಧುರಾನುಭೂತಿ ನೀಡುತ್ತಲೇ ಆದರ್ಶ ದಾಂಪತ್ಯದ ಕನಸ ಬಿತ್ತುತ್ತವೆ. 'ಹೃದಯಗೀತೆ' ಕಾದಂಬರಿ ವಯಸ್ಕ ಪುರುಷ ಮತ್ತು ಹದಿಹರೆಯದ ಹುಡುಗಿಯ ನಡುವಿನ ಪ್ರೇಮದಕತೆ. ಒಂದು ತುಂಟ ಮುದ್ದಾದ ಹಾಗೂ ಪ್ರಬುದ್ಧ ಪ್ರೇಮ ಪ್ರಸಂಗವಿದು.

'ಹಣ್ಣೆಲೆ ಚಿಗುರಿದಾಗ' ತ್ರಿವೇಣಿ ಅವರ ವಿಶಿಷ್ಟ ಕಾದಂಬರಿ. ಇಲ್ಲಿ ವಿಧವಾ ವಿವಾಹದ ಪರಿಕಲ್ಪನೆ. ಆದರೆ ಇಡೀ ಕಾದಂಬರಿಯ ನಾಯಕ ಒಬ್ಬ ನಿವೃತ್ತ ವ್ಯಕ್ತಿ. ತುಂಬು ಸಂಸಾರದ ಯಜಮಾನನಾದ ಈತ ನಿವೃತ್ತಿಯ ನಂತರ ಸಮಯ ಕಳೆಯಲು ರೂಢಿಸಿಕೊಳ್ಳುವ ಹವ್ಯಾಸಗಳು ನಗೆಯುಕ್ಕಿಸಿದರೆ, ಮಗಳ ವೈಧವ್ಯವನ್ನು ನೋಡಲಾಗದ ಅವನ ಅಸಹಾಯಕತೆ ನಮ್ಮನ್ನು ನೋಯಿಸುತ್ತದೆ. ಸಂಪ್ರದಾಯಶೀಲನಾದ ಆತ ಮಗಳ ಮರುಮದುವೆಗೆ ಸಮ್ಮತಿಸುತ್ತಾನೆ, ಅಲ್ಲಿಗೆ ಹಣ್ಣೆಲೆ ಚಿಗುರುತ್ತದೆ! ವಯೋವೃದ್ಧನೊಬ್ಬನನ್ನು ನಾಯಕನಾಗಿಸಿ ಕಾದಂಬರಿ ಬರೆದ ತ್ರಿವೇಣಿ ಅವರ ಕ್ರಿಯಾಶೀಲತೆಗೆ ನಮ್ಮ Hats Off!!

'ಮುಕ್ತಿ', 'ಕಂಕಣ', 'ಅವಳ ಮನೆ', 'ಅವಳ ಮಗಳು' ಹೋರಾಟದ ಕತೆಗಳಾದರೆ, 'ಅಪಜಯ', 'ಅಪಸ್ವರ', 'ಸೋತು ಗೆದ್ದವಳು' ದುರಂತಗಳು. 'ಸೋತುಗೆದ್ದವಳು' ಕಾದಂಬರಿ ಕೂಡ ಬಹುವಿಶಿಷ್ಟ. ಇಲ್ಲಿ ಗಂಡ ತನ್ನ ಪತ್ನಿ ದುರ್ಬಲ ಘಳಿಗೆಯಲ್ಲಿ ಪರಪುರುಷನೊಡನೆ ಸಂಬಂಧ ಬೆಳೆಸಿದ ವಿಷಯ ತಿಳಿದಾಗ, ತಾನು ವಿದೇಶದಲ್ಲಿ ಮಾಡಿದ ತಪ್ಪನ್ನು ಮನಸ್ಸಿಗೆ ತಂದುಕೊಂಡು, ಹೆಂಡತಿಯೂ ಮನುಷ್ಯಳೇ ಎಂದು ಅರಿತು ಅವಳನ್ನು ಸ್ವೀಕರಿಸುತ್ತಾನೆ. ಕೆಲವು ಅನಿವಾರ್ಯ ಕಗ್ಗಂಟಿನಂತಹ ಸಂದರ್ಭಗಳಲ್ಲಿ ಗಂಡಸು, ತನ್ನ ಹೆಂಡತಿಯೂ ಮನುಷ್ಯ ಮಾತ್ರಳೇ, ತನ್ನಂತೆಯೇ ಅವಳ ವ್ಯಕ್ತಿತ್ವವೂ ಬಲಾಬಲಗಳ ಮಿಶ್ರಣ ಎಂದು ಯೋಚಿಸಿದರೆ ಗಂಡು ಹೆಣ್ಣಿನ ಸಂಬಂಧದ ಚಿತ್ರಣವೇ ಬೇರೆಯಾಗುತ್ತದೆ ಎಂದು ಅಂದೇ ಹೇಳಿದ್ದ ತ್ರಿವೇಣಿಯವರ ಪ್ರಗತಿಗಾಮಿ ಯೋಚನೆ ಅದ್ಭುತ.

ಅವರ ಕತೆಗಳೂ ಮನೋಹರವಾದುವೆ. ಹೆಂಡತಿಯ ಹೆಸರು, ನರಬಲಿ, ಸಮಸ್ಯೆಯ ಮಗು, ಕೊನೆಯ ನಿರ್ಧಾರ ಕತೆಗಳು ಇಂದಿಗೂ ಪ್ರಸಿದ್ಧ. ಹೆಣ್ಣಿನ ಜೀವನದ ಎಲ್ಲ ಮಗ್ಗುಲುಗಳನ್ನು ಅನ್ವೇಷಿಸಿದ ತ್ರಿವೇಣಿಯವರು ನಮ್ಮೊಂದಿಗೆ ಹೆಚ್ಚುಕಾಲ ಇರಬೇಕಿತ್ತು. ಹತ್ತಾರು ಮುದ್ರಣಗೊಂಡಿರುವ, ಮುದ್ರಣಗೊಳ್ಳುತ್ತಲೇ ಇರುವ ಅವರ ಕತೆ–ಕಾದಂಬರಿಗಳು ಎಂದಿಗೂ Outdated ಎನಿಸುವ ಮಾತೇ ಇಲ್ಲ.

ಭೌತಿಕವಾಗಿ ಅವರಿಲ್ಲ. ನಿಜ, ಆದರೂ ಅವರು ಸೃಷ್ಟಿಸಿದ ಪಾತ್ರಗಳು ಒಂದಲ್ಲ ಒಂದು ರೀತಿಯಲ್ಲಿ ನಮ್ಮ ನಿಮ್ಮ ಸುತ್ತ ಕಾಣಸಿಗುತ್ತಲೇ ಇರುತ್ತವೆ ಇಂದಿಗೂ ತ್ರಿವೇಣಿಯವರ ನೆನಪಿನಲ್ಲಿ ಸಾಹಿತ್ಯ ಕಮ್ಮಟಗಳು, ಕಥಾ ಸ್ಪರ್ಧೆಗಳು ನಡೆಯುತ್ತವೆ. ಅವರ ಕೆಲವು ಕತೆಗಳು ಮತ್ತು ಕಾದಂಬರಿಗಳು ಹಿಂದಿ, ತೆಲುಗು ಹಾಗೂ ಇಂಗ್ಲಿಷ್‌ಗೆ ಅನುವಾದಗೊಂಡಿವೆ. ಆಡಿಯೋ ಬುಕ್‌ಗಳು ಅವರ ಕಾದಂಬರಿಗಳನ್ನು ಕೇಳಿಸುತ್ತಿವೆ. ಆ ಸರಣಿಗಾಗಿ ಅವರ ಒಂದು ಕಾದಂಬರಿ ಓದಿದಾಗ ನನಗೆ ಆದ ಪುಳಕ ಅವಿಸ್ಮರಣೀಯ. ಚಲನಚಿತ್ರ–ಧಾರಾವಾಹಿಗಳು ಅವರ ಪಾತ್ರಗಳನ್ನು ನಮ್ಮ ಮುಂದೆ ಜೀವಂತವಾಗಿಸಿವೆ. ಅವರ ಮಗಳು ಮೀರಾ ಶಂಕರ್ ತ್ರಿವೇಣಿ ಅವರು ಬಾಳಿ ಬದುಕಿದ್ದ ಮನೆಯನ್ನು ಸ್ಮಾರಕವಾಗಿಸಿ ಇನ್ನೇನು ಸಾರ್ವಜನಿಕ ವೀಕ್ಷಣೆಗೆ ತೆರೆಯಲಿದ್ದಾರೆ. ಇವೆಲ್ಲಾ ಪ್ರಯತ್ನಗಳು ಮತ್ತೆ ಮತ್ತೆ ನಮಗೆ ತ್ರಿವೇಣಿಯವರನ್ನು ನೆನಪಿಸುತ್ತಾ ಅವರನ್ನು ಅಜರಾಮರನ್ನಾಗಿಸಿವೆ. ಹಾಗಾಗಿ ಅವರು ಚಿರಂಜೀವಿ.

ಮೈಸೂರು ವಿವಿಯಲ್ಲಿ ಕೃತಕ ಬುದ್ಧಿಮತ್ತೆ ಕುರಿತ ಎರಡು ದಿನಗಳ ಕಾರ್ಯಾಗಾರ



ಮೈಸೂರು ವಿವಿ ಇಎಂಆರ್‌ಸಿ ಸಭಾಂಗಣದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಕಾರ್ಯಾಗಾರಕ್ಕೆ ಕುಲಸಚಿವೆ ಎಂ.ಕೆ.ಸವಿತ ಚಾಲನೆ ನೀಡಿದರು.

ಮೈವಿವಿ ಕುಲಸಚಿವೆ ಎಂ.ಕೆ.ಸವಿತ ಉದ್ಘಾಟನೆ


ಮೈಸೂರು, ಸೆ.3(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಲ್ಟಿ ಮೀಡಿಯಾ ಸಂಶೋಧನಾ ಕೇಂದ್ರ (ಇಎಂಆರ್‌ಸಿ) ಸಭಾಂಗಣದಲ್ಲಿ ಶಿಕ್ಷಣ ಸಂವಹನ ಒಕ್ಕೂಟ(ಸಿಇಸಿ)ದ ಸಹಯೋಗದೊಂದಿಗೆ ಹಮ್ಮಿಕೊಂಡಿರುವ 'ಮ್ಯಾಸಿವ್ ಓಪನ್ ಆನ್‌ಲೈನ್ ಕೋರ್ಸ್ (ಮೂಕ್)ಗಳ ವಿಷಯ ಅಭಿವೃದ್ಧಿಗಾಗಿ ಕೃತಕ ಬುದ್ಧಿಮತ್ತೆ'(artificial intelligence for content development for moocs-Massive Open Online Course) ಕುರಿತ ಎರಡು ದಿನಗಳ ಕಾರ್ಯಾಗಾರಕ್ಕೆ ಮೈಸೂರು ವಿವಿ ಕುಲಸಚಿವ (ಆಡಳಿತ)ರಾದ ಎಂ.ಕೆ.ಸವಿತ ಬುಧವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನ ವಲಯಕ್ಕೆ ಸೀಮಿತವಾಗದೆ ಮನುಷ್ಯನ ಜೀವನದ ಪ್ರತಿಯೊಂದು ಅಂಶಗಳಲ್ಲಿಯೂ ಆವರಿಸುತ್ತಿದೆ. ಅದರಲ್ಲಿ ಶಿಕ್ಷಣ ವ್ಯವಸ್ಥೆಯೂ ಒಂದಾಗಿದ್ದು, ಶೈಕ್ಷಣಿಕ ಪರಿವರ್ತನೆಯ ಹೊಸ್ತಿಲಲ್ಲಿ ನಾವಿದ್ದೇವೆ. ಕೃತಕ ಬುದ್ಧಿಮತ್ತೆಯು ಅಧ್ಯಾಪಕರು ಮತ್ತು ವಿದ್ವಾಂಸರನ್ನು ತಾಂತ್ರಿಕ ಜ್ಞಾನದಿಂದ ಸಜ್ಜುಗೊಳಿಸುವುದಲ್ಲದೆ, ಶಿಕ್ಷಣದಲ್ಲಿ ನೈತಿಕ, ಸಾಂಸ್ಕೃತಿಕ ಮತ್ತು ಹೊಸ ಆಯಾಮಗಳ ಬಗ್ಗೆ ಅರ್ಥಪೂರ್ಣ ಚಿಂತನೆಯನ್ನು ಪ್ರೋತ್ಸಾಹಿಸುತ್ತದೆ ಎಂದರು.

ಶತಮಾನದ ಇತಿಹಾಸ ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯವು ಸದಾ ನಾವೀನ್ಯತೆ, ಸಂಶೋಧನೆ ಮತ್ತು ಕ್ರಿಯಾಶೀಲತೆಗೆ ಅವಕಾಶ ನೀಡುತ್ತಿದೆ. ಈ ನಿಟ್ಟಿನಲ್ಲಿ ಈ ಕಾರ್ಯಾಗಾರ ಒಂದಾಗಿದ್ದು, ಕೇವಲ ತಾಂತ್ರಿಕ ದೃಷ್ಟಿಕೋನವಾಗಿರದೆ, ಹೊಸ ಚಿಂತನೆ ಮತ್ತು ಬೋಧನೆಯ ವಿಧಾನಗಳಿಗೆ ವೇಗವರ್ಧಕವಾಗಲಿದೆ ಎಂದು ನನಗೆ ವಿಶ್ವಾಸವಿದೆ. ಕಲಿಕೆಯನ್ನು ಸುಲಭವಾಗಿ, ಅರ್ಥಪೂರ್ಣವಾಗಿ ಮತ್ತು ಪರಿವರ್ತನಾತ್ಮಕವಾಗಿಸುವುದೇ ಮಾನವನ ಧ್ಯೇಯ ಎಂಬುದನ್ನು ನಾವು ಮರೆಯಬಾರದು ಎಂದು ಹೇಳಿದರು.

ಸಿಇಸಿ ಹೆಚ್ಚುವರಿ ನಿರ್ದೇಶಕ ಡಾ.ರಕ್ಷಕ್ ಜೈನ್, ಇಎಂಆರ್‌ಸಿ ನಿರ್ದೇಶಕರಾದ ಪ್ರೊ.ಎಂ.ಎಸ್.ಸಪ್ನ ಉಪಸ್ಥಿತರಿದ್ದರು.

ಶುಭಾಶಯ



ಮೈಸೂರಿನ ಅಶೋಕಪುರಂನ ಡಾ.ಬಿ.ಆರ್. ಅಂಬೇಡ್ಕರ್ ಕಾಲೋನಿಯಲ್ಲಿ ನಡೆದ ಗಣೇಶೋತ್ಸವದಲ್ಲಿ ಪಾಲ್ಗೊಂಡಿದ್ದ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಅವರಿಗೆ ಅಭಿನಂದಿಸಿ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಕಾಲೋನಿ ಯಜಮಾನ ಆರ್ಮುಗಂ, ಪಂಚಾಯತಿ ಕಾರ್ಯದರ್ಶಿ ವೆಂಕಟೇಶ್, ಮುಖಂಡರಾದ ಎಂ.ಗಣೇಶ್ (ಜಾನಿ), ತೇಜು, ಆದಿತ್ಯ, ರವಿಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ಬರಡನಪುರದ ವೃದ್ಧ ನಾಪತ್ತೆ



ಮೈಸೂರು: ತಾಲೂಕಿನ ಜಯಪುರ ಹೋಬಳಿಯ ಬರಡನಪುರ ಗ್ರಾಮದ ಮಹದೇವಪ್ಪ (85 ವರ್ಷ) ಕಾಣೆಯಾಗಿದ್ದಾರೆ. ಆ.27ರಂದು ಮನೆಯಿಂದ ಹೊರ ಹೋದವರು ಮನೆಗೆ ಹಿಂದಿರುಗಿಲ್ಲ. ಕೋಲುಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಬಿಳಿ ತಲೆಕೂದಲು, 5.5 ಅಡಿ ಎತ್ತರ, ಕನ್ನಡ ಭಾಷೆ ಮಾತನಾಡುತ್ತಾರೆ. ಬಿಳಿ ಶರ್ಟ್, ಬಿಳಿ ಪಂಚೆ, ಬಿಳಿ ಟವೆಲ್ ಧರಿಸಿದ್ದಾರೆ. ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ಸಿಕ್ಕವರು ಜಯಪುರ ಪೊಲೀಸ್ ಠಾಣೆ ದೂ.ಸಂ. 0821–259 5781, 9480805047, 9731139430 ಸಂಖ್ಯೆಗೆ ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಆನ್‌ಲೈನ್ ಗೇಮ್ ನಿಷೇಧಕ್ಕೆ ಬಿಜೆಪಿ ನಾಯಕ ಡಾ. ಸುಶ್ರುತ ಗೌಡ ಸ್ವಾಗತ



ಮೈಸೂರು, ಸೆ. 3– ಆನ್‌ಲೈನ್ ಗೇಮ್ ನಿಷೇಧ ಸಂಬಂಧ ಕೇಂದ್ರ ಸರ್ಕಾರದ ದಿಟ್ಟ ನಿರ್ಧಾರವನ್ನು ನಗರದ ಖ್ಯಾತ ನರರೋಗ ತಜ್ಞ ವೈದ್ಯ ಹಾಗೂ ಬಿಜೆಪಿ ನಾಯಕ ಡಾ. ಸುಶ್ರುತ ಗೌಡ ಸ್ವಾಗತಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು 20,000 ಕೋಟಿ ರೂ. ತೆರಿಗೆ ನಷ್ಟದ ಸಾಧ್ಯತೆಯ ಹೊರತಾಗಿಯೂ ದೇಶದ ಜನರ ಮಾನಸಿಕ, ಆರ್ಥಿಕ ಹಾಗೂ ಸಾಮಾಜಿಕ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿಜಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರು ತೆಗೆದುಕೊಂಡಿರುವ ಈ ನಿರ್ಧಾರ ಐತಿಹಾಸಿಕವಾದದ್ದು ಎಂದು ಅಭಿಪ್ರಾಯಪಟ್ಟಿದ್ದಾರೆ. ಹಣದ ಅಪಾಯ ಹೊಂದಿರುವ ಈ ಆನ್‌ಲೈನ್ ಕ್ರೀಡೆಗಳು ಜನರನ್ನು ಅವುಗಳ ವ್ಯಸನಿಯನ್ನಾಗಿಸುತ್ತಿದ್ದವು. ಇದು ಆತ್ಮಹತ್ಯೆ, ಕೌಟುಂಬಿಕ ಕಲಹ, ಹೀಗೆ ನಾನಾ ಸಮಸ್ಯೆಗಳಿಗೆ ಕಾರಣ ವಾಗುತ್ತಿದ್ದವು. ಈ ಹಿನ್ನಲೆಯಲ್ಲಿ ಕೇಂದ್ರ ಸರಕಾರ ಅತ್ಯಂತ ಸಮಯೋಚಿತ ನಿರ್ಧಾರ ತೆಗೆದುಕೊಂಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇವರಾಜ ಅರಸು ಕರ್ನಾಟಕದ ಅರ್ಜುನ: ಪ್ರೊ.ಮಾಲಗತ್ತಿ

ಡಾ.ಡಿ.ತಿಮ್ಮಯ್ಯ, ಡಾ.ರಘುರಾಮ್ ವಾಜಪೇಯಿಗೆ ಅರಸು ಸೇವಾ ಪ್ರಶಸ್ತಿ ಪ್ರದಾನ



ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಭವನದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಕನ್ನಡ ಸಾಹಿತ್ಯ ಪರಿಷತ್ ಮತ್ತು ಕನ್ನಡ ಸಾಹಿತ್ಯ ಕಲಾಕೂಟ ವತಿಯಿಂದ ಬುಧವಾರ ಡಿ.ದೇವರಾಜ ಅರಸು ಅವರ 110ನೇ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹಾಗೂ ಸಮಾಜ ಸೇವಕ ಡಾ.ಕೆ. ರಘುರಾಮ್ ವಾಜಪೇಯಿ ಅವರಿಗೆ ಅರಸು ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಸೆ.3(ಜಿಎ)– ದೇವರಾಜ ಅರಸು ಅವರ ಇಚ್ಛೆಯಂತೆ ಕಾನ್ವೆಂಟ್ ಸೇರಿದಂತೆ ಎಲ್ಲಾ ಶಾಲೆಗಳಲ್ಲಿ ಮಾತೃ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರಮವಹಿಸಬೇಕು ಎಂದು ಆಗ್ರಹಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಅರವಿಂದ ಮಾಲಗತ್ತಿ, ದೇವರಾಜ ಅರಸು ಕರ್ನಾಟಕದ ಅರ್ಜುನ ಇದ್ದಂತೆ. ಪ್ರಜೆಗಳು ಗುರಿ ತೋರಿಸಿದ ಕಡೆ ಹೊಡೆದು ಆಡಳಿತ ಸುಧಾರಣೆ ತಂದಿದ್ದರು ಎಂದರು.

ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಭವನದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಕನ್ನಡ ಸಾಹಿತ್ಯ ಪರಿಷತ್ ಮತ್ತು ಕನ್ನಡ ಸಾಹಿತ್ಯ ಕಲಾಕೂಟ ವತಿಯಿಂದ ಬುಧವಾರ ಡಿ.ದೇವರಾಜ ಅರಸು ಅವರ 110ನೇ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹಾಗೂ ಸಮಾಜ ಸೇವಕ ಡಾ.ಕೆ. ರಘುರಾಮ್ ವಾಜಪೇಯಿ ಅವರಿಗೆ ಅರಸು ಸೇವಾ ಪ್ರಶಸ್ತಿ ಪ್ರದಾನ ಮಾಡಿ, ಅವರು ಮಾತನಾಡಿದರು.

ದೇವರಾಜ ಅರಸು ಅವರದ್ದು ಪ್ರಜೆ ಮತ್ತು ಸೇವೆ ಸಿದ್ಧಾಂತವಾಗಿತ್ತು ದೀನರು, ಅನಾಥರು, ಶೋಷಣೆಗೆ ಒಳಗಾದವರನ್ನು ಕಂಡರೆ ಮರುಗುತ್ತಿದ್ದರು. ಅವರಿಗೆ ಪೂರಕವಾಗಿ ಆಡಳಿತ ನೀಡುತ್ತಿದ್ದರು. ಆದರೆ ಸದ್ಯ ರಾಜಕೀಯದಲ್ಲಿ ಪ್ರಜೆಗಳನ್ನು ಮತಕ್ಕಾಗಿ ಬಳಕೆ ಮಾಡಿಕೊಂಡು ಬಳಸಿ ಬಿಸಾಡುವ ಸಿದ್ಧಾಂತವಿದ್ದು, ಮತದಾರರನ್ನು ಕಿತ್ತು ಬಿಸಾಕಿ, ನಕಲಿ ಮತದಾರರನ್ನು ಸೃಷ್ಟಿಸುವ ಸಿದ್ಧಾಂತ ಜಾರಿಯಾಗಿದೆ ಎಂದರು.

ದೇವರಾಜ ಅರಸು ಅವರ ಆಡಳಿತವನ್ನೇ ಮಾದರಿಯಾಗಿ ಸ್ವೀಕರಿಸಿದ ಸಿದ್ದರಾಮಯ್ಯ ಅವರದ್ದು ಪ್ರಜೆ ಮತ್ತು ಕರ್ತವ್ಯ ಸಿದ್ಧಾಂತವಾಗಿದೆ. ಪ್ರಜೆಗಳ ಕಷ್ಟ ಸುಖವನ್ನು ಅರಿತು ಅದನ್ನು ನಿವಾರಿಸುವುದು ತಮ್ಮ ಕರ್ತವ್ಯವೆಂದು ಭಾವಿಸಿ ಅದನ್ನು ಜಾರಿಗೆ ತರುತ್ತಾರೆ. ಇಂತಹ ಸಿದ್ಧಾಂತಗಳನ್ನು ಪಾಲಿಸುತ್ತಾ ಜೀವಂತವಾಗಿಡುವುದು ಮುಖ್ಯವಾಗಿದೆ ಎಂದು ತಿಳಿಸಿದರು.

ದೇವರಾಜ ಅರಸು ಅವರು ಭೂ ಮಸೂದೆ ಜಾರಿಗೆ ತರಲು ಶಿವರಾಮ ಕಾರಂತರ ಚೋಮನದುಡಿ ಪ್ರೇರಣೆಯಾಗಿದೆ. ಅಲ್ಲದೇ ಸ್ವತಃ ರೈತನಾಗಿ ಕೃಷಿ ಕ್ಷೇತ್ರದ ಏರಿಳಿತಗಳನ್ನು ಅರಿತು ಅದರಲ್ಲಿ ಸುಧಾರಣೆ ತಂದರು. ಅಲ್ಲದೇ ಅರಸು ಅವರು ಕರ್ನಾಟಕದ ಅರ್ಜುನ ಇದ್ದಂತೆ. ಪ್ರಜೆಗಳು ಯಾವುದಕ್ಕೆ ಗುರಿ ಇಟ್ಟು ಹೊಡೆ ಎಂದು ಹೇಳುತ್ತಾರೆ ಅದಕ್ಕೆ ಹೊಡೆಯುವ ಮೂಲಕ ಆಡಳಿತ ಸುಧಾರಣೆ ತಂದಿದ್ದಾರೆ ಎಂದು ಸ್ಮರಿಸಿದರು.

ಸಾಮಾನ್ಯವಾಗಿ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ. ದಕ್ಷಿಣದಷ್ಟು ಅಭಿವೃದ್ಧಿಯಾಗಿಲ್ಲ ಎಂದು ಹೇಳಲಾಗುತ್ತದೆ. ಆದರೆ ದಕ್ಷಿಣ ಕರ್ನಾಟಕದ ನಮ್ಮ ಮೈಸೂರು, ರಾಜ್ಯಕ್ಕೆ ಇದೇ ಹೆಸರು ಬರುವುದನ್ನು ಬಿಟ್ಟುಕೊಟ್ಟಿದೆ. ದೇವರಾಜ ಅರಸು ಅವರೇ ಸ್ವತಃ ಅರಸು ಮನೆತನದವರಾದರೂ ಮೈಸೂರು ಬಿಟ್ಟುಕೊಟ್ಟು ಕರ್ನಾಟಕ ಎಂದು ಹೆಸರಿಸಲು ಸಹಮತ ವ್ಯಕ್ತಪಡಿಸಿದ್ದು ದೊಡ್ಡ ವಿಚಾರ ಎಂದು ಸ್ಮರಿಸಿದರು.

> ಸಮಾಜ ಸೇವೆ, ಶೋಷಿತ ಸಮುದಾಯಕ್ಕೆ ಸ್ಪಂದಿಸುವ ಮನೋಭಾವ ಹೊಂದಿರುವ ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಅವರನ್ನು ಮುಂಬರುವ ಸಚಿವ ಸಂಪುಟ ಪುನರ್‌ರಚನೆ ವೇಳೆ ಸಚಿವರಾಗಿ ಆಯ್ಕೆ ಮಾಡಬೇಕು. ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಸದ್ಯದಲ್ಲಿಯೇ ಮನವಿ ಸಲ್ಲಿಸುತ್ತೇವೆ.
>
> -ಕೆ.ಎಸ್. ಶಿವರಾಮು, ಅಧ್ಯಕ್ಷ, ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ

ಅರಸು ಸೇವಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ದೇವರಾಜ ಅರಸು ಅವರೇ ನೇರವಾಗಿ ನನ್ನನ್ನು ಸರ್ಕಾರಿ ವೈದ್ಯ ನೌಕರಿಗೆ ಆಯ್ಕೆ ಮಾಡಿಕೊಂಡರು. ನೊಂದವರು, ತಬ್ಬಲಿಗಳು ಎಂದರೆ ವಿಶೇಷ ಕಾಳಜಿ ತೋರುತ್ತಿದ್ದರು. ಅವರ ಹೆಸರಿನ ಪ್ರಶಸ್ತಿ ಸ್ವೀಕರಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಮಡಿವಾಳ ಸಂಘದ ಜಿಲ್ಲಾಧ್ಯಕ್ಷ ರವಿನಂದನ್, ಕುಂಬಾರ ಸಂಘ ಜಿಲ್ಲಾಧ್ಯಕ್ಷ ಎಚ್.ಎಸ್. ಪ್ರಕಾಶ್, ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಯೋಗೇಶ್ ಉಪ್ಪಾರ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖಂಡ ಲೋಕೇಶ್ ಮಾದಾಪುರ ಉಪಸ್ಥಿತರಿದ್ದರು.

ಅಮೆರಿಕದ ಸುಂಕ ಸಮರದ ನಡುವೆ ಪ್ರಧಾನಿ ಮೋದಿ 'ಬಹು–ಜೋಡಣೆ' ನೀತಿ ಹೊಗಳಿದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ



ಬೆಂಗಳೂರು, ಸೆ.3– ಅಮೆರಿಕವು ಅಸಮಂಜಸ ಮತ್ತು ಅನ್ಯಾಯದ ಸುಂಕ ಸಮರವನ್ನು ಪ್ರಾರಂಭಿಸಿದ ನಂತರ ಪರ್ಯಾಯಗಳನ್ನು ಸಕ್ರಿಯವಾಗಿ ಹುಡುಕುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಯತ್ನ ಗಳನ್ನು ಜೆಡಿಎಸ್ ವರಿಷ್ಠ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಶ್ಲಾಘಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರ 'ಬಹು–ಜೋಡಣೆ' ನೀತಿಯು ಮುಂದಿನ ದಿನಗಳಲ್ಲಿ ದೇಶಕ್ಕೆ ಸಮೃದ್ಧ ಲಾಭಾಂಶವನ್ನು ನೀಡಲಿದೆ ಎಂದು ಅಭಿಪ್ರಾಯಪಟ್ಟಿರುವ ಅವರು, ಜಪಾನ್ ಮತ್ತು ಚೀನಾಕ್ಕೆ ನಿಮ್ಮ ಭೇಟಿಯ ಸುದ್ದಿಯನ್ನು ನಾನು ನಿಕಟವಾಗಿ ಅನುಸರಿಸಿದೆ. ಅಮೆರಿಕವು ಅಸಮಂಜಸ ಮತ್ತು ಅನ್ಯಾಯದ ಸುಂಕ ಸಮರವನ್ನು ಪ್ರಾರಂಭಿಸಿದ ನಂತರ ನೀವು (ಮೋದಿ) ಪರ್ಯಾಯ ಮಾರ್ಗಗಳನ್ನು ಸಕ್ರಿಯವಾಗಿ ಅನುಸರಿಸುತ್ತಿದ್ದೀರಿ ಇದು ಲಕ್ಷಾಂತರ ಭಾರತೀಯರಂತೆ ನನಗೂ ನಿರಾಳವಾಗಿದೆ. ನೀವು ಬಹಳ ಯಶಸ್ವಿ ಭೇಟಿಯನ್ನು ಹೊಂದಿದ್ದೀರಿ ಎಂದು ನಾನು ನಂಬುತ್ತೇನೆ ಮತ್ತು ಭಾರತವು ನಿಮ್ಮ ಮಾತುಕತೆಗಳು ಮತ್ತು ಹೊಸ ಉಪಕ್ರಮಗಳ ಪ್ರಯೋಜನಗಳನ್ನು ಪಡೆಯುತ್ತದೆ" ಎಂದು ದೇವೇಗೌಡರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಅಂತೆಯೇ (ರಷ್ಯಾದ ಅಧ್ಯಕ್ಷ ಪುಟಿನ್) ಮತ್ತು ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ (ಚೀನಾ) ಅವರೊಂದಿಗಿನ ನಿಮ್ಮ ಛಾಯಾಚಿತ್ರಗಳು ಮತ್ತು ವೀಡಿಯೊಗಳು ಜಗತ್ತಿನಾದ್ಯಂತ ಮಾಧ್ಯಮಗಳಲ್ಲಿ ತುಂಬಿ ತುಳುಕುತ್ತಿವೆ, ಇವು ರಾಷ್ಟ್ರಗಳ ಮುಖ್ಯಸ್ಥರ ನಡುವಿನ ಸಾಮಾನ್ಯ ಸ್ನೇಹ ಮತ್ತು ಸ್ನೇಹವನ್ನು ಮೀರಿ ಏನನ್ನಾದರೂ ತಿಳಿಸುತ್ತವೆ. ಅವು 'ಹೊಸ ಜಾಗೃತಿ' ಮತ್ತು ಬಹುಶಃ ಭಾರತವನ್ನು ಕೇಂದ್ರದಲ್ಲಿಟ್ಟುಕೊಂಡು ಹೊಸ ವಿಶ್ವ ಕ್ರಮದ ಆರಂಭವನ್ನು ಸಂಕೇತಿಸುತ್ತವೆ ಎಂದು ಹೇಳಿದ್ದಾರೆ. ಪ್ರಸ್ತುತ ಭಾರತದ ಮುಂದೆ ಇರುವ ಸವಾಲನ್ನು ಅದರ ಯಾವುದೇ ಪ್ರಮುಖ ಮೌಲ್ಯಗಳನ್ನು ತ್ಯಾಗ ಮಾಡದೆ ಅವಕಾಶ ವನ್ನಾಗಿ ಪರಿವರ್ತಿಸಲು ಮೋದಿ ದೃಢನಿಶ್ಚಯ ಹೊಂದಿದ್ದಾರೆ. ನಮ್ಮ ರಾಷ್ಟ್ರವು ಪ್ರಸ್ತುತದಲ್ಲಿರುವ ವಕ್ರರೇಖೆಯನ್ನು ದಾಟಲು ಅಪಾರ ತಾಳ್ಮೆ ಮತ್ತು ಆತ್ಮವಿಶ್ವಾಸದ ಅಗತ್ಯವಿದೆ ಎಂದು ದೇವೇಗೌಡರು ಪತ್ರದಲ್ಲಿ ತಿಳಿಸಿದ್ದಾರೆ.

ಸಮೀಕ್ಷೆ ಪಟ್ಟಿಯಲ್ಲಿನ ದೋಷಗಳ ಸರಿಪಡಿಸಿ

ಮೈಸೂರು, ಸೆ. 3– ರಾಜ್ಯದಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಶೀಘ್ರ ಆರಂಭವಾಗಲಿದ್ದು, ಅದಕ್ಕಾಗಿ ಸಿದ್ಧಪಡಿಸಿರುವ ಪಟ್ಟಿಯಲ್ಲಿನ ದೋಷ ಸರಿಪಡಿಸಬೇಕು ಎಂದು ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಪಟ್ಟಿಯಲ್ಲಿ ಬ್ರಾಹ್ಮಣ ಕ್ರಿಶ್ಚಿಯನ್, ಬ್ರಾಹ್ಮಣ ಮುಸ್ಲಿಂ ಎಂಬೆಲ್ಲಾ ಹೆಸರುಗಳಿರುವುದು ಹೊಸ ಗೊಂದಲಕ್ಕೆ ಕಾರಣವಾಗಿವೆ. ಹೀಗಿರಲು ಸಾಧ್ಯವೇ ಇಲ್ಲ. ತಕ್ಷಣವೇ ಈ ಹೆಸರುಗಳನ್ನು ಕೈಬಿಡಬೇಕು ಎಂದು ಆಗ್ರಹಿಸಿದ್ದಾರೆ. ಬ್ರಾಹ್ಮಣ ಸಮುದಾಯದಲ್ಲೂ ಹಿಂದುಳಿದವರು, ಅಂಗವಿಕಲರು, ವೃದ್ಧರು, ವಿಧವೆಯರು, ಸಂಕಷ್ಟದಲ್ಲಿರುವವರು ಇದ್ದಾರೆ. ಸಮೀಕ್ಷೆಯಿಂದ ಇಂತಹ ಎಲ್ಲರಿಗೂ ಸಹಾಯ ದೊರೆಯಬೇಕಿದೆ ಎಂದು ಹೇಳಿದ್ದಾರೆ.

'ಹಿಂದೂ–ಬ್ರಾಹ್ಮಣ' ಎಂದು ನಮೂದಿಸಿ: ಸಮೀಕ್ಷೆಗೆ ಬಂದಾಗ ಬ್ರಾಹ್ಮಣ ಸಮುದಾಯದವರು 'ಹಿಂದೂ ಬ್ರಾಹ್ಮಣ' ಎಂದಷ್ಟೇ ನಮೂದಿಸಬೇಕು. ಎಷ್ಟೇ ಕಾಲಂಗಳು ಇರಲಿ, ಅಲ್ಲಿ ಬ್ರಾಹ್ಮಣ ಉಪ ಪಂಗಡಗಳನ್ನು ನಮೂದಿಸುವ ಅಗತ್ಯ ಇಲ್ಲ. ಉಳಿದಂತೆ ಸಾಮಾಜಿಕ, ಶೈಕ್ಷಣಿಕ ವಿವರ ನೀಡಬೇಕು, ಇದರಿಂದಷ್ಟೇ ಬ್ರಾಹ್ಮಣರ ನಿಜವಾದ ಜನಸಂಖ್ಯೆಯ ವಿವರ, ಅವರ ನೈಜ ಸಾಮಾ ಜಿಕ, ಆರ್ಥಿಕ ಸ್ಥಿತಿಗತಿ ತಿಳಿಯಲು ಸಾಧ್ಯ ಎಂದು ಅವರು ತಿಳಿಸಿದ್ದಾರೆ.

ಮನಸ್ಸಲ್ಲಿ ದ್ವೇಷ ತುಂಬಿಕೊಂಡು ಮನುಷ್ಯ ಸಂತೋಷದಿಂದಿರಲು ಸಾಧ್ಯವಿಲ್ಲ

• ಪ್ರಸಾರಾಂಗದ ನಿವೃತ್ತ ನಿರ್ದೇಶಕ ಪ್ರೊ.ಕೆ.ಟಿ.ವೀರಪ್ಪ ಅಭಿಮತ • ರಿಚರ್ಡ್ ಲೂಯಿಸ್ ತಂಡದ 'ನಗೆಹಬ್ಬ'; ಜನ್ನಿ ನೇತೃತ್ವದ 'ರಂಗಗೀತೆಗಳ ಗಾಯನ'ಕ್ಕೆ ಚಾಲನೆ



ಬೆಂಗಳೂರಿನ ಹಾಸ್ಯಕಲಾವಿದ ರಿಚರ್ಡ್ ಲೂಯಿಸ್ ತಂಡದ 'ನಗೆಹಬ್ಬ' ಮತ್ತು ಮೈಸೂರಿನ ಹಿರಿಯ ಕಲಾವಿದ ಎಚ್.ಜನಾರ್ಧನ್ ನೇತೃತ್ವದ 'ರಂಗಗೀತೆಗಳ ಗಾಯನ' ಕಾರ್ಯಕ್ರಮವನ್ನು ಮೈಸೂರು ವಿವಿ ಪ್ರಸಾರಾಂಗ ನಿವೃತ್ತ ನಿರ್ದೇಶಕ ಪ್ರೊ.ಕೆ.ಟಿ.ವೀರಪ್ಪ ಉದ್ಘಾಟಿಸಿದರು.

ಮೈಸೂರು, ಸೆ.3(ಎಸ್‌ಪಿಎನ್)– ಮನಸ್ಸು ಎಲ್ಲಿಯವರೆಗೆ ಆನಂದವಾಗಿರುತ್ತದೆಯೋ, ಅಲ್ಲಿಯ ತನಕ ಮನುಷ್ಯನು ಖುಷಿಯಾಗಿರುತ್ತಾನೆ ಎಂದು ಮೈಸೂರು ವಿವಿ ಪ್ರಸಾರಾಂಗ ನಿವೃತ್ತ ನಿರ್ದೇಶಕ ಪ್ರೊ.ಕೆ.ಟಿ.ವೀರಪ್ಪ ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣ ಆವರಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ಬೆಂಗಳೂರಿನ ರಂಗರತ್ನಾಕರ, ಮೈಸೂರಿನ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಹಾಗೂ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಬೆಂಗಳೂರಿನ ಹಾಸ್ಯಕಲಾವಿದ ರಿಚರ್ಡ್ ಲೂಯಿಸ್ ತಂಡದ 'ನಗೆಹಬ್ಬ' ಮತ್ತು ಮೈಸೂರಿನ ಹಿರಿಯ ಕಲಾವಿದ ಎಚ್. ಜನಾರ್ಧನ್ ನೇತೃತ್ವದಲ್ಲಿ 'ರಂಗಗೀತೆಗಳ ಗಾಯನ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು, ಮಾತನಾಡಿದರು.

ಮನುಷ್ಯನ ಹೃದಯದಲ್ಲಿ ದ್ವೇಷ ತುಂಬಿಕೊಂಡು ದೀರ್ಘಕಾಲ ಆನಂದದ ಜೀವನ ನಡೆಸಲು ಸಾಧ್ಯವಿಲ್ಲ. ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ನಮ್ಮೂರಿನಲ್ಲಿ ವೃತ್ತಿ ನಾಟಕಗಳು, ಪೌರಾಣಿಕ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ಆ ಕಾಲದಿಂದ ಈ ಕಾಲದವರೆಗೆ ರಂಗಭೂಮಿಯ ವಿವಿಧ ಮಜಲುಗಳನ್ನು ನೋಡಿದ್ದೇನೆ. ರಂಗಭೂಮಿಗೆ ದ್ವೇಷವನ್ನು ನುಂಗಿ, ಇತರರೊಂದಿಗೆ ಆನಂದ, ಪ್ರೀತಿಯಿಂದ ಬದುಕು, ವ್ಯಕ್ತಿತ್ವ ರೂಪಿಸುತ್ತದೆ ಎಂದು ಕೆಲ ಘಟನಾವಳಿ ಮೂಲಕ ವಿವರಿಸಿದರು.

ಹಾಸ್ಯ ಕಲಾವಿದ ರಿಚರ್ಡ್ ಲೂಯಿಸ್ ಅವರು, ಚಿತ್ರರಂಗ ಮತ್ತು ರಂಗಭೂಮಿಯಲ್ಲಿ ಸುಮಾರು 40 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಹಾಸ್ಯವನ್ನು ಕನ್ನಡ ನಾಡಿನ ಪ್ರತಿಯೊಬ್ಬರು ನೋಡಿ, ಆನಂದಿಸಿದ್ದಾರೆ. ಇಂದು ಕೂಡ ಅವರ ತಂಡ ಮೈಸೂರಿಗರನ್ನು ನಗೆಹಬ್ಬದ ಮೂಲಕ ಹಾಸ್ಯದ ಹೊನಲು ಹರಿಸಲಿದ್ದಾರೆ ಎಂದರು.

ರಂಗಾಯಣ ಮಾಜಿ ನಿರ್ದೇಶಕ ಎಚ್. ಜನಾರ್ಧನ್ ಮಾತನಾಡಿ, ಸಮುದಾಯದ ಒಳಿತಿಗಾಗಿ ಕಲೆ, ಸಾಹಿತ್ಯ, ಸಂಸ್ಕೃತಿ ಮೂಲಕ ಸಮಾಜವನ್ನು ತಲುಪಬೇಕು. ಸಮ ಸಮಾಜ ನಿರ್ಮಾಣವಾಗಬೇಕಾದರೆ, ಸ್ವಾರ್ಥವನ್ನು ಬಿಡಬೇಕು. ಜಾತೀಯತೆ, ಮತೀಯ ಭಾವನೆ ಸಮಾಜದಿಂದ ತೊಲಗಿ, ಜಾತ್ಯಾತೀತ, ಮಾನವೀಯ ಮೌಲ್ಯಗಳ ಮೂಲಕ ಜಗತ್ತು ಸಾಗಬೇಕು ಹಾಗೂ ಎಲ್ಲರ ಮನ ಅನಿಕೇತನವಾಗಬೇಕು ಎಂದ ಅವರು, ಕುವೆಂಪು ರಚಿತ 'ಓ ನನ್ನ ಚೇತನ ಆಗು ನೀ ಅನಿಕೇತನ' ಭಾವಗೀತೆ ಹಾಡಿ, ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿದರು.

ಶಾರದಾವಿಲಾಸ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎ.ವಿ.ಸೂರ್ಯನಾರಾಯಣ ಸ್ವಾಮಿ ಮಾತನಾಡಿ, ಒಬ್ಬರು–ಇನ್ನೊಬ್ಬರನ್ನು ಆಕಸ್ಮಿಕವಾಗಿ ಭೇಟಿಯಾದಾಗ ಕುಶಲೋಪರಿ ವಿಚಾರಿಸುವುದು ಸಹಜ ಅನ್ನುವುದಕ್ಕಿಂತ ಪ್ರೀತಿಯಿಂದ ಮಾತನಾಡಿ, ಕುಶಲೋಪರಿ ಮಾತನಾಡಿದಾಗ ಅಂತಹ ಸ್ನೇಹಿತರು ಮನಸ್ಸಿಗೆ ಹತ್ತಿರವಾಗುತ್ತಾರೆ. ಈ ಕಾರ್ಯ ರಂಗಭೂಮಿಯಿಂದಲೇ ಆರಂಭವಾಗಲಿ ಎಂದು ಸಲಹೆ ನೀಡಿದರು. ಈ ವೇಳೆ ರಂಗರತ್ನಾಕರ ಸಂಘದ ಅಧ್ಯಕ್ಷ ಕಿರಗಸೂರು ರಾಜಪ್ಪ, ಕಾರ್ಯದರ್ಶಿ ಎಚ್.ಎಸ್.ಗೋವಿಂದೇಗೌಡ, ಮೈಸೂರು ಆನಂದ್ ಸೇರಿದಂತೆ ಇತರರಿದ್ದರು.

ಧರ್ಮಸ್ಥಳ ಪ್ರಕರಣ: ಮಾಸ್ಕ್‌ಮ್ಯಾನ್ ಚಿನ್ನಯ್ಯ ಮತ್ತೇ 3 ದಿನ ಎಸ್‌ಐಟಿ ವಶಕ್ಕೆ



ಬೆಳ್ತಂಗಡಿ, ಸೆ.3– ಧರ್ಮಸ್ಥಳ ಗ್ರಾಮದಲ್ಲಿ ನಡೆದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ಸಾಕ್ಷಿ ದೂರುದಾರನಾದ ಮಾಸ್ಕ್‌ಮ್ಯಾನ್ ಚಿನ್ನಯ್ಯನನ್ನು ಬೆಳ್ತಂಗಡಿ ಜೆಎಂಎಫ್‌ಸಿ ನ್ಯಾಯಾಲಯವು ಮತ್ತೇ ಮೂರು ದಿನ ಎಸ್‌ಐಟಿ ವಶಕ್ಕೆ ನೀಡಿದ್ದು, ಸೆ.6ರಂದು ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಆದೇಶಿಸಿದೆ.

ತಮ್ಮ ವಶದಲ್ಲಿದ್ದ ಚನ್ನಯ್ಯನನ್ನು ಎಸ್‌ಐಟಿ ಅಧಿಕಾರಿಗಳು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಬುಧವಾರ ಹಾಜರು ಪಡಿಸಿದರು. ಹೆಚ್ಚಿನ ವಿಚಾರಣೆಗೆ ಸಲುವಾಗಿ ಆತನನ್ನು ಮತ್ತಷ್ಟು ದಿನ ಎಸ್‌ಐಟಿ ವಶಕ್ಕೆ ಒಪ್ಪಿಸುವಂತೆ ಸರ್ಕಾರಿ ವಕೀಲರು ಬೇಡಿಕೆ ಸಲ್ಲಿಸಿದರು. ಈ ಕೋರಿಕೆಯನ್ನು ಮನ್ನಿಸಿದ ನ್ಯಾಯಾಲಯವು ಸೆ. 6ರವರೆಗೆ ಆತನನ್ನು ಎಸ್‌ಐಟಿ ವಶಕ್ಕೆ ಒಪ್ಪಿಸಿದೆ.

ಚಿನ್ನಯ್ಯನನ್ನು ನ್ಯಾಯಾಲಯದಿಂದ ನೇರವಾಗಿ ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಅಧಿಕಾರಿಗಳು ಕರೆದೊಯ್ದರು. ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ಹಾಗೂ ಅಲ್ಲಿಂದ ಆತನನ್ನು ಕಚೇರಿಗೆ ಕರೆದೊಯ್ಯುವಾಗಲೂ ಮುಖಕ್ಕೆ ಮುಸುಕು ಹಾಕಲಾಗಿತ್ತು.

ಎಸ್‌ಐಟಿ ಮುಂದೆ ಉದಯ್ ಜೈನ್ ಹಾಜರು: ಎಸ್‌ಐಟಿ ಮುಂದೆ ಧರ್ಮಸ್ಥಳದ ಉದಯ್ ಜೈನ್ ಬುಧವಾರ ಹಾಜರಾದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, ಬುಧವಾರ 11 ಗಂಟೆಗೆ ಕಚೇರಿಗೆ ಹಾಜರಾಗುವಂತೆ ಎಸ್‌ಐಟಿ ಅಧಿಕಾರಿಯೊಬ್ಬರು ನಿನ್ನೆ ದೂರವಾಣಿ ಕರೆ ಮಾಡಿ ತಿಳಿಸಿದ್ದರು. ಹಾಗಾಗಿ ಇಲ್ಲಿಗೆ ಬಂದಿದ್ದೇನೆ ಎಂದು ಹೇಳಿದರು.

ಸೌಜನ್ಯ ಕೊಲೆ ಪ್ರಕರಣದ ಎಫ್‌ಐಆರ್‌ನಲ್ಲಿ ನಮ್ಮ ಹೆಸರು ಇರಲಿಲ್ಲ. ಆದರೂ ನಮ್ಮನ್ನು ಆರೋಪಿಗಳನ್ನಾಗಿಸುವ ಷಡ್ಯಂತ್ರ ನಡೆದಿತ್ತು. ಸಿಬಿಐ ಮತ್ತು ಸಿಐಡಿ ಅಧಿಕಾರಿಗಳು ನಮ್ಮನ್ನು ವಿಚಾರಣೆಗೆ ಒಳಪಡಿಸಿದ್ದರು. ನಮ್ಮ ಮಂಪರು ಪರೀಕ್ಷೆಯನ್ನೂ ನಡೆಸಲಾಗಿತ್ತು. ಆ ಪ್ರಕರಣದಲ್ಲಿ ನಮ್ಮ ಪಾತ್ರ ಇಲ್ಲ ಎಂದು ಸಾಬೀತಾಗಿತ್ತು. ಈಗ ಎಸ್‌ಐಟಿಯವರು ಯಾವ ಪ್ರಕರಣ ಸಂಬಂಧ ವಿಚಾರಣೆಗೆ ಕರೆದಿದ್ದಾರೆ ಎಂದು ಗೊತ್ತಿಲ್ಲ. ನನ್ನಂತೆಯೇ, ಇನ್ನಿಬ್ಬರಿಗೂ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿಯವರು ಕರೆ ಮಾಡಿದ್ದಾರೆ. ನಾನು ಧೀರಜ್ ಕೆಲ್ಲ ಅವರಿಗೆ ಕರೆ ಮಾಡಿದ್ದೆ. ಆಗ ಅವರು ಈ ವಿಚಾರ ತಿಳಿಸಿದ್ದಾರೆ. ಎಸ್‌ಐಟಿಯವರು ಕರೆದಿದ್ದಾರೆ ಎಂದ ಮೇಲೆ ಅವರು ಕೂಡ ಬರಲೇ ಬೇಕಾಗುತ್ತದೆ ಅಲ್ಲವೇ ಎಂದರು.

ಮೈಸೂರಿನ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಕಾರ್ಯಾಗಾರ ಆರಂಭ

ಹೊಸ ಆವಿಷ್ಕಾರಗಳು ರೇಷ್ಮೆ ಕೃಷಿಯ ಉತ್ಪಾದಕತೆ, ಲಾಭದಾಯಕತೆ, ಸುಸ್ಥಿರತೆ ಹೆಚ್ಚಿಸುತ್ತದೆ: ಸಂಸ್ಥೆಯ ನಿರ್ದೇಶಕಿ ಡಾ.ದೀಪಾ ಅಭಿಮತ



ಮೈಸೂರಿನ ಮಾನಂದವಾಡಿ ರಸ್ತೆಯ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ ಬುಧವಾರ ರೇಷ್ಮೆ ಹಾಗೂ ರೇಷ್ಮೆ ಉದ್ಯಮಕ್ಕೆ ಸಂಬಂಧಿಸಿದ 28 ದಿನಗಳ ಅಂತರರಾಷ್ಟ್ರೀಯ ತರಬೇತಿ ಕಾರ್ಯಾಗಾರ ಆರಂಭವಾಯಿತು.

ಮೈಸೂರು, ಸೆ.3(ಬಿಎಲ್ ಯು)– ಮೈಸೂರಿನ ಮಾನಂದವಾಡಿ ರಸ್ತೆಯ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ ರೇಷ್ಮೆ ಹಾಗೂ ರೇಷ್ಮೆ ಉದ್ಯಮಕ್ಕೆ ಸಂಬಂಧಿಸಿದ ಅಂತಾರಾಷ್ಟ್ರೀಯ ತರಬೇತಿ ಕಾರ್ಯಾಗಾರ ಇಂದು ಆರಂಭವಾಯಿತು.

ಇಂದಿನಿಂದ ಸೆಪ್ಟೆಂಬರ್ 30ವರೆಗೆ ನಡೆಯುವ ತರಬೇತಿ ಕಾರ್ಯಾಗಾರದಲ್ಲಿ ಈಜಿಪ್ಟ್, ಇಥಿಯೋಪಿಯಾ, ಘಾನಾ, ಫಿಲಿಫೈನ್ಸ್, ಕ್ಯೂಬಾ, ತಾಂಜಾನಿಯಾ, ಉಗಾಂಡ, ಥೈಲ್ಯಾಂಡ್ ದೇಶಗಳ 30 ಅಭ್ಯರ್ಥಿಗಳು ಪಾಲ್ಗೊಂಡಿದ್ದಾರೆ.

ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ನಿರ್ದೇಶಕಿ ಡಾ.ಪಿ. ದೀಪಾ, ನಮ್ಮ ಸಂಸ್ಥೆ ಹಲವು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ರೇಷ್ಮೆ ಕೃಷಿ ಬಗ್ಗೆ ತಾಂತ್ರಿಕ ಆವಿಷ್ಕಾರಕ್ಕೆ ಬೆಂಬಲ ನೀಡುತ್ತಿದೆ ಎಂದರು. ಸಂಸ್ಥೆಯ ಆವಿಷ್ಕಾರಗಳು ರೇಷ್ಮೆ ಕೃಷಿಯ ಉತ್ಪಾದಕತೆ, ಲಾಭದಾಯಕತೆ, ಸುಸ್ಥಿರತೆ ಸುಧಾರಿಸಲು ಬಹಳ ಉಪಯುಕ್ತವಾಗಿದೆ ಎಂದು ಅಭಿಪ್ರಾಯಪಟ್ಟರು.

ಒಟ್ಟು 28 ದಿನಗಳ ತರಬೇತಿಯಲ್ಲಿ ರೇಷ್ಮೆ ಕೃಷಿಯ ತಂತ್ರಜ್ಞಾನ ಅರಿತು, ತಮ್ಮ ದೇಶದಲ್ಲಿ ಉಪಯೋಗಿಸಿಕೊಳ್ಳಬೇಕು ಎಂದು ತರಬೇತಿದಾರರಿಗೆ ಸಲಹೆ ನೀಡಿದರು.

ಸಮಶೀತೋಷ್ಣದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಯಲ್ಲಿ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಬಹಳ ಪ್ರಮುಖ ಪಾತ್ರ ವಹಿಸುತ್ತಿದೆ. ರೇಷ್ಮೆ ಕೃಷಿಗೆ ಸಂಬಂಧಿಸಿದಂತೆ ಹೊಸ ತಂತ್ರಜ್ಞಾನ ಮತ್ತು ಉತ್ಪನ್ನಗಳ ಆವಿಷ್ಕಾರ ಮಾಡಿದೆ ಎಂದು ಡಾ.ದೀಪಾ ತಿಳಿಸಿದರು.


ಇದೇ ವೇಳೆ ಮಾತನಾಡಿದ ಕೇಂದ್ರ ರೇಷ್ಮೆ ಮಂಡಳಿ (ತಾಂತ್ರಿಕ) ನಿರ್ದೇಶಕ ಡಾ.ಎಸ್.ಮಂಥಿರಾ ಮೂರ್ತಿ ಅವರು, ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ರೇಷ್ಮೆ ಕೃಷಿಗೆ ಸಂಬಂಧಿಸಿದಂತೆ ಹಲವು ತಾಂತ್ರಿಕ ಆವಿಷ್ಕಾರ ನಡೆಸಿದೆ. ಈ ಶಿಬಿರದಲ್ಲಿ ಪಾಲ್ಗೊಂಡಿರುವ ವಿಜ್ಞಾನಿಗಳಿಗೆ ರೇಷ್ಮೆ ಬೆಳೆಯ ತಾಂತ್ರಿಕತೆಗಳನ್ನು ಪ್ರಾಯೋಗಿಕವಾಗಿ ವಿವರಿಸಿದರು.

ಈ ಸಂಸ್ಥೆಯು 2014 ರಿಂದ ಇಲ್ಲಿವರೆಗೆ 22 ದೇಶಗಳ 132 ವಿದೇಶಿಯರಿಗೆ 6 ಹಂತದಲ್ಲಿ ತರಬೇತಿ ನೀಡಿದೆ. ಈಗ 7 ನೇ ತಂಡದ 30 ವಿದೇಶಿಯರಿಗೆ ತರಬೇತಿ ನೀಡಲಾಗುತ್ತಿದೆ ಎಂದು ಡಾ. ಮಂಥಿರಾ ಮೂರ್ತಿ ಮಾಹಿತಿ ನೀಡಿದರು.

ನಂತರ ಮಾತನಾಡಿದ ಐಸಿಎಸ್‌ನ ಸಹಾಯಕ ಕಾರ್ಯದರ್ಶಿ ಪದ್ಮನಾಭ ನಾಯಕ್ ಅವರು, ರೇಷ್ಮೆ ಮತ್ತು ರೇಷ್ಮೆ ಉದ್ಯಮಕ್ಕೆ ಸಂಬಂಧಿಸಿದಂತೆ ಪೂರ್ಣ ಮಾಹಿತಿ ನೀಡಿದರು.

ವಿಜ್ಞಾನಿಗಳಾದ ಡಾ.ಎಲ್.ಕುಸುಮಾ ಮತ್ತು ಡಾ.ಎಂ.ಎಸ್.ರಂಜಿನಿ ಕಾರ್ಯಕ್ರಮ ನಿರೂಪಣೆ ಮಾಡಿದರು. ವಿಜ್ಞಾನಿ ಡಾ.ಕೆ.ಎನ್. ಮಧುಸೂದನ್ ವಂದನಾರ್ಪಣೆ ಮಾಡಿದರು.

ಅಪರಿಚಿತ ವಾಹನ ಡಿಕ್ಕಿ: ಚಿರತೆ ಮರಿ ಸಾವು



ಮೈಸೂರು, ಸೆ.3(ಎಂಟಿವೈ)– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಚಿರತೆ ಮರಿಯೊಂದು ಮೃತಪಟ್ಟಿರುವ ಘಟನೆ ಮೈಸೂರು – ಮಾನಂದವಾಡಿ ಮುಖ್ಯ ರಸ್ತೆಯ ಹೆಚ್.ಡಿ.ಕೋಟೆ ತಾಲೂಕಿನ ಹೆಚ್. ಮಟಗೆರೆ ಗ್ರಾಮದ ಬಳಿ ಮಂಗಳವಾರ ರಾತ್ರಿ ನಡೆದಿದೆ. ಅಪರಿಚಿತ ವಾಹನ ಡಿಕ್ಕಿಯಿಂದ 6–8 ತಿಂಗಳ ಗಂಡು ಚಿರತೆ ಮರಿ ಸಾವನ್ನಪ್ಪಿದ್ದು, ಅಪಘಾತ ಮಾಡಿದ ವಾಹನದೊಂದಿಗೆ ಚಾಲಕ ಪರಾರಿಯಾಗಿದ್ದಾನೆ. ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಬಂದು ಚಿರತೆ ಕಳೇಬರ ಕೊಂಡೊಯ್ದು ಮರಣೋತ್ತರ ಪರೀಕ್ಷೆ ನಡೆಸಿ, ದಹಿಸಲಾಯಿತು. ಅಲ್ಲದೆ, ಅಪಘಾತ ಮಾಡಿದ ವಾಹನ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಸೆ.3– ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಸೆ. 9 ರಿಂದ 13 ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಿಗ್ಗೆ 6 ರಿಂದ 8.30 ಹಾಗೂ ಸಂಜೆ 6 ರಿಂದ 8.30 ವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9480476825, 9483589825 ಸಂಪರ್ಕಿಸಬಹುದು.

ಅಧ್ಯಯನದಿಂದ ಮಾತ್ರವೇ ಸಾಧನೆ ಸಾಧ್ಯ; ಸಂಶೋಧನಾ ವಿದ್ಯಾರ್ಥಿಗಳಿಗೆ ಸಲಹೆ



ಮೈಸೂರಿನ ಬೋಗಾದಿಯಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ 10 ದಿನಗಳ ಸಂಶೋಧನಾ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರವನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಟಿ. ಯೋಗೀಶ ಉದ್ಘಾಟಿಸಿದರು.

ಮೈಸೂರು, ಸೆ.3(ಎಂಟಿವೈ)– ಸಂಶೋಧನಾ ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಜ್ಞಾನ ಸಂಪಾದಿಸಲು ಹೆಚ್ಚಿನ ಅಧ್ಯಯನದಲ್ಲಿ ತೊಡಗಿಸಿಕೊಂಡಾಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಟಿ. ಯೋಗೀಶ ಸಲಹೆ ನೀಡಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಏರ್ಪಡಿಸಿದ್ದ ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ 10 ದಿನಗಳ ಸಂಶೋಧನಾ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಶೋಧನಾ ವಿದ್ಯಾರ್ಥಿಗಳಿಗೆ ಸಾಧನೆ ಮಾಡಲು ಸಾಕಷ್ಟು ಅವಕಾಶವಿದೆ. ಅದಕ್ಕೆ ಶ್ರದ್ಧೆಯಿಂದ ಅಧ್ಯಯನ ಮಾಡಬೇಕು. ನಾನೇ ಶ್ರೇಷ್ಠ ಎಂದು ತಿಳಿದುಕೊಂಡು ಶ್ರಮಪಟ್ಟು ಪುಸ್ತಕಗಳನ್ನು ಹೆಚ್ಚಾಗಿ ಓದುವ ಮೂಲಕ ಜ್ಞಾನ ವೃದ್ಧಿಸಿಕೊಳ್ಳಬೇಕು. ಶ್ರಮಕ್ಕೆ ತಕ್ಕಫಲ ಸಿಗುತ್ತದೆ ಎಂದರು.

ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಂದ ಸಂಶೋಧನಾ ವಿದ್ಯಾರ್ಥಿಗಳು ಬಂದೀದ್ದೀರಿ. ನೀವು ಎಲ್ಲಿಂದ ಬಂದಿದ್ದೀರೋ ಅದು ಮುಖ್ಯವಲ್ಲ. ನಾನೇ ಮೊದಲಿಗನಾಗುತ್ತೇನೆ ಎಂದು ದೃಢ ಸಂಕಲ್ಪ ಮಾಡಿ ಸಾಧನೆ ಮಾಡಿ, ಆಗ ಯಶಸ್ಸು ಕಾಣಲು ಸಾಧ್ಯವಿದೆ. ನಾನು ಕಾಲೇಜಿನಲ್ಲಿ ಓದುವಾಗ ಇಂಗ್ಲೀಷಿನಲ್ಲಿ 35 ಅಂಕ ಪಡೆಯಲು ಕಷ್ಟಪಡುತ್ತಿದ್ದೆ. ಆದರೆ ಶ್ರಮಪಟ್ಟಿದ್ದರಿಂದ ರ‍್ಯಾಂಕ್ ಪಡೆದು, ಈಗ ನಿಮ್ಮ ಮುಂದೆ ಅಧಿಕಾರಿಯಾಗಿ ನಿಂತಿದ್ದೇನೆ. ಸಮಾಜಕ್ಕೆ ಕೊಡುಗೆ ನೀಡಬೇಕಾದರೆ ನೀವು ಚೆನ್ನಾಗಿರಬೇಕು. ಏನೇ ಕೆಲಸ ಮಾಡಿದರೂ ಅಚ್ಚುಕಟ್ಟಾಗಿ ಮಾಡಿ, ನಿಮಗೆ ಅಗತ್ಯವಿರುವ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸಿಕೊಡುತ್ತೇವೆ. ಈ ಸಂಸ್ಥೆ ಇನ್ನೂ ಚೆನ್ನಾಗಿ ಕೆಲಸ ಮಾಡಲು ನಿಮ್ಮ ಅಭಿಪ್ರಾಯ, ಸಲಹೆ ನೀಡಬಹುದು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಪಡಿಸಲು ಅಧಿಕಾರಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ, ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ನಿಖರ ಮಾಹಿತಿ ಸಂಗ್ರಹಿಸಲು ಸಂಶೋಧನಾಧಿಕಾರಿಗಳಿಗೆ ಟ್ಯಾಬ್ ವಿತರಿಸಲಾಯಿತು. ಸಮಾರಂಭದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ. ಜೆ. ಸೋಮಶೇಖರ್, ಹಂಪಿ ವಿ.ವಿ.ಯ ಪ್ರೊ ಹೆಚ್.ಡಿ. ಪ್ರಶಾಂತ್, ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಎಂ.ಕೆ. ಮಲ್ಲೇಶ್, ಲೆಕ್ಕಾಧಿಕಾರಿ ಬಿ.ಆರ್. ಭವ್ಯ, ಅಧೀಕ್ಷಕರಾದ ಎಂ.ವಿ. ನಾಗರತ್ನ, ಡಾ. ಮೋಹನ್, ಅರುಣ್‌ಪ್ರಭು, ಗಂಗಾಧರ್ ಇನ್ನಿತರರು ಉಪಸ್ಥಿತರಿದ್ದರು.

ಬಸ್ ಡಿಕ್ಕಿ : ಕಾರ್ಮಿಕ ಸಾವು



ಹರೀಶ್

ಕೆ.ಆರ್.ಪೇಟೆ, ಸೆ.3–ಬಸ್ಸಿಗೆಂದು ಹೋಗುತ್ತಿದ್ದ ಕಾರ್ಮಿಕನೊಬ್ಬನ ಮೇಲೆ ಬಸ್ಸು ಹರಿದ ಪರಿಣಾಮ ಆತ ಸ್ಥಳದಲ್ಲೇ ಅಸುನೀಗಿರುವ ಘಟನೆಯೊಂದು ಪಟ್ಟಣದಲ್ಲಿ ಸಂಭವಿಸಿದೆ.

ತಾಲೂಕಿನ ಬೂಕನಕೆರೆ ಹೋಬಳಿಯ ಬಳ್ಳೇಕೆರೆ ಗ್ರಾಮದ ಕೆಂಪಟ್ಟೇಗೌಡ ಮತ್ತು ಅಮಲಮ್ಮ ದಂಪತಿಗಳ ಪುತ್ರ ಸೆಂಟ್ರಿಂಗ್ ಕೆಲಸ ಮಾಡಿಕೊಂಡಿದ್ದ ಹರೀಶ್(32) ಎಂಬಾತನೇ ಮೃತಪಟ್ಟವನಾಗಿದ್ದಾನೆ

ಘಟನೆ ವಿವರ: ನಿನ್ನೆ ಕೆಲಸ ಮುಗಿಸಿ ಊರಿಗೆ ಹೋಗಲು ತಡವಾದ ಕಾರಣ ಬಸ್ ಸ್ಟಾಂಡಿನಲ್ಲಿ ರಾತ್ರಿ ಮಲಗಿದ್ದನೆನ್ನಲಾಗಿದೆ. ಬೆಳಿಗ್ಗೆ 6.15ರ ಸಮಯದಲ್ಲಿ ಟೀ ಕುಡಿಯಲೆಂದು ಹೊರಹೋಗಿದ್ದವನು ಮತ್ತೆ ನಿಲ್ದಾಣಕ್ಕೆ ಬರುತ್ತಿದ್ದಾಗ ನಿಲ್ದಾಣದೊಳಕ್ಕೆ ಬರುತ್ತಿದ್ದ ಬಸ್ ತಗುಲಿ ಕೆಳಕ್ಕೆ ಬಿದ್ದಾಗ ಹಿಂಬದಿಯ ಚಕ್ರಗಳು ಈತನ ಮೈಮೇಲೆ ಹರಿದಿದೆ. ಗಂಭೀರವಾಗಿ ಗಾಯಗೊಂಡ ಈತ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ

ಪಟ್ಟಣ ಠಾಣೆಯ ವೃತ್ತ ನಿರೀಕ್ಷಕಿ ಸುಮಾರಾಣಿ, ಎಎಸ್ಐ ಚಂದ್ರ ಶೇಖರ್. ಬಿ.ಎಸ್ ಭೇಟಿ ನೀಡಿ ಬಸ್ ಅನ್ನು ವಶಕ್ಕೆ ಪಡೆದುಕೊಂಡು, ಮೃತ ಹರೀಶನ ತಾಯಿ ಅಮಲಮ್ಮ ನೀಡಿದ ದೂರಿನ ಮೇರೆಗೆ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ವೀಡಿಯೋ ಮಾಡಿ ನಿವೃತ್ತ ನೌಕರ ಆತ್ಮಹತ್ಯೆ ಯತ್ನ

ಮಂಡ್ಯ,ಆ.3–ಸ್ವಯಂ ನಿವೃತ್ತಿ ಹಣ ನೀಡುತ್ತಿಲ್ಲ ಎಂದು ಆರೋಪಿಸಿ ನಿವೃತ್ತ ನೌಕರನೊಬ್ಬ ವೀಡಿಯೊ ಮಾಡಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ತಾಲೂಕಿನ ಹುಲಿವಾನ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಹದೇವಸ್ವಾಮಿ ಆತ್ಮಹತ್ಯೆಗೆ ಯತ್ನಿಸಿದ ನಿವೃತ್ತ ನೌಕರನಾಗಿದ್ದಾನೆ. ಅಸ್ವಸ್ಥಗೊಂಡ ಈತನನ್ನು ಸ್ಥಳೀಯರು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೈಷುಗರ್ ಫ್ಯಾಕ್ಟರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮಹದೇವಸ್ವಾಮಿ 10 ವರ್ಷದ ಹಿಂದೆ ಸ್ವಯಂ ನಿವೃತ್ತಿ ಪಡೆದಿದ್ದರು. ಅದರ ಬಾಕಿ ಹಣವನ್ನು ನೀಡದೆ ಸತಾಯಿಸುತ್ತಿದ್ದಾರೆ ಎಂದು ವೀಡಿಯೊದಲ್ಲಿ ಆರೋಪಿಸಿದ್ದಾರೆ. ಈ ಬಗ್ಗೆ ಕಾರ್ಖಾನೆಯ ಅಧಿಕಾರಿಗಳು ಮತ್ತು ಅಧ್ಯಕ್ಷರಿಗೂ ಹಲವು ಬಾರಿ ಮನವಿ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಕಾನೂನು ಪ್ರಕ್ರಿಯೆ ಅಂತ ಪದೇ ಪದೇ ಸತಾಯಿಸುತ್ತಿದ್ದಾರೆ ಎಂದು ದೂರಿದ್ದಾರೆ.

ಜಿಲ್ಲಾಧಿಕಾರಿಗೆ ಮನವಿ ಮಾಡಿದಾಗ ಕ್ರಮ ವಹಿಸುವುದಾಗಿ ತಿಳಿಸಿದ್ದರು. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಹಿಂದೆ ಇದ್ದ ಜನರಲ್ ಮ್ಯಾನೇಜರ್ ಇವರಿಗೆ ಹಣ ನೀಡಬಹುದು ಎಂದು ಸಹಿ ಮಾಡಿದ್ದರು. ಅಂದಿನಿಂದ ಇಂದಿನವರೆಗೂ ಕೇಳಿಕೊಳ್ಳುತ್ತಿದ್ದೇನೆ. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೆ, ನಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಈ ಹಿಂದೆಯೂ ವೀಡಿಯೊದಲ್ಲಿ ಹೇಳಿದ್ದೆ. ಆಗಲೂ ಯಾವುದೇ ಹಣ ನೀಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕಾನೂನು ಪ್ರಕ್ರಿಯೆ ಇದೆ ಎಂದು ತಳ್ಳಿ ಹಾಕುತ್ತಿದ್ದಾರೆ. ಮಹದೇವಸ್ವಾಮಿ ಫೈಲ್ ತಡೆ ಹಿಡಿಯಬೇಕು ಎಂದು ಹೇಳಿದ್ದಾರೆ. ಅದನ್ನು ನಾನು ಕಿವಿಯಾರೆ ಕೇಳಿದ್ದೇನೆ. ಅದಕ್ಕಾಗಿ ಇಂದು ವಿಷ ಕುಡಿಯುತ್ತಿದ್ದೇನೆ ಎಂದು ವೀಡಿಯೋ ಮಾಡಿ ವಿಷ ಸೇವಿಸಿದ್ದಾರೆ.

ಗಣೇಶ ಮೂರ್ತಿ ವಿಸರ್ಜನೆ ವೇಳೆ ವ್ಯಕ್ತಿ ನೀರು ಪಾಲು



ರವಿ

ಭಾರತೀನಗರ,ಸೆ.3– ಗಣೇಶ ಮೂರ್ತಿ ವಿಸರ್ಜನೆ ವೇಳೆ ವ್ಯಕ್ತಿಯೊಬ್ಬ ನೀರು ಪಾಲಾಗಿರುವ ಘಟನೆ ಸಮೀಪದ ಕಾರ್ಕಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ರವಿ ಬಿನ್ ಬಸವರಾಜು (40) ನೀರು ಪಾಲಾದ ದುರ್ದೈವಿಯಾಗಿದ್ದಾನೆ. ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು. ವಿಸರ್ಜನೆ ಅಂಗವಾಗಿ ಸೋಮವಾರ ಸಂಜೆ ಗ್ರಾಮದಲ್ಲಿ ಅದ್ದೂರಿಯಾಗಿ ಮೆರವಣಿಗೆ ಕೂಡ ನಡೆಸಲಾಗಿತ್ತು. ಮಧ್ಯರಾತ್ರಿ 1 ಗಂಟೆ ವೇಳೆಗೆ ಕ್ಯಾತಘಟ್ಟ ಗ್ರಾಮದ ಬಳಿಯ ಹೆಬ್ಬಾಳ ನಾಲೆಗೆ ವಿಸರ್ಜನೆ ಮಾಡಲು 20 ರಿಂದ 30 ಜನ ಪೂಜೆ ಸಲ್ಲಿಸಿ ಮೂರ್ತಿ ವಿಸರ್ಜನೆಗೆ ನೀರಿಗೆ ಇಳಿದಾಗ ನೀರಿನ ರಭಸಕ್ಕೆ ರವಿ ಕೊಚ್ಚಿ ಹೋಗಿದ್ದಾನೆ. ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಶವವನ್ನು ಹೊರ ತೆಗೆದು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಕೆ.ಎಂ.ದೊಡ್ಡಿ ಪೋಲೀಸರು ಪ್ರಕರಣ ದಾಖಲಿಸಿದ್ದಾರೆ.

ಗಣೇಶನ ವಿಸರ್ಜನೆ

ಎಚ್ಚರಿಕೆ ವಹಿಸಲು ಜಿಲ್ಲಾಧಿಕಾರಿ ಸೂಚನೆ

ಮಂಡ್ಯ, ಸೆ.3–ನಾಗಮಂಗಲ ತಾಲೂಕಿನಲ್ಲಿ ಸೆ. 4 ರಂದು ಸಾಮೂಹಿಕ ಗಣೇಶ ಮೂರ್ತಿಗಳ ವಿಸರ್ಜನೆ ಕಾರ್ಯಕ್ರಮ ನಡೆಯಲಿದ್ದು, ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಎಚ್ಚರಿಕೆ ವಹಿಸುವಂತೆ ಜಿಲ್ಲಾಧಿಕಾರಿ ಡಾ.ಕುಮಾರ ಅಧಿಕಾರಿಗಳಿಗೆ ಸೂಚಿಸಿದ್ದಾರೆ



ಪಾಂಡವಪುರ ಡಿವೈಎಸ್‌ಪಿ ಕಚೇರಿಯಲ್ಲಿ ಗಣಪತಿ ಮೂರ್ತಿ ಪ್ರತಿಷ್ಠಾಪಿಸಿರುವ ಆಯೋಜಕರು ಹಾಗೂ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು. ನಾಳೆ ಸುಮಾರು 11 ಗಣಪತಿಗಳ ವಿಸರ್ಜನೆಗೆ ಸಿದ್ಧತೆಯಾಗಿದ್ದು, ಮೆರವಣಿಗೆ ಸಾಗುವ ಸ್ಥಳಗಳಲ್ಲಿ ಸೂಕ್ತ ಬಂದೋಬಸ್ತ್‌ಗೆ ವ್ಯವಸ್ಥೆ ಮಾಡಿ ಕೊಳ್ಳಲಾಗಿದೆ. ಆಯೋಜಕರು ಕೂಡ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ನೀಡಿರುವ ಸೂಚನೆಗಳನ್ನು ಪಾಲಿಸಿ. ಈಗಾಗಲೇ ಬಂದೋಬಸ್ತ್ ಕೆಲಸಕ್ಕೆ ಅಗತ್ಯ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಎಂದರು.

ಈ ಬಾರಿ ಪೊಲೀಸ್ ಇಲಾಖೆಯಿಂದ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗಿದ್ದು, ಸಮಾಜದ ಶಾಂತಿ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ಹಾಗೂ ಕೋಮು ಗಲಭೆ ಉಂಟುಮಾಡುವ ರೀತಿ ಯಾವುದಾದರೂ ಪ್ರಯತ್ನ ನಡೆದಲ್ಲಿ ನಿರ್ದಾಕ್ಷಿಣ್ಯವಾಗಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಗಣಪತಿ ಹಬ್ಬವು ಸಮಾಜಕ್ಕೆ ಒಳಿತಾಗಲಿ ಎಂದು ಆಚರಿಸುವ ಹಬ್ಬ. ಸಮಾಜದ ಮುಖಂಡರು, ಸ್ವಯಂ ಸೇವಾ ಸಂಸ್ಥೆಗಳು, ಸಾರ್ವಜನಿಕರು ತಮ್ಮ ಸುತ್ತಮುತ್ತಲು ಯಾವುದೇ ಅಹಿತಕರ ಘಟನೆಯಾಗದಂತೆ ಎಚ್ಚರಿಕೆ ವಹಿಸಿ ಜಿಲ್ಲಾಡಳಿತದೊಂದಿಗೆ ಕೈ ಜೋಡಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್‌ಪಿ ಡಿ.ಚಲುವರಾಜು, ತಹಶೀಲ್ದಾರ್ ಆದರ್ಶ, ಸಿ.ಪಿ.ಐ ನಿರಂಜನ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮದ್ಯದ ಅಂಗಡಿಗಳ ಬಂದ್ : ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ನಾಳೆ ಬೆಳಿಗ್ಗೆ 6 ಗಂಟೆ ಯಿಂದ ಸೆ. 5ರ ಬೆಳಿಗ್ಗೆ 10 ಗಂಟೆವರೆಗೆ ಟೌನ್ ಮತ್ತು ಸುತ್ತಮುತ್ತಲಿನ 10ಕಿ.ಮೀ ವ್ಯಾಪ್ತಿಯ ಎಲ್ಲಾ ಮಾದರಿಯ ಮದ್ಯದ ಅಂಗಡಿಗಳು, ಬಾರ್‌ಗಳನ್ನು ಮುಚ್ಚಲು, ಮದ್ಯ ಮಾರಾಟ, ಸಾಗಾಣಿಕೆ ಮತ್ತು ಶೇಖರಣೆ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ

ಪುರಸಭೆ ಪ್ರಭಾರ ಮುಖ್ಯಾಧಿಕಾರಿ ನೇಮಕ



ಶ್ರೀರಂಗಪಟ್ಟಣ, ಸೆ.3– ಪುರಸಭೆ ಪ್ರಭಾರ ಮುಖ್ಯಾಧಿಕಾರಿಯನ್ನಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿ ವ್ಯವಸ್ಥಾಪಕರಾಗಿದ್ದ ಬಿ.ಜಿ.ಸತೀಶ ಅವರನ್ನು ಸರ್ಕಾರ ನೇಮಿಸಿದೆ.

ಈ ಹಿಂದೆ ಪ್ರಭಾರ ಮುಖ್ಯಾಧಿಕಾರಿಯಾಗಿದ್ದ ರಾಜಣ್ಣ ಅವರ ಸೇವೆಯನ್ನು ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಹಿಂಪಡೆದಿದ್ದರಿಂದ ತೆರವಾದ ಹುದ್ದೆಗೆ ಬಿ.ಜಿ ಸತೀಶ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ. ಕರ್ತವ್ಯ ನಿರ್ವಹಿಸಲು ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿಗಳ ಸೂಚನೆ ಮೇರೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರು ಆದೇಶಿಸಿದ್ದಾರೆ.

ಮತಪಟ್ಟಿ ಬದಲಾವಣೆ ವಿಚಾರ: ಚರ್ಚೆಗೆ ಆಸ್ಪದ



ಪಿಎಲ್‌ಡಿ ಬ್ಯಾಂಕ್ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷ ಎಚ್.ಬಿ.ಚಲುವೇಗೌಡ ಉದ್ಘಾಟಿಸಿದರು.

ಪಾಂಡವಪುರ, ಸೆ3–ಪಿಎಲ್‌ಡಿ ಬ್ಯಾಂಕ್ ಚುನಾವಣೆಯ ಮತದಾರರ ಪಟ್ಟಿಯಲ್ಲಿ ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರದ ಮತದಾರನನ್ನು ಸಾಲಗಾರ ಕ್ಷೇತ್ರದ ಮತಪಟ್ಟಿಗೆ ಸೇರಿಸಿರುವ ಬಗ್ಗೆ ಷೇರುದಾರ ಹಾರೋಹಳ್ಳಿ ಸತೀಶ್ ಮಾಡಿದ ಆರೋಪದ ವಿಚಾರ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಸಾಕಷ್ಟು ಚರ್ಚೆಗೆ ಎಡೆಮಾಡಿಕೊಟ್ಟಿತು.

ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಮಂಗಳವಾರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಚ್.ಬಿ.ಚಲುವೇಗೌಡ (ಬಕೋಡಿ) ಅಧ್ಯಕ್ಷತೆಯಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಯಲ್ಲಿ ಮತಪಟ್ಟಿ ಬದಲಾವಣೆ ವಿಚಾರವಾಗಿ ಬರೋಬ್ಬರಿ ಎರಡು ಗಂಟೆಗೂ ಅಧಿಕ ಕಾಲ ಷೇರುದಾರರು ಹಾಗೂ ಆಡಳಿತ ಮಂಡಳಿಯ ಸದಸ್ಯರ ನಡುವೆ ಚರ್ಚೆ ನಡೆಯಿತು.

ಷೇರುದಾರರು ಮತಪಟ್ಟಿ ಬದಲಾವಣೆಯ ಬಗ್ಗೆ ಸೂಕ್ತ ತನಿಖೆ ನಡೆಸಿ ಸಂಬಂಧಿಸಿದ ಅಧಿಕಾರಿಯ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಪಟ್ಟು ಹಿಡಿದರು. ಸದಸ್ಯ ಸತೀಶ್ ಪಟ್ಟಣದ ನಿವಾಸಿಯಾಗಿದ್ದು, ಪಟ್ಟಣದ ಕ್ಷೇತ್ರ ಆಗಿರುವುದರಿಂದ ಮತದಾರರ ಪಟ್ಟಿ ಬದಲಾವಣೆ ವಿಚಾರವಾಗಿ ಸೂಕ್ತ ತನಿಖೆ ನಡೆಸಲು ಸಭೆಯಲ್ಲಿ ತೀರ್ಮಾನಿಸುವುದಾಗಿ ಅಧ್ಯಕ್ಷ ಚಲುವೇಗೌಡ ಭರವಸೆ ನೀಡಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಸುನಂದ, ನಿರ್ದೇಶಕರಾದ ಎಂ.ಸಿ.ಯಶವಂತ್ ಕುಮಾರ್, ಎನ್.ಮುರಳಿ, ನಾಗಶೆಟ್ಟಿ ಶಿವಣ್ಣ ಎಚ್.ಎನ್. ದಯಾನಂದ್, ಕೆ.ಆರ್.ಸುರೇಶ್, ಜೆ.ಡಿ. ನಂಜೇಗೌಡ, ಎಸ್.ಯೋಗಲಕ್ಷ್ಮಿ, ಎಚ್.ಎಂ. ಆಶಾ ಲತಾ, ಕೆ.ಕುಮಾರ್, ಸಿ.ಎಂ.ಚಂದ್ರಶೇಖರ್, ನಾಮಿನಿ ನಿರ್ದೇಶಕ ನಾಗೇಗೌಡ, ಕಾರ್ಯದರ್ಶಿ ಕೆ.ಸಂಪತ್‌ಕುಮಾರ್, ಕೆ.ಸಂಪತ್‌ಕುಮಾರ್, ಬಿ.ಪಿ.ಪುನೀತ್ ಕುಮಾರ್, ರಚನ, ಬಿ.ಎಲ್.ಅರ್ಪಿತ, ಆರ್.ಸ್ವಾಮಿ ಸಿಬ್ಬಂದಿಗಳು ಹಾಜರಿದ್ದರು.

ಸೆ.5, 6 ಶಾಸ್ತ್ರೀಯ ನೃತ್ಯಗಳ ರಾಷ್ಟ್ರೀಯ ಹಬ್ಬ

ಮಂಡ್ಯ, ಸೆ.3–ಗುರುದೇವ ಅಕಾಡೆಮಿ ಆಫ್ ಫೈನ್‌ಆರ್ಟ್ಸ್ ವತಿಯಿಂದ ಗುರುದೇವೋತ್ಸವ ಶಾಸ್ತ್ರೀಯ ನೃತ್ಯಗಳ ರಾಷ್ಟ್ರೀಯ ಹಬ್ಬ, ಗುರುದೇವ ಪ್ರಶಸ್ತಿ ಪ್ರದಾನ ಹಾಗೂ ವೈವಿಧ್ಯಮಯ ನೃತ್ಯ ಪ್ರದರ್ಶನವನ್ನು ಸೆ.5,6ರಂದು ನಗರದ ಪಿಇಎಸ್ ಕಾಲೇಜಿನ ಶ್ರೀವಿವೇಕಾನಂದ ರಂಗಮಂದಿರದಲ್ಲಿ ಯೋಜಿಸಲಾಗಿದೆ ಎಂದು ಅಕಾಡೆಮಿಯ ಡಾ.ಚೇತನ ರಾಧಾಕೃಷ್ಣ ತಿಳಿಸಿದರು.

ಸೆ.5ರ ಶುಕ್ರವಾರ ಸಂಜೆ 4ಕ್ಕೆ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಉದ್ಘಾಟನೆ ಮಾಡಲಿದ್ದು, ಜಿಲ್ಲಾಧಿಕಾರಿ ಡಾ.ಕುಮಾರ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶ್‌ಗೌಡ ಶುಭ ಹಾರೈಸುವರು, ಮುಖ್ಯ ಅತಿಥಿಗಳಾಗಿ ಎಸ್‌ಎಲ್‌ವಿ ಬುಕ್ ಪ್ರೈ.ಲಿ.ನ ದಿವಾಕರ್ ದಾಸ್, ಎಂ.ಎನ್.ಶ್ರೀಧರ್ ಭಾಗವಹಿಸಲಿದ್ದು, ಜನಪದ ಅಕಾಡೆಮಿ ಸದಸ್ಯ ಗೊರವಾಲೆ ಚಂದ್ರಶೇಖರ್ ಅವರಿಗೆ ಗುರುದೇವ ಪ್ರಶಸ್ತಿ ನೀಡಲಾಗುವುದು ಎಂದು ಗೋಷ್ಠಿಯಲ್ಲಿ ಹೇಳಿದರು.

ಸಾರ್ವಜನಿಕರ ಸಮಸ್ಯೆ ಪರಿಹರಿಸಿ

ಜಿಲ್ಲಾ ಪಂಚಾಯತ್ ಸಿಇಓ ಕೆ.ಆರ್.ನಂದಿನಿ ಸೂಚನೆ



ಸಿಇಒ ಕೆ.ಆರ್.ನಂದಿನಿ ಸಾರ್ವಜನಿಕರೊಂದಿಗೆ ಸಮಾಲೋಚನೆ ನಡೆಸಿದರು.

ಕಿಕ್ಕೇರಿ, ಸೆ.3–ಸಾರ್ವಜನಿಕರು ಕಚೇರಿಗಳಿಗೆ ಅನಗತ್ಯವಾಗಿ ಅಲೆಯುವುದನ್ನು ತಪ್ಪಿಸಲು ಹೋಬಳಿಮಟ್ಟದ ಕುಂದು ಕೊರತೆ ಸಭೆ ನಡೆಸಲಾಗುತ್ತಿದೆ ಎಂದು ಜಿಪಂ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್.ನಂದಿನಿ ಹೇಳಿದರು.

ಪಟ್ಟಣದ ಕೆ.ಎಸ್.ನರಸಿಂಹಸ್ವಾಮಿ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಹೋಬಳಿಮಟ್ಟದ ಸಾರ್ವಜನಿಕರ ಕುಂದು ಕೊರತೆ ಸಭೆಯಲ್ಲಿ ಅವರು ಮಾತನಾಡಿ, ಪ್ರತಿ ಸೋಮವಾರ ಗ್ರಾಪಂ ನಿಂದ ಜಿಪಂ ಮಟ್ಟದವರೆಗೂ ಸಾರ್ವಜನಿಕರ ಸಮಸ್ಯೆ ಆಲಿಸಿ ಪರಿಹರಿಸಲು ಮುಂದಾಗಬೇಕು. ಸಭೆಯಲ್ಲಿ 24 ಅರ್ಜಿಗಳು ಬಂದಿದ್ದು, ವಾರದೊಳಗೆ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳನ್ನು ತಿಳಿಸಬೇಕು ಎಂದು ಖಡಕ್ಆಗಿ ನುಡಿದರು.

ರಾಜ್ಯ ಹೆದ್ದಾರಿ ಬಳಿ ತ್ಯಾಜ್ಯ ಸುರಿಯುತ್ತಿದ್ದು, ಸಾಂಕ್ರಾಮಿಕ ರೋಗ, ನಾಯಿಗಳ ಕಾಟ ವಿಪರೀತವಾಗಿದೆ. ಗೂಬೆ ಗುಡ್ಡದ ಬಳಿ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಿಸಿ ಕೊಡಿ. ಸಾರ್ವಜನಿಕ ಸ್ಮಶಾನ ವ್ಯವಸ್ಥೆ, ಮಿನಿ ವಿಧಾನಸೌಧ, ಉದ್ಯಾನವನ, ಸಮುದಾಯ ಆರೋಗ್ಯ ಕೇಂದ್ರಕ್ಕೆ ವೈದ್ಯರ ವ್ಯವಸ್ಥೆ ಮಾಡಿ, ಕಿಕ್ಕೇರಿ ಪೌರಕಾರ್ಮಿಕರು ಸ.ನಂ. 3ರಲ್ಲಿ ಮನೆ ನಿರ್ಮಿಸಿಕೊಂಡಿದ್ದು ಹಕ್ಕುಪತ್ರ ಕೊಡಿ, ಲಕ್ಷ್ಮೀಪುರ ಗ್ರಾಮಕ್ಕೆ ಓವರ್ ಹೆಡ್ ನೀರಿನ ಟ್ಯಾಂಕ್ ನಿರ್ಮಿಸಿ, ರಸ್ತೆಗಳಲ್ಲಿ ಬೀದಿ ದೀಪ ಇಲ್ಲವಾಗಿದೆ. ಆಶ್ರಯ ಯೋಜನೆಯಡಿಯಲ್ಲಿ ಅರ್ಜಿ ಸಲ್ಲಿಸಿರುವವರಿಗೆ ನಿವೇಶನ ನೀಡಿ, ಕೊಟ್ಟಿಗೆ ಹಾಗೂ ಶೌಚಾಲಯ ನಿರ್ಮಿಸಿಕೊಂಡಿದ್ದು ಹಣ ಬಿಡುಗಡೆಯಾಗಿಲ್ಲ ಆಶ್ರಯ ಯೋಜನೆಯಡಿ ಮನೆ ಹಂಚಿಕೆ ಆಗಿದೆ ಆದರೆ ಹಕ್ಕುಪತ್ರ ನೀಡಿಲ್ಲ, ಐಕನಹಳ್ಳಿಯಲ್ಲಿ ರಸ್ತೆಯ ಡ್ರೈನ್‌ಗಳ ತೆರದಂತಿದ್ದು ಮುಚ್ಚುವ ವ್ಯವಸ್ಥೆ ಮಾಡಿಕೊಡಿ, ಊಗಿನಹಳ್ಳಿ ಗ್ರಾಮದಲ್ಲಿ ಗಿಡ ನೆಡದೆ ನರೇಗಾ ಯೋಜನೆಯಲ್ಲಿ ಬಿಲ್ ಮಾಡಿಕೊಳ್ಳಲಾಗಿದೆ ಎಂದು ದೂರುಗಳ ಸರಮಾಲೆಯನ್ನು ಸಾರ್ವಜನಿಕರು ಅಲವತ್ತುಕೊಂಡರು.

ಜಿ.ಪಂ. ಉಪಕಾರ್ಯದರ್ಶಿ ಲಕ್ಷ್ಮಿ, ಜಿಪಂ ಅಧಿಕಾರಿ ಅನಿತಾ, ತಾಪಂ ಸಿಇಓ ಸುಷ್ಮಾ, ಗ್ರಾಪಂ ಗಳ ಅಧ್ಯಕ್ಷರು, ಸದಸ್ಯರು, ಪಿಡಿಒ, ತಾಪಂ, ಅಧಿಕಾರಿಗಳು ಇದ್ದರು.

ಒಂದನೇ ಪುಟದಿಂದ

ಜಿಎಸ್‌ಟಿ ಬಿಗ್ ರಿಲೀಫ್

ಅಧಿಕೃತ ಪ್ರಕಟಣೆ ಹೊರಬೀಳುವ ನಿರೀಕ್ಷೆ ಇತ್ತು. ಆದರೆ ಇಂದೇ ಪ್ರಕಟಣೆ ಹೊರ ಬಿದ್ದಿದ್ದು, ಪರಿಷ್ಕೃತ ದರಗಳು ದಸರಾ ಉದ್ಘಾಟನೆ ದಿನವಾದ ಸೆ.22ರಿಂದ ಜಾರಿಗೆ ಬರಲಿವೆ. 2ನೇ ತಲೆಮಾರಿನ ಜಿಎಸ್‌ಟಿ ಸುಧಾರಣೆ ಮೂಲಕ ದೇಶದ ಜನರು ಡಬಲ್ ಧಮಾಕ ನಿರೀಕ್ಷಿಸಬಹುದು ಎಂದು ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಧಾನಿ ಮೋದಿ ಘೋಷಿಸಿದ್ದರು. ಅದರ ಬೆನ್ನಲ್ಲೇ ಹಾಲಿ ಇರುವ ಶೇ.5, ಶೇ.12, ಶೇ.18, ಶೇ.22 ತೆರಿಗೆಯ 4 ಶ್ರೇಣಿ ಬದಲು ಶೇ.5 ಮತ್ತು ಶೇ.18 ಎರಡೇ ಶ್ರೇಣಿಗಳಿಗೆ ಇಳಿಸಲಾಗಿದೆ. ಬಹುತೇಕ ದಿನಬಳಕೆ ವಸ್ತುಗಳು ಶೇ.5ರ ತೆರಿಗೆ ವ್ಯಾಪ್ತಿಗೆ ತರುವ ತೀರ್ಮಾನ ಹೊರಬಿದ್ದಿದೆ. ಈಗಾಗಲೇ ಜಿಎಸ್‌ಟಿ ಮಂಡಳಿಗೆ ಸಲ್ಲಿಕೆ ಯಾಗಿರುವ ಪ್ರಸ್ತಾವದಂತೆ ಶೇ.28ರ ತೆರಿಗೆಯನ್ನು ಶೇ.18ಕ್ಕೆ ಹಾಗೂ ಶೇ.12ರ ತೆರಿಗೆಯನ್ನು ಶೇ.5ಕ್ಕೆ ಇಳಿಸಲು ಜಿಎಸ್‌ಟಿ ಕೌನ್ಸಿಲ್ ಅನುಮೋದನೆ ನೀಡಿದೆ. ಅಂದರೆ ಇದೀಗ ಶೇ.5 ಮತ್ತು ಶೇ.18ರ ಸ್ಲ್ಯಾಬ್‌ಗಳು ಮಾತ್ರ ಇರಲಿದ್ದು, ತಂಬಾಕು ಮತ್ತು ವಿಲಾಸಿ ವಾಹನಗಳಿಗೆ ಹಾಲಿ ಇರುವ ಶೇ.40ರ 'ಸಿನ್ ಟ್ಯಾಕ್ಸ್' ಮುಂದು ವರೆಯಲಿದೆ. ವೈಯಕ್ತಿಕ ಆರೋಗ್ಯ ವಿಮೆ ಮತ್ತು ಜೀವ ವಿಮೆಗೆ ಸಂಪೂರ್ಣ ತೆರಿಗೆ ವಿನಾಯಿತಿ ಘೋಷಿಸಲಾಗಿದೆ. ಜನಸಾಮಾನ್ಯರ ಪಾಲಿಕೆ ದುಬಾರಿಯಾಗಿರುವ ವೈದ್ಯಕೀಯ ವಿಮೆಯನ್ನು ಕೈಗೆಟಕುವಂತೆ ಮಾಡಲು ಸರ್ಕಾರ ಉದ್ದೇಶಿಸಿದೆ. ಇದರ ಜೊತೆಗೆ ಕ್ಯಾನ್ಸರ್ ಔಷಧಗಳು ಸೇರಿದಂತೆ 33 ಜೀವ ರಕ್ಷಕ ಔಷಧಿಗಳಿಗೆ ಇನ್ನು ಮುಂದೆ ತೆರಿಗೆ ಇರುವುದಿಲ್ಲ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದರು.

ಇದಲ್ಲದೆ ಎಲ್ಲಾ ರೀತಿಯ ಬ್ರೆಡ್‌ಗಳು, ಸಾದಾ ಚಪಾತಿಗಳು, ಪರೋಟ, ಕಾಕ್ರಾ, ರೋಟಿಗಳನ್ನು ಶೂನ್ಯ ತೆರಿಗೆ ವ್ಯಾಪ್ತಿಗೆ ತರಲಾಗಿದೆ.

ದೈನಂದಿನ ಅಗತ್ಯ ವಸ್ತುಗಳಾದ ಹೇರ್ ಆಯಿಲ್, ಶಾಂಪೂ, ಟೂತ್‌ಪೇಸ್ಟ್, ಸೋಪ್, ಟೂತ್‌ಬ್ರಷ್, ಶೇವಿಂಗ್ ಕ್ರೀಂ, ಬೆಣ್ಣೆ, ತುಪ್ಪ, ಚೀಸ್, ಡೈರಿ ಉತ್ಪನ್ನಗಳು, ಪ್ಯಾಕ್ ಮಾಡಿದ ಕುರುಕಲು ತಿಂಡಿಗಳು, ಪಾತ್ರೆಗಳು, ಮಕ್ಕಳಿಗೆ ಹಾಲುಣಿಸುವ ಬಾಟಲ್‌ಗಳು, ಮಕ್ಕಳ ನ್ಯಾಪ್ಕಿನ್‌ಗಳು, ಕ್ಲಿನಿಕಲ್ ಡೈಪರ್‌ಗಳು, ಹೊಲಿಗೆ ಯಂತ್ರ ಮತ್ತು ಅದರ ಬಿಡಿ ಭಾಗಗಳು, ಟ್ರ್ಯಾಕ್ಟರ್ ಟೈರ್‌ಗಳು ಮತ್ತು ಬಿಡಿ ಭಾಗಗಳು, ಟ್ರ್ಯಾಕ್ಟರ್‌ಗಳು, ನಿರ್ದಿಷ್ಟ ಜೈವಿಕ ಕೀಟನಾಶಕಗಳು, ಸೂಕ್ಷ್ಮ ಪೋಷಕಾಂಶಗಳು, ಹನಿ ನೀರಾವರಿ ವ್ಯವಸ್ಥೆ ಮತ್ತು ಸ್ಪಿಂಕ್ಲರ್‌ಗಳು, ಥರ್ಮೋಮೀಟರ್, ವೈದ್ಯಕೀಯ ದರ್ಜೆಯ ಆಮ್ಲಜನಕ, ಎಲ್ಲಾ ಡಯಾಗ್ನೋಸ್ಟಿಕ್ ಕಿಟ್‌ಗಳು ಮತ್ತು ರೀ–ಏಜೆಂಟ್ಸ್, ಗ್ಲೂಕೋ ಮೀಟರ್, ಟೆಸ್ಟ್ ಸ್ಟ್ರಿಪ್‌ಗಳು, ದೃಷ್ಟಿ ಸರಿಪಡಿಸುವ ಕನ್ನಡಕಗಳು, ಎರೈಸರ್ (ಅಳಿಸುವ ರಬ್ಬರ್) ಇವುಗಳನ್ನು ಶೇ.5ರ ಸ್ಲ್ಯಾಬ್‌ಗೆ ಒಳಪಡಿಸಲಾಗಿದೆ. ಹಾಲಿ ಇವುಗಳಲ್ಲಿ ಕೆಲವು ವಸ್ತುಗಳು ಶೇ.18 ಹಾಗೂ ಮತ್ತೆ ಕೆಲವು ವಸ್ತುಗಳು ಶೇ.12ರ ಸ್ಲ್ಯಾಬ್‌ನಲ್ಲಿದ್ದವು.

ಪೆಟ್ರೋಲ್ ಮತ್ತು ಹೈಬ್ರಿಡ್, ಎಲ್‌ಪಿಜಿ, ಸಿಎನ್‌ಜಿ ಕಾರುಗಳು (1200 ಸಿಸಿ ಮತ್ತು 4 ಮೀ. ಮೀರದಂತೆ), ಡೀಸೆಲ್ ಮತ್ತು ಹೈಬ್ರಿಡ್ ಕಾರುಗಳು (1500 ಸಿಸಿ ಮತ್ತು 4 ಮೀ. ಮೀರದಂತೆ), ತ್ರಿಚಕ್ರ ವಾಹನಗಳು, ಮೋಟಾರ್ ಸೈಕಲ್‌ಗಳು (350 ಸಿಸಿ ಮತ್ತು ಅದರ ಕೆಳಗೆ), ಸರಕು ಸಾಗಣೆ ವಾಹನಗಳು, ಏರ್ ಕಂಡೀಷನರ್‌ಗಳು, ಟೆಲಿವಿಷನ್ (32 ಇಂಚಿಗಿಂತ ಹೆಚ್ಚು, ಎಲ್‌ಇಡಿ ಮತ್ತು ಎಲ್‌ಸಿಡಿ ಟಿವಿಗಳು ಸೇರಿದಂತೆ), ಮಾನಿಟರ್‌ಗಳು ಮತ್ತು ಪ್ರೊಜೆಕ್ಟರ್‌ಗಳು, ಪಾತ್ರೆ ತೊಳೆಯುವ ಯಂತ್ರಗಳು ಇವುಗಳನ್ನು ಶೇ.18ರ ಸ್ಲ್ಯಾಬ್‌ಗೆ ಒಳಪಡಿಸಲಾಗಿದ್ದು, ಹಾಲಿ ಇವುಗಳ ಸ್ಲ್ಯಾಬ್ ಶೇ.28ರಷ್ಟಿದೆ.

ತಂಬಾಕು, ಪಾನ್ ಮಸಾಲ, ಐಷಾರಾಮಿ ಕಾರುಗಳು, ಶೇ.40ರ ಸ್ಲ್ಯಾಬ್‌ನಲ್ಲಿ ಮುಂದುವರೆಯಲಿದ್ದು, ಖಾಸಗಿ ವಿಮಾನಗಳು, ಖಾಸಗಿ ಐಷಾರಾಮಿ ಹೋಟೆಲ್‌ಗಳನ್ನು ಈ ವ್ಯಾಪ್ತಿಗೆ ಸೇರಿಸಲಾಗಿದೆ. ಹಾಲಿ ಶೇ.28ರಷ್ಟಿದ್ದ ಕೂಲ್ ಡ್ರಿಂಕ್ಸ್ ಮೇಲಿನ ಜಿಎಸ್‌ಟಿಯನ್ನು ಶೇ.40ರ ಸ್ಲ್ಯಾಬ್‌ಗೆ ಸೇರಿಸಲಾಗಿದೆ.

ವೀಡಿಯೊ ಹರಿಬಿಟ್ಟ ಮಗ: ನಾಲ್ವರ ಬಂಧನ

ಮಾಡಿ ಕೂಡಲೇ ನನಗೆ ಇಂತಿಷ್ಟು ಹಣ ಕೊಡುವಂತೆಯೂ ಇಲ್ಲವಾದಲ್ಲಿ ನಿಮ್ಮ ವೈಯಕ್ತಿಕ ವಿಚಾರಗಳನ್ನು ಸಾಮಾಜಿಕ ಜಾಲತಾಲದಲ್ಲಿ ಮತ್ತಷ್ಟು ಹರಿಬಿಡುವುದಾಗಿಯೂ ಬೆದರಿಕೆ ಒಡ್ಡಿದ್ದನೆಂದು ಹೇಳಲಾಗಿದೆ. ಈ ಬಗ್ಗೆ ಸ್ನೇಹಿತರಿಂದ ಮಾಹಿತಿ ತಿಳಿದ ಸತೀಶ್ ಪೊಲೀಸರಿಗೆ ದೂರು ಸಲ್ಲಿಸಿದ ಮೇರೆಗೆ ಪ್ರಕರಣ ದಾಖಲಾಗಿದೆ. ಪೊಲೀಸರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಧೀಶರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದ್ದಾರೆ. ತಾವು ಉದ್ಯಮದೊಟ್ಟಿಗೆ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿದ್ದು ಇದನ್ನು ಸಹಿಸದ ಕೆಲವರು ತಮ್ಮ ವಿರುದ್ಧ ಪಿತೂರಿ ನಡೆಸಿ ತೇಜೋವಧೆಗೆ ಮುಂದಾಗಿದ್ದಾರೆ. ಇದರಲ್ಲಿ ತಮ್ಮ ಪುತ್ರನೂ ಶಾಮೀಲಾಗಿರುವ ವಿಷಯ ತಿಳಿದು ಪ್ರಾಣ ಭಯದ ಹಿನ್ನೆಲೆಯಲ್ಲಿ ದೂರು ಸಲ್ಲಿಸಿದ್ದಾಗಿ ಸತೀಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ

ಅದ್ದೂರಿ ದಸರಾ ದೀಪಾಲಂಕಾರ

ಮಾಡಲಾಗಿತ್ತು. ಇದೀಗ ದಸರಾ ಉದ್ಘಾಟನೆಗೆ ಕೇವಲ (ಸೆ.22) 18 ದಿನ ಮಾತ್ರ ಉಳಿದಿರುವುದರಿಂದ ದೀಪಾಲಂಕಾರ ಸಿದ್ಧತೆ ಆರಂಭವಾಗಿದೆ.



ಅತೀ ಹೆಚ್ಚು ಆಕರ್ಷಣೆ: ದಸರಾ ದೀಪಾಲಂಕಾರ ಈ ಬಾರಿ ಹಿಂದೆಂದಿಗಿಂತಲೂ ಹೆಚ್ಚು ಆಕರ್ಷಣೀಯವಾಗಿಸಲು ಕ್ರಮ ಕೈಗೊಳ್ಳಲಾಗಿದೆ. ಆ ಕಾರಣದಿಂದ ಮೈಸೂರಿನ ಪ್ರಮುಖ ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಈ ಬಾರಿ ಒಟ್ಟು 136 ಕಿ.ಮೀ. ದೀಪಾಲಂಕಾರ ಮಾಡಲಾಗುತ್ತಿದೆ. ಮೈಸೂರಿನ ಹೃದಯ ಭಾಗದ ಪ್ರಮುಖ ವೃತ್ತ ಸೇರಿದಂತೆ ವಿವಿಧ ಬಡಾವಣೆಗಳಲ್ಲಿರುವ 118 ವೃತ್ತಗಳಿಗೂ ದೀಪಾಲಂಕಾರ ಮಾಡಲಾಗುತ್ತಿದೆ. ಅಲ್ಲದೆ, ದೊಡ್ಡಕೆರೆ ಮೈದಾನ, ಗನ್‌ಹೌಸ್ ವೃತ್ತ, ರಾಮಸ್ವಾಮಿ ವೃತ್ತ, ಕೌಟಿಲ್ಯ ವೃತ್ತ, ಎಲ್ಐಸಿ ಕಚೇರಿ ವೃತ್ತ, ಮುಡಾ ವೃತ್ತ, ದೇವರಾಜ ಅರಸು ರಸ್ತೆ–ಜೆಎಲ್‌ಬಿ ರಸ್ತೆ ಜಂಕ್ಷನ್, ರೈಲ್ವೆ ನಿಲ್ದಾಣದ ವೃತ್ತ, ಚಲುವಾಂಬ ಆಸ್ಪತ್ರೆ ವೃತ್ತ, ಸರ್ಕಾರಿ ಆಯುರ್ವೇದ ಕಾಲೇಜು ವೃತ್ತ, ಹೈ ವೇ ವೃತ್ತ, ಫೌಂಟೇನ್ ವೃತ್ತ ಸೇರಿದಂತೆ 118 ವೃತ್ತಗಳಲ್ಲಿ ವರ್ಣ ರಂಜಿತ ಲೈಟ್‌ಗಳಿಂದ ವಿವಿಧ ಆಕೃತಿಗಳು ಪ್ರವಾಸಿಗರ ಮನಸೂರೆಗೊಳ್ಳಲಿವೆ.

ಹೊರ ರಾಜ್ಯಗಳಿಂದ ವಿದ್ಯುತ್ ಬಲ್ಬ್ ಆಮದು: ದೀಪಾಲಂಕರಾದ ಸೊಬಗು ಹೆಚ್ಚಿಸಲು ಈ ಬಾರಿ ಹೊರ ರಾಜ್ಯಗಳಿಂದ ಅತ್ಯಾಕರ್ಷಕ ವಿದ್ಯುತ್ ಬಲ್ಬ್ ತರಿಸಲಾಗುತ್ತಿದೆ. ಈಗಾಗಲೇ ಪ್ರಾತ್ಯಕ್ಷಿಕೆ (ಡೆಮೋ) ವೇಳೆ ಹೊರ ರಾಜ್ಯಗಳಿಂದ ತಂದಿರುವ ಅಲಂಕಾರಿಕ ಬಲ್ಬ್‌ಗಳು ದೀಪಾಲಂಕಾರದ ಮೆರಗು ಹೆಚ್ಚಿಸುವುದು ಖಚಿತವಾಗಿರುವುದರಿಂದ ಆ ಬಲ್ಬ್‌ಗಳನ್ನೇ ದೀಪಾಲಂಕಾರದಲ್ಲಿ ಬಳಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ. ಇದರಿಂದಾಗಿ ಕೋಲ್ಕತ್ತಾ ಹಾಗೂ ಇನ್ನಿತರ ರಾಜ್ಯಗಳಿಂದ ತಂದಂತಹ ಅತ್ಯಾಕರ್ಷಕ ಲಕ್ಷಕ್ಕೂ ಅಧಿಕ ಬಲ್ಬ್‌ಗಳು ನವರಾತ್ರಿ ವೇಳೆ ಮೈಸೂರನ್ನು ಬೆಳಗಲಿವೆ.

ಹೊರ ರಾಜ್ಯದಿಂದ ತರುವ ಬಲ್ಬ್‌ಗಳು ಚಲಿಸುವಂತೆ(ಮೂವ್‌ಮೆಂಟ್) ಭಾಸವಾಗುವುದರಿಂದ ಆಕೃತಿಗಳಿಗೆ ಜೀವಕಳೆ ಬಂದಂತೆ ಕಾಣುತ್ತವೆ. ಈ ಬಲ್ಬ್‌ಗಳು ತ್ರಿವರ್ಣ ಧ್ವಜ ಹಾರಾಡುವಂತೆ, ವಾಹನಗಳ ಆಕೃತಿಯಲ್ಲಿ ಚಕ್ರಗಳು ಚಲಿಸುವಂತೆ, ವಿವಿಧ ಗೊಂಬೆ ಆಕೃತಿಗಳು ಚಲನಶೀಲತೆಯಿಂದ ಕಾಣುವಂತೆ ಕಂಡು ಬರುವುದರಿಂದ ಆ ಬಲ್ಬ್‌ಗಳು ನೋಡುಗರನ್ನು ಆಕರ್ಷಿಸಲಿವೆ.

2.50 ಲಕ್ಷ ಯೂನಿಟ್ ವಿದ್ಯುತ್ ಬಳಕೆ: ಈ ಬಾರಿ ದೀಪಾಲಂಕಾರಕ್ಕೆ ಲಕ್ಷಾಂತರ ವಿದ್ಯುತ್ ಬಲ್ಬ್ ಬೆಳಗುವುದರಿಂದ 2.50 ಲಕ್ಷ ಯೂನಿಟ್(3 ಮೆಗಾವ್ಯಾಟ್) ವಿದ್ಯುತ್ ಖರ್ಚಾಗಲಿದೆ. ಅಲ್ಲದೆ, ದಸರಾ ದೀಪಾಲಂಕಾರಕ್ಕಾಗಿ ಈ ಬಾರಿ 6 ಕೋಟಿ ರೂ. ವೆಚ್ಚವಾಗಲಿದೆ. ಈಗಾಗಲೇ ವಿವಿಧ ಕಾಮಗಾರಿಯನ್ನು ವಿಂಗಡಿಸಿ, ಟೆಂಡರ್ ಕರೆದು ಗುತ್ತಿಗೆದಾರರಿಗೆ ದೀಪಾಲಂಕಾರದ ಜವಾಬ್ದಾರಿ ನೀಡಲಾಗಿದೆ.

ಸುರಕ್ಷತೆಗೆ ಹೆಚ್ಚಿನ ಆದ್ಯತೆ: ದೀಪಾಲಂಕಾರದ ವೇಳೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚನೆ ನೀಡಲಾಗಿದೆ. ದೀಪಾಲಂಕಾರ ನೋಡಲು ಪ್ರವಾಸಿಗರು ಮುಗಿ ಬೀಳುವುದರಿಂದ ಯಾವುದೇ ಅಪಾಯವಾಗದಂತೆ ನೋಡಿಕೊಳ್ಳಲು ಹಾಗೂ ವಿದ್ಯುತ್ ಅವಘಡ ತಪ್ಪಿಸಲು ಕಟ್ಟೆಚ್ಚರ ವಹಿಸುವಂತೆ ಸೂಚಿಸಲಾಗಿದೆ. ಅಲ್ಲದೆ, ಜೋತು ಬೀಳುವ ವೈಯರ್‌ಗಳು ಎಲ್ಲಿಯೂ ಡ್ಯಾಮೇಜ್ ಆಗಿರದಂತೆ ನೋಡಿಕೊಳ್ಳುವಂತೆ, ದೀಪಾಲಂಕಾರದ ವೇಳೆ ಪ್ರತಿದಿನ ಸಂಜೆ ವೇಳೆ ತಪಾಸಣೆ ಮಾಡುವಂತೆ ಸೆಸ್ಕ್ ಎಂಡಿ ಮುನಿಗೋಪಾಲ್ ರಾಜ್ ಸಿಬ್ಬಂದಿಗೆ ಸೂಚನೆ ನೀಡಿದ್ದಾರೆ.

ಬೀಡಿಯ ಬೆಂಕಿಯಲ್ಲಿ ಜೀವಂತ ಬೆಂದ ವೃದ್ಧ!

ಗಮನಕ್ಕೆ ಬಂದಿಲ್ಲ. ಬೆಂಕಿಯ ಕೆನ್ನಾಲಿಗೆ ಮನೆಯೊಳಗಿದ್ದ ತ್ಯಾಜ್ಯಗಳಿಗೆ ಪೂರ್ಣ ವ್ಯಾಪಿಸಿ, ಸಿದ್ದನಾಯಕ ಮಲಗಿದ್ದ ಹಾಸಿಗೆಗೂ ಹೊತ್ತಿಕೊಂಡಿದೆ. ಈ ವೇಳೆ ಬಚ್ಚಲು ಮನೆಯಲ್ಲಿ ಸ್ನಾನ ಮಾಡುತ್ತಿದ್ದ ಮೊಮ್ಮಗಳು ಲಕ್ಷ್ಮಿ ಹೊಗೆ ಬರುತ್ತಿದ್ದದ್ದನ್ನು ಗಮನಿಸಿ, ಹೊರಗೆ ಬರುವ ವೇಳೆಗಾಗಲೇ ಬೆಂಕಿಯ ಕೆನ್ನಾಲಿಗೆ ಆರ್ಭಟಿಸಿತ್ತು. ತಾತ ಸಿದ್ದನಾಯಕ ಅವರನ್ನು ಮನೆಯಿಂದ ಹೊರಗೆ ಬರುವಂತೆ ಲಕ್ಷ್ಮಿ ಕಿರುಚಿಕೊಂಡಿದ್ದಾಳೆ. ಆದರೆ, ಹೊಗೆ ಮತ್ತು ಬೆಂಕಿ ಕೆನ್ನಾಲಿಗೆಯಿಂದ ಅವರು ತತ್ತರಿಸಿದ್ದಾರೆ. ಸ್ಥಳೀಯರು ನೆರವಿಗೆ ಬಂದು ಬೆಂಕಿ ನಂದಿಸುವ ಪ್ರಯತ್ನ ಮಾಡಿದರೂ ಯಾವುದೇ ಪ್ರಯೋಜನವಾಗಲಿಲ್ಲ.

ಗುಜರಿಗೆ ಹಾಕಲು ಮನೆಯಲ್ಲಿ ಸಂಗ್ರಹಿಸಿಡಲಾಗಿದ್ದ ಪ್ಲಾಸ್ಟಿಕ್ ರಾಶಿಯಿಂದಾಗಿ ಬೆಂಕಿ ಮನೆಯನ್ನೆಲ್ಲಾ ಬೇಗ ಆವರಿಸಿದೆ. ಇದರಿಂದ ಮನೆ ಬಾಗಿಲು, ಕಿಟಕಿ, ಅಟ್ಟಕ್ಕೆ ಬಳಸಿದ್ದ ಹಲಗೆ ಹಾಗೂ ಮನೆಯಲ್ಲಿದ್ದ ಪೀಠೋಪಕರಣಗಳನ್ನು ಬೆಂಕಿ ಆಹುತಿ ಪಡೆದಿದೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಬನ್ನಿಮಂಟಪ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸುವ ವೇಳೆಗೆ ಸಿದ್ದನಾಯಕ ಪೂರ್ಣವಾಗಿ ಬೆಂದು ಹೋಗಿದ್ದಾರೆ. ಮಂಚದ ಮೇಲೆ ಮಲಗಿದ ಸ್ಥಿತಿಯಲ್ಲಿಯೇ ದಹಿಸಿ ಹೋಗಿದ್ದರು.

ಸಿಲಿಂಡರ್ ಸ್ಫೋಟಿಸಿದ್ದರೆ ಮತ್ತಷ್ಟು ಅನಾಹುತ: ಅಗ್ನಿ ದುರಂತದ ಪ್ರಕರಣ ಬೆಳಗ್ಗೆ 9.30ರಲ್ಲಿ ಸಂಭವಿಸಿದ್ದು, 9.45ಕ್ಕೆ ಸ್ಥಳೀಯರು ಬನ್ನಿಮಂಟಪದ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಅಗ್ನಿಶಾಮಕ ಸಿಬ್ಬಂದಿ ಮಹೇಶ್ ಮಂದಿಗೌಡ ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಬೆಂಕಿ ನಂದಿಸುವ ಕಾರ್ಯಾಚರಣೆ ಆರಂಭಿಸಿದ್ದಾರೆ. ಅಷ್ಟರಲ್ಲಾಗಲೇ ಬೆಂಕಿ ಇಡೀ ಮನೆಯನ್ನ ಆವರಿಸಿಕೊಂಡಿತ್ತು. ಸ್ಥಳಕ್ಕೆ ಅಗ್ನಿಶಾಮಕ ಪ್ರಾದೇಶಿಕಾಧಿಕಾರಿ ಚಂದನ್, ಅಗ್ನಿಶಾಮಕಾಧಿಕಾರಿ ಕೆ.ಜಿ.ರಾಜೇಶ್ ಭೇಟಿ ನೀಡಿದರು. ಬೆಂಕಿ ನಿಯಂತ್ರಣಕ್ಕೆ ಬಂದ ಮೇಲೆ ಅಗ್ನಿಶಾಮಕ ಸಿಬ್ಬಂದಿ ಮನೆಯೊಳಗೆ ನುಗ್ಗಿ ಸಿಲಿಂಡರ್ ಹೊರಗೆ ತಂದಿದ್ದಾರೆ. ಒಂದು ವೇಳೆ ಸಿಲಿಂಡರ್ ಸ್ಫೋಟಿಸಿದ್ದರೆ ಭಾರೀ ಅನಾಹುತ ಸಂಭವಿಸುತ್ತಿತ್ತು.

ಯುಡಿಆರ್ ದಾಖಲು: ವಿಷಯ ತಿಳಿದು ಸ್ಥಳಕ್ಕೆ ಬಂದ ಮಂಡಿ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್ ಪರಿಶೀಲಿಸಿದರು. ಮಂಚದ ಮೇಲಿದ್ದ ಸಿದ್ದನಾಯಕ ಮೃತದೇಹದ ಮಹಜರು ನಡೆಸಿ, ಮರಣೋತ್ತರ ಪರೀಕ್ಷೆಗಾಗಿ ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ ಸ್ಥಳಾಂತರಿಸಿದರು. ಮರಣೋತ್ತರ ಪರೀಕ್ಷೆ ಬಳಿಕ ದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಈ ಸಂಬಂಧ ಮಂಡಿ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಿಸಿಕೊಂಡಿದ್ದು, ಅಗ್ನಿ ದುರಂತಕ್ಕೆ ಮತ್ತೇನಾದರೂ ಕಾರಣ ಇದೆಯೇ ಎಂಬ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

ಹೆಚ್ಚುವರಿ 450 ಸೀಟು ಲಭ್ಯ

ನೀಡುವಂತೆ 1,000 ಸೀಟುಗಳನ್ನು ಹೆಚ್ಚುವರಿಯಾಗಿ ನೀಡಬೇಕು ಎಂದು ಕೇಂದ್ರದ ಎನ್‌ಎಂಸಿ ಅಧ್ಯಕ್ಷ ಅಭಿಜಿತ್ ಚಂದ್ರಕಾಂತ್ ಸೇಠ್ ಅವರಿಗೆ ಮನವಿ ಮಾಡಿದ್ದರು. ರಾಜ್ಯ ಸರ್ಕಾರದ ಮನವಿಗೆ ಸ್ಪಂದಿಸಿದ ಎನ್‌ಎಂಸಿ ಹೆಚ್ಚುವರಿಯಾಗಿ 450 ಸೀಟುಗಳ ಪ್ರವೇಶಾವಕಾಶ ಕಲ್ಪಿಸಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಡಾ.ಶರಣಪ್ರಕಾಶ್ ಪಾಟೀಲ್, ನೀಟ್ ಫಲಿತಾಂಶದ ನಂತರ ಪ್ರಕಟಿಸಿದ ಮೊದಲ ಸುತ್ತಿನ ಸೀಟಿನ ಹಂಚಿಕೆಯಲ್ಲಿ ರಾಜ್ಯಕ್ಕೆ 9,263 ಸೀಟುಗಳು ಲಭ್ಯವಿದ್ದವು.

ರಾಜ್ಯದ 8 ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ತಲಾ 50 ಸೀಟುಗಳ ಹೆಚ್ಚಳಕ್ಕೆ ರಾಷ್ಟ್ರೀಯ ವೈದ್ಯಕೀಯ ಆಯೋಗ ಅನುಮತಿ ನೀಡಿರುವುದರಿಂದ ಪ್ರಸ್ತುತ ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ ಸೀಟುಗಳ ಸಂಖ್ಯೆ 9,663ಕ್ಕೆ ಏರಿಕೆ ಆಗಲಿದೆ ಎಂದರು.

ರಾಷ್ಟ್ರಾದ್ಯಂತ 8,000 ವೈದ್ಯಕೀಯ ಸೀಟುಗಳನ್ನು ಹೆಚ್ಚಿಸಲಾಗುವುದು ಎಂದು ಎನ್‌ಎಂಸಿ ಪ್ರಕಟಿಸಿತ್ತು. ಈ ಘೋಷಣೆ ಬೆನ್ನಲ್ಲೇ ನಮ್ಮ 15 ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿಯಾಗಿ 1,000 ಸೀಟುಗಳನ್ನು ಮಂಜೂರು ಮಾಡುವಂತೆ ಮಾಡಿದ ಪ್ರಸ್ತಾವನೆಗೆ ನಮಗೆ 450 ಸೀಟುಗಳು ಲಭ್ಯವಾಗಿವೆ. ರಾಮನಗರ ಮತ್ತು ಕನಕಪುರದಲ್ಲಿ ಹೊಸದಾಗಿ ಸ್ಥಾಪಿಸಲಾದ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ತಲಾ 250 ಸೀಟುಗಳ ಪ್ರಸ್ತಾವನೆ ಇನ್ನೂ ಪರಿಶೀಲನೆಯಲ್ಲಿದೆ ಎಂದರು.

ಕರ್ನಾಟಕ ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯಂತ ಮುಂದುವರೆದ ರಾಜ್ಯವಾಗಿದ್ದು, ಪ್ರತಿ ವರ್ಷ ಸಾವಿರಾರು ವೈದ್ಯಕೀಯ ಪದವಿ ಆಕಾಂಕ್ಷಿಗಳು ಪ್ರವೇಶ ಪಡೆಯಲು ಹರಸಾಹಸ ಪಡುತ್ತಿದ್ದಾರೆ. ನಮಗೆ ಹೆಚ್ಚುವರಿ ಸೀಟುಗಳ ಪ್ರವೇಶಕ್ಕೆ ಅವಕಾಶ ನೀಡಿದರೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇದರ ಲಾಭ ದೊರೆಯಲಿದೆ ಎಂಬುದಾಗಿ ಕೋರಿದ್ದೆವು ಎಂದರು.

ಗ್ರೇಟರ್ ಬೆಂಗಳೂರು 5 ಹೊಸ ನಗರಪಾಲಿಕೆಗಳಿಗೆ 300 ಕೋಟಿ ಅನುದಾನ, 500 ವಾರ್ಡ್‌ಗಳ ರಚನೆ

ಜಿಬಿಎಗೆ ಮುಖ್ಯ ಆಯುಕ್ತರಾಗಿ ಮಹೇಶ್ವರ್‌ರಾವ್

ಬೆಂಗಳೂರು: ಗ್ರೇಟರ್ ಬೆಂಗಳೂರಿನ 5 ಪಾಲಿಕೆಗಳ ನೂತನ ಕಚೇರಿಗೆ ಭೂಮಿ ಪೂಜೆಯನ್ನು ನ.1ರಂದು ನೆರವೇರಿಸಲಾಗುವುದು. ಎಲ್ಲಾ ಪಾಲಿಕೆಗಳ ಗಡಿ ಭಾಗಗಳಲ್ಲಿ ಗಡಿ ಗೋಪುರಗಳನ್ನು ನಿರ್ಮಾಣ ಮಾಡಲಾಗುವುದು. ಎಲ್ಲಾ ನಗರ ಪಾಲಿಕೆಗಳಿಗೆ 300 ಕೋಟಿ ರೂ. ಅನುದಾನ ಮೀಸಲಿಡಲಾಗುವುದು. ಬಿಬಿಎಂಪಿಯಲ್ಲಿದ್ದ 198 ವಾರ್ಡ್‌ಗಳನ್ನು ಇದೀಗ ಐದು ನಗರಪಾಲಿಕೆಗೆ ಹೊಂದಿಕೆಯಾಗುವಂತೆ 500 ವಾರ್ಡ್‌ಗಳಾಗಿ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಚೇರಿಯ ನಾಮಫಲಕ ಅನಾವರಣಗೊಳಿಸಿದ ನಂತರ ಬುಧವಾರ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರತಿ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆಗಳ ಸುಧಾರಣೆ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ 500 ಮಂದಿ ಎಂಜಿನಿಯರ್‌ಗಳಿಗೆ ಅನುಮೋದನೆ ನೀಡಲಾಗಿದೆ. ಈ ಹಿಂದೆ 198 ವಾರ್ಡ್‌ಗಳಿದ್ದವು. ಈಗ 500 ವಾರ್ಡ್‌ಗಳ ರಚನೆಯ ಅನುಮತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪಾಲಿಕೆಗಳ ಆಡಳಿತಾತ್ಮಕ ವೆಚ್ಚ, ಸಂಬಳ ಹಾಗೂ ನಿವೃತ್ತಿ ವೇತನಕ್ಕೆ ಎಂದು ಬಿಬಿಎಂಪಿಯಿಂದ ಸುಮಾರು 300 ಕೋಟಿ ಹಣ ಬಿಡುಗಡೆ ಮಾಡಲಾಗುವುದು ಎಂದರು.

ಪ್ರತಿ ನಗರಪಾಲಿಕೆಗಳಲ್ಲಿ ಇಬ್ಬರು ಐಎಎಸ್ ಅಧಿಕಾರಿಗಳು, ಒಬ್ಬರು ಕೆಎಎಸ್, ಇಬ್ಬರು ಮುಖ್ಯ ಎಂಜಿನಿಯರ್‌ಗಳು ಹಾಗೂ ಅಗತ್ಯ ಕಚೇರಿ ಸಿಬ್ಬಂದಿ ಕೆಲಸ ಮಾಡಲಿದ್ದಾರೆ ಎಂದರು. ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಸ್ಥಳೀಯ ಸಂಸ್ಥೆಗಳನ್ನು ಜಿಬಿಎ ವ್ಯಾಪ್ತಿಗೆ ಈಗಲೇ ಸೇರಿಸಿದರೆ ಪ್ರಸ್ತುತ ಪ್ರತಿನಿಧಿಗಳಾಗಿರುವವನ್ನೂ ಪಾಲಿಕೆ ಸದಸ್ಯರು ಎಂದು ಪರಿಗಣಿಸಬೇಕಾಗುತ್ತದೆ. ಮೊದಲು ಈಗ ರಚನೆಯಾಗಿರುವ ಪಾಲಿಕೆಗಳಿಗೆ ಚುನಾವಣೆ ನಡೆದ ನಂತರ ಇತರೇ ಪ್ರದೇಶಗಳ ವಿಲೀನದ ಬಗ್ಗೆ ಭವಿಷ್ಯ ದಲ್ಲಿ ಯೋಚಿಸಲಾಗವುದು' ಎಂದರು.

ನೂತನ ಆಯುಕ್ತರುಗಳು ಜನರ ನಡುವೆಯಿದ್ದು ಕೆಲಸ ಮಾಡಬೇಕು. ಜಿಬಿಎ ಆಯುಕ್ತರು ಫುಟ್‌ಪಾತ್, ನೀರು, ರಸ್ತೆ ಸೇರಿದಂತೆ ಇತರೇ ಕೆಲಸಗಳ ಬಗ್ಗೆ ಪರಿಶೀಲಿಸುತ್ತಿದ್ದಾರೆ. ದಿನಕ್ಕೆ 17– 18 ಗಂಟೆ ಕೆಲಸ ಮಾಡಬೇಕಾಗುತ್ತದೆ. ಆದ ಕಾರಣಕ್ಕೆ ಹಿರಿಯ ಅಧಿಕಾರಿಗಳ ಜೊತೆ ಯುವ ಅಧಿಕಾರಿಗಳನ್ನೂ ನಿಯೋಜನೆ ಮಾಡಲಾಗಿದೆ. ಮಹೇಶ್ವರ್‌ರಾವ್ ಜಿಬಿಎಗೆ ಮುಖ್ಯ ಆಯುಕ್ತರಾಗಿ ಹಾಗೂ ಆಡಳಿತಾಧಿಕಾರಿಯಾಗಿ ಚುನಾವಣೆ ನಡೆಯುವವರೆಗೂ ಕಾರ್ಯನಿರ್ವಹಿಸಲಿದ್ದಾರೆ. ಪ್ರಾಧಿಕಾರದ ಸಮಿತಿಗೆ 75 ಸದಸ್ಯರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಮೈಸೂರು ಮಿತ್ರ ಗುರುವಾರ 4 ಸೆಪ್ಟೆಂಬರ್ 2025

ಜಂಬೂಸವಾರಿ, 'ಅಂಬಾರಿ' ಮಾರ್ಗದಲ್ಲಿ
ಜೋತುಬಿದ್ದ, ಒಣಗಿದ ಕೊಂಬೆಗಳ ತೆರವು


ಜಂಬೂಸವಾರಿ ಮಾರ್ಗದಲ್ಲಿ ರಸ್ತೆಗೆ ಜೋತು ಬಿದ್ದಿರುವ ಹಾಗೂ ಒಣಗಿರುವ ಮರದ ಕೊಂಬೆಗಳ ತೆರವು ಕಾರ್ಯಾಚರಣೆ ಆರಂಭಿಸಲಾಗಿದೆ.

ಮೈಸೂರು,ಸೆ.3(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಆರಂಭಕ್ಕೆ ದಿನಗಣನೆ ಆರಂಭವಾಗಿದ್ದು, ಜಂಬೂಸವಾರಿ ಹಾಗೂ ಪ್ರವಾಸೋದ್ಯಮ ಇಲಾಖೆಯ 'ಅಂಬಾರಿ' ವಾಹನ ಸಾಗುವ ಮಾರ್ಗದಲ್ಲಿ ಬಾಗಿದ ಮರಗಳ ಕೊಂಬೆ ಹಾಗೂ ಒಣಮರಗಳ ತೆರವು ಕಾರ್ಯಾಚರಣೆ ಆರಂಭವಾಗಿದೆ.

ಜಂಬೂಸವಾರಿ ಮೆರವಣಿಗೆಯಲ್ಲಿ ಗಜಪಡೆ ನಾಯಕ ಅಭಿಮನ್ಯು ಚಿನ್ನದ ಅಂಬಾರಿ ಹೊತ್ತು ಸಾಗಲಿದ್ದು, ಮಾರ್ಗದಲ್ಲಿ ಅಡ್ಡಿಯಾಗಬಹುದಾದ ಮರಗಳ ಬಾಗಿದ ಕೊಂಬೆಗಳನ್ನು ತೆರವುಗೊಳಿಸುವ ಮೊದಲ ಹಂತದ ಕಾರ್ಯಾಚರಣೆಯನ್ನು ಮೈಸೂರು ಮಹಾನಗರ ಪಾಲಿಕೆ ಆರಂಭಿಸಿದೆ.

ಅರಮನೆಯ ಮುಂಭಾಗದ ಚಾಮರಾಜ ಒಡೆಯರ್ ವೃತ್ತದಿಂದ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ವೃತ್ತ, ಹಳೆ ಆರ್‌ಎಂಸಿ ವೃತ್ತ, ಬಂಬೂ ಬಜಾರ್, ಹೈವೆ ವೃತ್ತ, ನೆಲ್ಸನ್ ಮಂಡೇಲಾ ರಸ್ತೆ ಮೂಲಕ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಮೈಸೂರು ಮಹಾನಗರ ಪಾಲಿಕೆಯ ಎಇಇ ಮೋಹನ್ ನೇತೃತ್ವದಲ್ಲಿ ಹೈಡ್ರಾಲಿಕ್ ಕಟಿಂಗ್ ಯಂತ್ರದ ಮೂಲಕ ರಸ್ತೆಗೆ ಜೋತು ಬಿದ್ದ ಮರದ ಕೊಂಬೆಗಳನ್ನು ತೆರವು ಮಾಡುವ ಕಾರ್ಯಾಚರಣೆ ಆರಂಭಿಸಲಾಯಿತು.

ಇಂದಿನಿಂದ ದಸರಾ ಗಜಪಡೆಗೆ ಭಾರ ಹೊರುವ ತಾಲೀಮು ಆರಂಭಿಸಲಾಗಿದೆ. ಮರದ ಅಂಬಾರಿ ಹೊರಿಸಿ ತಾಲೀಮು ಆರಂಭಿಸುವ ವೇಳೆಗೆ ಜಂಬೂಸವಾರಿ ಮಾರ್ಗದಲ್ಲಿ ಜೋತು ಬಿದ್ದ ಮರಗಳ ಕೊಂಬೆ ತೆರವುಗೊಳಿಸಬೇಕಾಗಿರುವುದರಿಂದ ಮೊದಲ ಹಂತದ ತೆರವು ಕಾರ್ಯಾಚರಣೆ ಆರಂಭಿಸಲಾಗಿದೆ. ವಾಹನಗಳ ಸಂಚಾರದ ನಡುವೆಯೂ ಮರಗಳ ಕೊಂಬೆ ಹಾಗೂ ಒಣ ಮರಗಳ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ.

ಸಯ್ಯಾಜಿರಾವ್ ರಸ್ತೆ ಹಾಗೂ ನೆಲ್ಸನ್ ಮಂಡೇಲ ರಸ್ತೆಯಲ್ಲಿ ಇನ್ನು ಎರಡು ದಿನಗಳವರೆಗೆ ಜೋತು ಬಿದ್ದ ಕೊಂಬೆಗಳನ್ನು ತೆರವು ಮಾಡುವ ಕಾರ್ಯಾಚರಣೆ ನಡೆಸಲಾಗುತ್ತದೆ. ಮರದ ಅಂಬಾರಿ ಕಟ್ಟಿ ತಾಲೀಮು ಆರಂಭಿಸಿದ ಬಳಿಕ ಎರಡನೇ ಹಂತದ ತೆರವು ಕಾಯಾಚರಣೆ ನಡೆಸಲಾಗುತ್ತಿದೆ. ಅಂತಿಮವಾಗಿ ನವರಾತ್ರಿ (ಸೆ.22) ಆರಂಭಕ್ಕೂ ಎರಡು ದಿನ ಮೊದಲು ಪೊಲೀಸ್, ಅರಣ್ಯ, ಚೆಸ್ಕಾಂ ಇಲಾಖೆ ಪರಿಶೀಲನೆ ನಂತರ ಅಂತಿಮ ಹಂತದ ಕಾರ್ಯಾಚರಣೆ ನಡೆಸಲಾಗುತ್ತದೆ. ಈ ವೇಳೆ ದೀಪಾಲಂಕಾರಕ್ಕಾಗಿ ಅಳವಡಿಸಿರುವ ವಿದ್ಯುತ್ ಬಲ್ಬ್‌ಗಳ ಸರಮಾಲೆ ಮರದ ಅಂಬಾರಿಗೆ ತಾಗುವುದನ್ನು ಪರಿಶೀಲಿಸಿ, ಎಲ್ಲಾದರೂ ದೀಪಾಲಂಕಾರಕ್ಕಾಗಿ ಬಳಸಿರುವ ಬಲ್ಬ್‌ಗಳು ಜೋತು ಬಿದ್ದಿದ್ದರೆ, ಅವುಗಳನ್ನು ಮೇಲೆತ್ತಿ ಕಟ್ಟಲಾಗುತ್ತದೆ.

ಅಂಬಾರಿ ಮಾರ್ಗದಲ್ಲೂ ತೆರವು: ದಸರಾ ವೇಳೆ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಲಿದ್ದು, ದಸರಾ ದೀಪಾಲಂಕಾರ ವೀಕ್ಷಿಸಲು ಪ್ರವಾಸೋದ್ಯಮ ಇಲಾಖೆಯ 'ಅಂಬಾರಿ' ವಾಹನದಲ್ಲಿ ಪ್ರಯಾಣಿಸಲು ಬರುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಅಂಬಾರಿ ಬಸ್‌ಗಳ ಸಂಖ್ಯೆಯೂ ಹೆಚ್ಚಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂಬಾರಿ ಬಸ್ ಪ್ರಯಾಣಿಸುವ ಮಾರ್ಗವಾದ ಅರಮನೆ ಸುತ್ತಮುತ್ತಲಿನ ರಸ್ತೆ, ಜೆಎಲ್‌ಬಿ ರಸ್ತೆ, ಕೃಷ್ಣರಾಜ ಬುಲೆವಾರ್ಡ್ ರಸ್ತೆ, ರಾಮಸ್ವಾಮಿ ವೃತ್ತದಿಂದ ಗನ್‌ಹೌಸ್ ವೃತ್ತದವರೆಗೆ ಚಾಮರಾಜ ಜೋಡಿ ರಸ್ತೆಯಲ್ಲಿ ತೂಗುತ್ತಿರುವ ಮರದ ಕೊಂಬೆಗಳನ್ನು ತೆರವು ಮಾಡುವ ಕಾರ್ಯ ಆರಂಭಿಸಲಾಗಿದೆ.

ಈಗ ಧರ್ಮಸ್ಥಳ ಯಾತ್ರೆ ಕಾಂಗ್ರೆಸ್ ಸರದಿ
ಶಾಸಕ ಕೆ.ಹರೀಶ್‌ಗೌಡ ನೇತೃತ್ವದಲ್ಲಿ ಸಾವಿರಾರು ಜನ ಧರ್ಮಸ್ಥಳ ಯಾತ್ರೆ

● ಹಿರಿಯ ಶಾಸಕ ತನ್ವೀರ್ ಸೇಠ್ ಚಾಲನೆ ● 20 ಬಸ್, 50ಕ್ಕೂ ಅಧಿಕ ಕಾರು, ಇನ್ನಿತರೆ ವಾಹನಗಳಲ್ಲಿ ಪಯಣ


ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ನೇತೃತ್ವದಲ್ಲಿ ಬುಧವಾರ 'ಧರ್ಮಸ್ಥಳ ಯಾತ್ರೆ' ಕೈಗೊಳ್ಳಲಾಯಿತು

ಮೈಸೂರು, ಸೆ.3(ಎಂಕೆ)– ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆಯುತ್ತಿರುವ ಅಪಪ್ರಚಾರ, ಷಡ್ಯಂತರ ಹಾಗೂ ಸುಳ್ಳು ಆರೋಪಗಳ ವಿರುದ್ಧ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರ ನೇತೃತ್ವದಲ್ಲಿ ಬುಧವಾರ 'ಧರ್ಮಸ್ಥಳ ಯಾತ್ರೆ' ಕೈಗೊಳ್ಳಲಾಯಿತು.

ನಗರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಜಮಾವಣೆಗೊಂಡ ಸಾವಿರಾರು ಭಕ್ತಾದಿಗಳು, ಸುಮಾರು 20 ಬಸ್‌ಗಳು, 50ಕ್ಕೂ ಹೆಚ್ಚು ಕಾರ್‌ಗಳಲ್ಲಿ 'ಧರ್ಮಸ್ಥಳ ಯಾತ್ರೆ' ಕೈಗೊಂಡರು. ಯಾತ್ರೆಗೆ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ರಾಜ್ಯದ ಜನತೆಗೆ ಸತ್ಯ ಗೊತ್ತಾಗಬೇಕು ಎಂಬ ಒಂದೇ ಒಂದು ಆಶಯ ನಮ್ಮ ಮುಂದಿದ್ದು, ಮೈಸೂರಿಂದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಭಕ್ತಾದಿಗಳು ಧರ್ಮ ರಕ್ಷಣಾ ಯಾತ್ರೆಯನ್ನು ಹಮ್ಮಿಕೊಂಡಿದ್ದಾರೆ. ಅವರಿಗೆಲ್ಲಾ ಶುಭ ಕೋರುತ್ತೇನೆ. ಎಲ್ಲೋ ಒಂದುಕಡೆ ಅವರ ಹೆಸರು ಹೊರಗಡೆ ಬರುತ್ತದೆ ಎಂದೇ, ಡ್ಯಾಮೇಜ್ ಕಂಟ್ರೋಲ್‌ಗೋಸ್ಕರ ಯಾತ್ರೆ ಮಾಡಿರುವಂತಿದೆ ಎಂದು ಬಿಜೆಪಿ–ಜೆಡಿಎಸ್ ನಾಯಕರ ಕಾಲೆಳೆದರು.

ಭಕ್ತಿ ಯಾವ ರೂಪದಲ್ಲಿದೆ, ಸ್ವರೂಪದಲ್ಲಿದೆ ಎಂಬುದನ್ನು ತೋರಿಸುವುದಲ್ಲ. ಆ ರೀತಿ ತೋರಿಸುವುದೇ ಭಕ್ತಿಯಲ್ಲ. ಸಾವಿರಾರು ಕಿಲೋಮೀಟರ್ ದೂರವಿದ್ದರೂ ಧರ್ಮಸ್ಥಳ ಮಂಜುನಾಥನ ದರ್ಶನ ಮತ್ತು ಆರಾಧನೆ ಮಾಡುವ ಕೋಟ್ಯಾಂತರ ಭಕ್ತರಿದ್ದಾರೆ. ಎಲ್ಲರ ಭಾವನೆಗೆ ಧಕ್ಕೆ ತರುವಂತಹ ಕೆಲಸ ನಡೆದಿದೆ. ಇವತ್ತು ಸತ್ಯ ಹೊರಗಡೆ ಬರಬೇಕೆಂಬ ಒಂದೇ ಒಂದು ಕಾರಣಕ್ಕಾಗಿ ಇಷ್ಟೆಲ್ಲಾ ಶೋಧನೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

> **ಹಿಂದೂಗಳನ್ನು ಗಿರವಿ ಇಟ್ಟುಕೊಂಡಿದ್ದಾರಾ....?**
>
> 
>
> ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಹಿಂದೂ ವಿರೋಧಿ. ಅವರ ಷಡ್ಯಂತರದಿಂದಲೇ ಧರ್ಮಸ್ಥಳದಲ್ಲಿ ಈ ರೀತಿಯ ಬೆಳವಣಿಗೆಗಳು ನಡೆಯುತ್ತಿವೆ ಎಂಬ ಬಿಜೆಪಿ–ಜೆಡಿಎಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ಶಾಸಕ ಕೆ.ಹರೀಶ್‌ಗೌಡ, ಅವರು(ಬಿಜೆಪಿ–ಜೆಡಿಎಸ್) ಹಿಂದೂಗಳನ್ನು ಗಿರವಿ ಇಟ್ಟುಕೊಂಡಿದ್ದಾರಾ...? ನಮ್ಮದು ಧರ್ಮಾತೀತ–ಜಾತ್ಯಾತೀತ ದೇಶ. ಹಿಂದೂ–ಮುಸ್ಲಿಂ, ಸಿಖ್, ಬೌದ್ಧ ಸೇರಿದಂತೆ ಹಲವು ಧರ್ಮಗಳಿದ್ದು, ಸಹಬಾಳ್ವೆಯಿಂದ ಕೂಡಿರುವ ದೇಶ ನಮ್ಮದಾಗಿದೆ. ಅಲ್ಲದೆ ನಮ್ಮೊಂದಿಗೆ ಧರ್ಮಸ್ಥಳ ಯಾತ್ರೆಗೆ ಬರುತ್ತಿರುವವರೆಲ್ಲರೂ ಹಿಂದೂಗಳಾಗಿದ್ದು, ಸತತ 6 ಬಾರಿ ಶಾಸಕರಾಗಿ ಆಯ್ಕೆಯಾದ ತನ್ವೀರ್ ಸೇಠ್ ಅವರು ಈ ಧರ್ಮಸ್ಥಳ ಯಾತ್ರೆಗೆ ಚಾಲನೆ ನೀಡಿದ್ದಾರೆ. ಒಟ್ಟಾರೆ ಶ್ರೀ ಕ್ಷೇತ್ರ ಧರ್ಮಸ್ಥಳ ಕಳಂಕ ಮುಕ್ತವಾಗಬೇಕು ಎಂಬುದೇ ನಮ್ಮೆಲ್ಲರ ಆಶಯವಾಗಿದೆ.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಧರ್ಮಸ್ಥಳಕ್ಕೆ ಧರ್ಮ ವಿಜಯಯಾತ್ರೆ ಹೊರಟಿದ್ದೇವೆ. ಪ್ರಸಿದ್ಧ ಈ ಶ್ರದ್ಧಾ ಕೇಂದ್ರದ ಬಗ್ಗೆ ಅಪಪ್ರಚಾರ ಹಾಗೂ ಷಡ್ಯಂತರ ಮಾಡಿರುವವರು ಯಾರು ಎಂಬುದನ್ನು ಪತ್ತೆಹಚ್ಚುವ ಸಲುವಾಗಿಯೇ ಎಸ್‌ಐಟಿ ತನಿಖೆ ನಡೆಸುತ್ತಿದೆ. ಧರ್ಮಕೇಂದ್ರಗಳ ಮೇಲೆ ಯಾವುದೇ ಅಪಪ್ರಚಾರ ಮತ್ತು ಕಳಂಕ ಬರಬಾರದೆಂದು ಎಸ್‌ಐಟಿ ತನಿಖೆ ತಂಡ ರಚನೆ ಮಾಡಿ ಕಳಂಕರಹಿತ ಶ್ರದ್ಧಾಕೇಂದ್ರವನ್ನಾಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ ಎಂದರು.

ಧರ್ಮಸ್ಥಳದಲ್ಲಿ ಯಾವುದೇ ಅನಾಚಾರಗಳು ನಡೆದಿಲ್ಲ ಎಂಬುದನ್ನು ಇಡೀ ರಾಜ್ಯ ಮತ್ತು ದೇಶಕ್ಕೆ ತೋರಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಿದೆ. ಧರ್ಮಸ್ಥಳ ವಿಜಯಯಾತ್ರೆ ಮೂಲಕ ಧರ್ಮಸ್ಥಳಕ್ಕೆ ಭೇಟಿ ನೀಡಿ ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದು ಧರ್ಮಾಧಿಕಾರಿಗಳಾದ ಡಾ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಲು ಉದ್ದೇಶಿಸಿರುವುದಾಗಿ ತಿಳಿಸಿದರು.

ಜಯಘೋಷ: ಧರ್ಮಸ್ಥಳ ಯಾತ್ರೆಯನ್ನು ಆರಂಭಿಸುವ ಮುನ್ನ ಧರ್ಮಸ್ಥಳ ಮಂಜುನಾಥ ಸ್ವಾಮಿಗೆ ಜಯಘೋಷ ಮೊಳಗಿಸಲಾಯಿತು. ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಸೇರಿದಂತೆ ಸಾವಿರಾರು ಮಂದಿ ನೆರೆದಿದ್ದರು.

ಅಮೆರಿಕಾ ದಬ್ಬಾಳಿಕೆ ಖಂಡಿಸಿ ಸಿಐಟಿಯು ಪ್ರತಿಭಟನೆ



ಅಮೇರಿಕಾ ಸುಂಕ ಏರಿಕೆ ಮಾಡಿ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಸಾಮ್ರಾಜ್ಯಶಾಹಿ ಪ್ರಾಬಲ್ಯ ಸಾಧಿಸಲು ಯತ್ನಿಸುತ್ತಿದೆ ಎಂದು ಆರೋಪಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ವತಿಯಿಂದ ಹಳೆ ಡಿಸಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಅಮೆರಿಕಾ ಸಾಮ್ರಾಜ್ಯಶಾಹಿ ನೀತಿ ವಿರುದ್ಧ ಆಕ್ರೋಶ

ಮೈಸೂರು, ಸೆ.3(ಜಿಎ)–ಜಾಗತಿಕವಾಗಿ ಅಮೇರಿಕಾ ನಾಯಕತ್ವದಲ್ಲಿ ಇಸ್ರೇಲ್ ಪ್ಯಾಲೆಸ್ತೇನಿಯರ ಮೇಲೆ ದಾಳಿ ನಡೆಸುತ್ತಿದೆ. ಸುಂಕ ಏರಿಕೆ ಮಾಡಿ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಸಾಮ್ರಾಜ್ಯಶಾಹಿ ಪ್ರಾಬಲ್ಯ ಸಾಧಿಸಲು ಯತ್ನಿಸುತ್ತಿದೆ ಎಂದು ಆರೋಪಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಒಂದೆಡೆ ಪ್ಯಾಲೆಸ್ತೇನಿಯನ್ನರ ಮೇಲೆ ಇಸ್ರೇಲ್ ದಾಳಿ ಬೆಂಬಲಿಸುತ್ತಾ ಅಟ್ಟಹಾಸ ಮೆರೆಯುತ್ತಿರುವ ಅಮೆರಿಕಾ, ರಷ್ಯಾ–ಉಕ್ರೇನ್ ಯುದ್ಧ ನಿಲ್ಲಿಸಬೇಕು ಎಂಬ ಉದ್ದೇಶದಿಂದ ತನ್ನ ಸಾಮ್ರಾಜ್ಯಶಾಹಿ ನೀತಿಗಳನ್ನು ಬಲಗೊಳಿಸಿಕೊಳ್ಳಲು ಬೇರೆ ದೇಶಗಳ ಮೇಲೆ ಸುಂಕ ಹೇರುತ್ತಿದೆ. ಭಾರತದಿಂದ ರಫ್ತಾಗುವ ಪದಾರ್ಥಗಳ ಮೇಲೆ ಶೇ.50 ಸುಂಕ ವಿಧಿಸಿ ಅಂತಾರಾಷ್ಟ್ರೀಯ ಒಪ್ಪಂದಗಳನ್ನು ಧಿಕ್ಕರಿಸಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಟ್ರಂಪ್ ಸುಂಕ ಏರಿಕೆ ಪರಿಣಾಮವಾಗಿ ಭಾರತ 5 ಲಕ್ಷ ಬಿಲಿಯನ್ ಡಾಲರ್‌ಗಳಷ್ಟು ವ್ಯಾಪಾರ ಕಳೆದುಕೊಳ್ಳುತ್ತಿದೆ. ಅನೇಕ ವಲಯಗಳಲ್ಲಿ ಮಾರುಕಟ್ಟೆ ಕೊರತೆಯಿಂದಾಗಿ ನಿರುದ್ಯೋಗ, ಕಡಿಮೆ ಕೂಲಿಯಿಂದ ಬಳಲುತ್ತಿರುವ ವರ್ಗ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದೆ. ಅಮೆರಿಕಾದ ಈ ಸುಂಕ ನೀತಿಯಿಂದ ವಿಶ್ವದ ವ್ಯಾಪಾರ ಕುಗ್ಗಿ, ಆರ್ಥಿಕ ಬಿಕ್ಕಟ್ಟು ಉಲ್ಬಣವಾಗಲಿದೆ. ದೇಶದ ರೈತರ ಹಿತಾಸಕ್ತಿ ಬಲಿ ಕೊಡುವುದಲ್ಲದೆ, ಔಷಧ, ರತ್ನಾಭರಣ, ಬಟ್ಟೆ ಉದ್ಯಮಕ್ಕೆ ಸಂಕಷ್ಟವಾಗಲಿದೆ. ಇದರಿಂದ ಹೊರಬರಲು ಸ್ವದೇಶಿ ಮಂತ್ರ ಸೂಕ್ತ ಕ್ರಮವಲ್ಲ. ಬದಲಿಗೆ ಸಾಮ್ರಾಜ್ಯಶಾಹಿಗಳ ಬಲವಂತಕ್ಕೆ ಶರಣಾಗಿ ಇಂದಿನ ಸ್ಥಿತಿಗೆ ಕಾರಣರಾಗಿರುವ ಉದಾರವಾದಿಗಳ ನೀತಿಯನ್ನು ಮೆಟ್ಟಿನಿಲ್ಲುವ ಆರ್ಥಿಕ ನೀತಿ ಜಾರಿ ಮಾಡಬೇಕು. ಕೇಂದ್ರ ಸರ್ಕಾರ ಕೇವಲ ಬಂಡವಾಳಶಾಹಿಗಳನ್ನು ನೋಡದೆ 140 ಕೋಟಿ ಭಾರತೀಯರ ಹಿತ ಕಾಯಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯದರ್ಶಿ ಬಾಲಾಜಿರಾವ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಆಹಾರ ಸುರಕ್ಷತಾ ತರಬೇತಿ; ಪ್ರಮಾಣ ಪತ್ರ ವಿತರಣೆ


'ಆಹಾರ ಸುರಕ್ಷತಾ ತರಬೇತಿ ಮತ್ತು ಪ್ರಮಾಣ ಪತ್ರ ವಿತರಣಾ' ಕಾರ್ಯಕ್ರಮ ಬುಧವಾರ ನಡೆಯಿತು.

ಮೈಸೂರು, ಸೆ.3(ಎಂಕೆ)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಮೈಸೂರು ಹೋಟೆಲ್ ಮಾಲೀಕರ ಸಂಘದ ಕಚೇರಿ ಸಭಾಂಗಣದಲ್ಲಿ ಆಹಾರ ಸುರಕ್ಷತೆ ಗುಣಮಟ್ಟ ಪ್ರಾಧಿಕಾರ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ, ಆಹಾರ ಸುರಕ್ಷತೆ ತರಬೇತಿ ಮತ್ತು ಪ್ರಮಾಣ ಪತ್ರ ಕೇಂದ್ರದ ವತಿಯಿಂದ 'ಆಹಾರ ಸುರಕ್ಷತಾ ತರಬೇತಿ ಮತ್ತು ಪ್ರಮಾಣ ಪತ್ರ ವಿತರಣಾ' ಕಾರ್ಯಕ್ರಮ ನಡೆಯಿತು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಕಾರ್ಯಕ್ರಮ ಉದ್ಘಾಟಿಸಿ, ಹೊಸ ಹೋಟೆಲ್ ಉದ್ಯಮಿಗಳಿಗೆ ಆಹಾರ ಸುರಕ್ಷತಾ ಪ್ರಮಾಣ ಪತ್ರ ನೀಡಿ ಅಭಿನಂದಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಅಂಕಿತಾಧಿಕಾರಿ ಡಾ.ಎಸ್.ಎಲ್.ರವೀಂದ್ರ ಮಾತನಾಡಿ, ಸಾಂಸ್ಕೃತಿಕ ನಗರಿ ಮೈಸೂರು ಆತಿಥ್ಯಕ್ಕೆ ಹೆಸರುವಾಸಿಯಾಗಿದ್ದು, ಹೋಟೆಲ್ ಉದ್ಯಮಿಗಳು ಆಹಾರ ಸುರಕ್ಷತಾ ಪರವಾನಗಿ ಪಡೆದುಕೊಳ್ಳುವ ಮೂಲಕ ಆತ್ಮವಿಶ್ವಾಸದೊಂದಿಗೆ ಪ್ರವಾಸಿಗರಿಗೆ ಆತಿಥ್ಯ ನೀಡುವಂತೆ ತಿಳಿಸಿದರು. ರಾಜ್ಯ ಸರ್ಕಾರ ಈಗಾಗಲೇ ಗೋಬಿ ಮಂಚೂರಿ ಸೇರಿದಂತೆ ಹಲವು ಆಹಾರ ಪದಾರ್ಥಗಳಿಗೆ ಕಲರ್ ಮಿಕ್ಸ್ ಮಾಡುವುದನ್ನು ನಿಷೇಧಿಸಿದ್ದು, ಆಹಾರ ಸುರಕ್ಷತೆ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆಯೂ ಸೂಚಿಸಿದೆ. ಹಾಗಾಗಿ ಹೋಟೆಲ್ ಉದ್ಯಮ ನಡೆಸುತ್ತಿರುವ ಪ್ರತಿಯೊಬ್ಬರು ಕಡ್ಡಾಯವಾಗಿ ಲೈಸೆನ್ಸ್ ಪಡೆದು, ಗುಣಮಟ್ಟ ಕಾಯ್ದುಗೊಳ್ಳುವಂತೆ ಸಲಹೆ ನೀಡಿದರು.

ಹೋಟೆಲ್ ಮಾಲೀಕರ ಸಂಘದ ಧರ್ಮದತ್ತಿ ಅಧ್ಯಕ್ಷ ರವಿಶಾಸ್ತ್ರಿ, ಆಹಾರ ಸುರಕ್ಷತಾ ಅಧಿಕಾರಿಗಳಾದ ಡಾ.ಪುಟ್ಟತಾಯಮ್ಮ, ಸಿ.ರಾಜೇಶ್, ಎಸ್.ಆರ್.ಗಿರೀಶ್, ತರಬೇತುದಾರ ಯಶ್ವಂತ್ ಅರುಣ್ ಮತ್ತಿತರರಿದ್ದರು.

ಸೆ.7, ಗ್ರಹಣ ಶಾಂತಿ

ಮೈಸೂರು,ಸೆ.3–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸೆ.7ರ ಭಾನುವಾರ ಹುಣ್ಣಿಮೆಯಂದು ಸಂಭವಿಸುವ ರಾಹುಗ್ರಸ್ತ ಚಂದ್ರಗ್ರಹಣ ಶಾಂತಿಯನ್ನು ಏರ್ಪಡಿಸಲಾಗಿದೆ. ಕುಂಭ, ವೃಶ್ಚಿಕ, ಕರ್ಕಾಟಕ ಹಾಗೂ ಮೀನ ರಾಶಿಯವರಿಗೆ ಪ್ರತ್ಯೇಕ ಸಂಕಲ್ಪದೊಂದಿಗೆ ಗ್ರಹಣ ಶಾಂತಿ ಮಾಡಲಾಗುವುದು. ಭಾನುವಾರ ಮಧ್ಯಾಹ್ನ 4.30ರಿಂದ 9 ಗಂಟೆವರೆಗೆ ಮತ್ತು ಸೆ.8ರಂದು ಸೋಮವಾರ ಬೆಳಿಗ್ಗೆ 7.30ರಿಂದ 12 ಗಂಟೆವರೆಗೆ ಸಂಕಲ್ಪ ಮಾಡಲಾಗುವುದು.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಸ್.ಜೆ. ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ಎಂ.ಎಸ್.ದಿವ್ಯಾಶ್ರೀ ಅವರು ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮ್ಯಾರಥಾನ್ ಮೂಲಕ ಮಾರಕ ಏಡ್ಸ್ ಬಗ್ಗೆ ಯುವಜನರಲ್ಲಿ ಜಾಗೃತಿ


ಮೈಸೂರಿನ ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಆಯೋಜಿಸಿದ್ದ ಮ್ಯಾರಥಾನ್‌ಗೆ ಆರ್‌ಸಿಹೆಚ್‌ಓ ಡಾ.ಸಿರಾಜ್ ಅಹಮದ್ ಚಾಲನೆ ನೀಡಿದರು.

ಮೈಸೂರು,ಸೆ.3(ಎಂಟಿವೈ)– ಮಾರಕ ರೋಗ ಏಡ್ಸ್ ಹರಡುವಿಕೆ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಮೈಸೂರಲ್ಲಿ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ನೂರಾರು ಮಂದಿ ಪಾಲ್ಗೊಂಡು ಗಮನ ಸೆಳೆದರು.

ಮೈಸೂರಿನ ವಿಜಯನಗರದಲ್ಲಿರುವ ಸರ್ಕಾರಿ ಬಾಲಕಿಯರ ಪ್ರಥಮ ದರ್ಜೆ ಕಾಲೇಜು ಆವರಣದಿಂದ ಆರಂಭವಾದ ಮ್ಯಾರಥಾನ್‌ಗೆ ಆರ್‌ಸಿಹೆಚ್‌ಓ ಡಾ.ಸಿರಾಜ್ ಅಹಮದ್ ಚಾಲನೆ ನೀಡಿದರು. ಏಡ್ಸ್ ಕುರಿತು ಅರಿವಿನ ಮಾಸಾಚರಣೆ–2025 ಕಾರ್ಯಕ್ರಮದ ಪ್ರಯುಕ್ತ ಪುರುಷರು ಮತ್ತು ಮಹಿಳಾ ವಿಭಾಗಕ್ಕೆ ಪ್ರತ್ಯೇಕವಾಗಿ ಆಯೋಜಿಸಿದ್ದ ಏಡ್ಸ್ ತಡೆಗಟ್ಟುವಿಕೆಗಾಗಿ 5 ಕಿ.ಮೀ ದೂರದ ಜಾಗೃತಿ ಮ್ಯಾರಥಾನ್‌ನಲ್ಲಿ ವಿವಿಧ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡರು.

ವಿಜಯನಗರದ ಸರ್ಕಾರಿ ಬಾಲಕಿಯರ ಪ್ರಥಮ ದರ್ಜೆ ಕಾಲೇಜು ಆವರಣದಿಂದ ಹೊರಟ ಮ್ಯಾರಥಾನ್ ರಿಂಗ್ ರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಯಲ್ಲಿ ಸಾಗಿ ಮತ್ತೆ ಕಾಲೇಜು ಆವರಣ ತಲುಪಿತು.

ಇದಕ್ಕೂ ಮುನ್ನ ಮ್ಯಾರಥಾನ್‌ಗೆ ಆರ್‌ಸಿಹೆಚ್‌ಓ ಡಾ.ಸಿರಾಜ್ ಅಹಮದ್ ಚಾಲನೆ ನೀಡಿ ಮಾತನಾಡಿ, ಯುವ ಜನರನ್ನು ಗುರಿಯಾಗಿಸಿ, ಏಡ್ಸ್ ತಡೆಗಟ್ಟುವಿಕೆ ಕುರಿತು ಅರಿವು ಮೂಡಿಸಲಾಗುತ್ತಿದೆ. ಯುವಕರೇ ದೇಶದ ಮುಂದಿನ ಸಂಪನ್ಮೂಲವಾಗಿದ್ದು ಈ ಹಿನ್ನೆಲೆಯಲ್ಲಿ ಯುವಜನರು ಆರೋಗ್ಯವಂತರಾಗಬೇಕು. ಏಡ್ಸ್ ಸೋಂಕು ಹರಡುವಿಕೆ, ಸೋಂಕು ತಡೆಗೆ ಕೈಗೊಳ್ಳಬೇಕಾದ ಕ್ರಮದ ಕುರಿತು ಅವರಿಗೆ ಅರಿವು ಮೂಡಿಸಬೇಕಾಗಿದೆ. ತಪ್ಪು ಮಾಹಿತಿಯಿಂದ ಸೋಂಕು ಹರಡುವಿಕೆ ಸಾಧ್ಯತೆ ಇದೆ. ಸಾಮಾಜಿಕ ಜಾಲತಾಣದಲ್ಲಿ ಬರುವ ಮಾಹಿತಿ ಎಲ್ಲವೂ ಸರಿಯಾಗಿರುವುದಿಲ್ಲ. ಇದರಿಂದ ಜಾಗೃತಿ ಮೂಡಿಸಲು ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಮ್ಯಾರಥಾನ್ ಆಯೋಜಿಸಿದೆ ಎಂದರು.

ಔಷಧಿಯಿಂದ ಏಡ್ಸ್ ನಿಯಂತ್ರಣ ಸಾಧ್ಯ; ಸಂಪೂರ್ಣ ನಿವಾರಣೆ ಸಾಧ್ಯವಿಲ್ಲ

ಏಡ್ಸ್ ಬಂದರೆ ಅದರಿಂದ ಗುಣಮುಖರಾಗಿಸಲು ಯಾವುದೇ ಔಷಧಿಯಿಲ್ಲ. ಇದರಿಂದ ಏಡ್ಸ್ ಬರದಂತೆ ತಡೆಗಟ್ಟುವುದೇ ನಮ್ಮ ಮುಂದೆ ಇರುವ ಮಾರ್ಗ. ಇದನ್ನು ಯುವ ಜನತೆ ಅರ್ಥಮಾಡಿಕೊಳ್ಳಬೇಕು. ರೋಗದ ಲಕ್ಷಣಗಳು ಕಂಡುಬಂದರೆ ನಿರ್ಲಕ್ಷಿಸದೆ ತಪಾಸಣೆಗೊಳಪಡಬೇಕು. ಸೋಂಕು ದೃಢಪಟ್ಟರೆ ಸರ್ಕಾರದ ವತಿಯಿಂದ ಉಚಿತವಾಗಿ ಔಷಧಿ ನೀಡಲಾಗುತ್ತದೆ. ಈ ಔಷಧಿ ಜೀವನ ಪರ್ಯಂತ ತೆಗೆದುಕೊಳ್ಳಬೇಕಾಗಿದೆ. ಈ ಔಷಧಿಯಿಂದಲೂ ಏಡ್ಸ್ ಗುಣಪಡಿಸಲು ಸಾಧ್ಯವಿಲ್ಲ. ಬದಲಾಗಿ ಕ್ವಾಲಿಟಿ ಆಫ್ ಲೈಫ್ ಸುಧಾರಿಸುತ್ತದೆ ಅಷ್ಟೆ ಎಂದು ತಿಳಿಸಿದರಲ್ಲದೆ, ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳು, ಯುವಜನರು ರಕ್ತದಾನ ಶಿಬಿರದಲ್ಲಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು. ಈ ವೇಳೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ, ಉಪನ್ಯಾಸಕರು, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಸಿಬ್ಬಂದಿ ಉಪಸ್ಥಿತರಿದ್ದರು.

ವಿಜೇತರು

ಪುರುಷರ ವಿಭಾಗದಲ್ಲಿ ಆರ್.ಪುರುಷೋತ್ತಮ್ ಪ್ರಥಮ(5 ಸಾವಿರ ರೂ.), ಪ್ರಸನ್ನಕುಮಾರ್ ದ್ವಿತೀಯ (3500 ರೂ.), ಎಸ್.ರಮೇಶ್ ತೃತೀಯ (2500 ರೂ.) ಬಹುಮಾನ ಪಡೆದರು. ಮಹಿಳಾ ವಿಭಾಗದಲ್ಲಿ ಅಶ್ವಿನಿ ಪೊಲೀಸ್ ಪ್ರಥಮ(5 ಸಾವಿರ ರೂ.), ಹೆಚ್.ಅರ್ಪಿತ ದ್ವಿತೀಯ(3500 ರೂ.) ಹಾಗೂ ಎಸ್.ಮೋನಿಕಾ ತೃತೀಯ (2500 ರೂ.) ಬಹುಮಾನ ಪಡೆದರು.

ದೇಶ – ವಿದೇಶ

ರಾಜಕೀಯ ರ್‍ಯಾಲಿಯಲ್ಲಿ ಆತ್ಮಹತ್ಯಾ ಬಾಂಬ್ ಸ್ಫೋಟ: 11 ಮಂದಿ ಸಾವು



ಕ್ವೆಟ್ಟಾ: ಪಾಕಿಸ್ತಾನದ ಅತೀದೊಡ್ಡ ಪ್ರಾಂತ್ಯ ಬಲೂಚಿಸ್ತಾನದ ರಾಜಧಾನಿ ಕ್ವೆಟ್ಟಾದಲ್ಲಿ ರಾಜಕೀಯ ರ್‍ಯಾಲಿಯೊಂದರ ಸಂದರ್ಭದಲ್ಲಿ ಆತ್ಮಹತ್ಯಾ ಬಾಂಬ್ ದಾಳಿ ನಡೆದು ಕನಿಷ್ಠ 11 ಮಂದಿ ಮೃತಪಟ್ಟಿದ್ದಾರೆ. ಘಟನೆಯಲ್ಲಿ ಇತರ 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬಲೂಚಿಸ್ತಾನ ನ್ಯಾಷನಲ್ ಪಾರ್ಟಿ (ಬಿಎನ್‌ಪಿ)ಯ ಸಮಾವೇಶಕ್ಕಾಗಿ ನೂರಾರು ಬೆಂಬಲಿಗರು ಸೇರಿದ್ದ ಕ್ರೀಡಾಂಗಣದ ಪಾರ್ಕಿಂಗ್ ಜಾಗದಲ್ಲಿ ಈ ದಾಳಿ ನಡೆದಿದೆ. ಹೆಸರು ಹೇಳಲಿಚ್ಛಿಸದ ಇಬ್ಬರು ಪ್ರಾಂತೀಯ ಅಧಿಕಾರಿಗಳು ಸಾವಿನ ಸಂಖ್ಯೆಯನ್ನು ದೃಢಪಡಿಸಿದ್ದಾರೆ. ತುರ್ತು ಸೇವೆಗಳು ಘಟನಾ ಸ್ಥಳಕ್ಕೆ ಧಾವಿಸಿದ್ದು, ಅಧಿಕಾರಿಗಳು ದಾಳಿ ಬಗ್ಗೆ ತನಿಖೆ ಆರಂಭಿಸಿದ್ದಾರೆ. ಬಿಎನ್‌ಪಿ ಸಂಸ್ಥಾಪಕ ಅತ್ತಾವುಲ್ಲಾ ಮೆಂಗಲ್ ಅವರ ಪುಣ್ಯತಿಥಿ ಅಂಗವಾಗಿ ಆಯೋಜಿಸಿದ್ದ ರ್‍ಯಾಲಿ ಮುಗಿದು ಸ್ವಲ್ಪವೇ ಹೊತ್ತಿನಲ್ಲಿ ದಾಳಿ ನಡೆದಿದೆ ಎಂದು ಬಿಎನ್‌ಪಿ–ಎಂನ ಹಂಗಾಮಿ ಅಧ್ಯಕ್ಷ, ವಕೀಲ ಸಜೀದ್ ತರೀನ್ ಹೇಳಿದ್ದಾಗಿ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಆಧುನಿಕ ವಾರ್‌ಗೆ ಸಿದ್ಧತೆ: ಬಿಎಸ್‌ಎಫ್ ಡ್ರೋನ್ ಯುದ್ಧ ಶಾಲೆ ಆರಂಭ



ನವದೆಹಲಿ: ಪಾಕಿಸ್ತಾನ ಮತ್ತು ಬಾಂಗ್ಲಾದೇಶದೊಂದಿಗಿನ ಭಾರತದ ಗಡಿಗಳನ್ನು ಕಾಯುತ್ತಿರುವ ಬಿಎಸ್‌ಎಫ್, ರಿಮೋಟ್–ನಿಯಂತ್ರಿತ ವೈಮಾನಿಕ ವೇದಿಕೆಗಳನ್ನು ಒಳಗೊಂಡ ಆಧುನಿಕ ಯುದ್ಧಕ್ಕಾಗಿ ಡ್ರೋನ್ ಕಮಾಂಡೋಗಳು ಮತ್ತು ಡ್ರೋನ್ ಯೋಧರು ಎಂಬ ವಿಶೇಷ ಘಟಕಗಳಿಗೆ ತರಬೇತಿ ನೀಡುತ್ತಿದೆ. ಮಧ್ಯಪ್ರದೇಶದ ಟೆಕನ್‌ಪುರದಲ್ಲಿರುವ ಅಧಿಕಾರಿಗಳ ತರಬೇತಿ ಅಕಾಡೆಮಿಯಲ್ಲಿ ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಮಹಾನಿರ್ದೇಶಕ ದಲ್ಜಿತ್ ಸಿಂಗ್ ಚೌಧರಿ ಅವರು 'ಡ್ರೋನ್ ಯುದ್ಧ ಶಾಲೆ'ಯನ್ನು ಉದ್ಘಾಟಿಸಿದರು. ಡ್ರೋನ್ ಯುದ್ಧ ಶಾಲೆಯು ಆಧುನಿಕ ಕಾರ್ಯತಂತ್ರದ ಸವಾಲುಗಳನ್ನು ಎದುರಿಸುವಲ್ಲಿ ಗಡಿ ಕಾವಲು ಪಡೆಗಳಿಗೆ ವಿಶೇಷ ತರಬೇತಿಯನ್ನು ನೀಡುತ್ತದೆ ಎಂದು ಪಡೆಯ ವಕ್ತಾರರು ತಿಳಿಸಿದ್ದಾರೆ. ಮಾನವರಹಿತ ವೈಮಾನಿಕ ವಾಹನ (ಯುಎವಿ) ಕಾರ್ಯಾಚರಣೆಗಳು, ಡ್ರೋನ್ ವಿರೋಧಿ ಯುದ್ಧ ಮತ್ತು ಕಣ್ಗಾವಲು ಹಾಗೂ ಗುಪ್ತಚರ ಮಾಹಿತಿ ಸಂಗ್ರಹಣೆಯನ್ನು ಒಳಗೊಂಡಿರುವ ಐದು ವಿಶೇಷ ಕೋರ್ಸ್‌ಗಳೊಂದಿಗೆ ಡ್ರೋನ್ ಕಮಾಂಡೋಗಳು ಮತ್ತು ಡ್ರೋನ್ ಯೋಧರನ್ನು ಸಿದ್ಧಪಡಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಭೂಕಂಪ: ಭಯದಲ್ಲೇ ರಾತ್ರಿ ಕಳೆಯುತ್ತಿರುವ ಅಫ್ಗನ್ ಜನರು

ಅಫ್ಘಾನಿಸ್ತಾನ: ಪೂರ್ವ ಅಫ್ಘಾನಿಸ್ತಾನದಲ್ಲಿ ಸಂಭವಿಸಿದ ಭೀಕರ ಭೂಕಂಪದಿಂದಾಗಿ ಹಲವು ಕುಟುಂಬದವರು ನಿರಾಶ್ರಿತರಾಗಿ ಹಸಿವಿನಿಂದ ಬಳಲುತ್ತಿದ್ದಾರೆ. ಮತ್ತೆ ಕುಸಿದೀತು ಎಂಬ ಆತಂಕದಲ್ಲಿ ಅಳಿದುಳಿದ ಕಟ್ಟಡಗಳಿಗೆ ಕಾಲಿಡಲೂ ಹಿಂಜರಿಯುವ ಸ್ಥಿತಿ ನಿರ್ಮಾಣವಾಗಿದೆ. ಆರಂಭದಲ್ಲಿ 6.0 ತೀವ್ರತೆಯ ಭೂಕಂಪವು ಪಾಕಿಸ್ತಾನದ ಗಡಿ ಹಂಚಿಕೊಂಡಿರುವ ಪ್ರದೇಶಗಳಲ್ಲಿ ಸಂಭವಿಸಿದ್ದು, 1,400ಕ್ಕೂ ಹೆಚ್ಚು ಜನರು ಮೃತಪಟ್ಟರು. ಹಸಿರು ಪರ್ವತಗಳ ನಡುವಿನ ಹಲವು ಕೃಷಿ ಗ್ರಾಮಗಳು ನೆಲಸಮವಾಗಿದ್ದು, ಭೂಕಂಪವಾಗಿ ಹಲವು ದಿನಗಳು ಕಳೆದರೂ ಜನರು ಇನ್ನೂ ಅವಶೇಷಗಳಡಿಯಲ್ಲಿದ್ದಾರೆ. ಇತರೆಡೆ, ಕೆಲವು ಮನೆಗಳು ಕೇವಲ ಭಾಗಶಃ ಧ್ವಂಸಗೊಂಡಿದ್ದರೂ, ನಿವಾಸಿಗಳು ಅವು ಕುಸಿಯುವ ಭಯದಿಂದಾಗಿ ಹೊರಗಿನ ಕಠಿಣ ವಾತಾವರಣದಲ್ಲೇ ಕಾಲ ಕಳೆಯಲು ಸಿದ್ಧರಾಗಿದ್ದಾರೆ. ಭೂಕಂಪದಿಂದಾಗಿ ತಮ್ಮ ಮನೆ ನಾಶವಾದ ಆ ಭಯಾನಕ ರಾತ್ರಿ ಇನ್ನೂ ಕಾಡುತ್ತಿದೆ ಎಂದು ನಂಗರಹಾರ್ ಪ್ರಾಂತ್ಯದ ದರ–ಇ–ನೂರ್‌ನ ಗ್ರಾಮದ ಇಮ್ರಾನ್ ಮೊಹಮ್ಮದ್ ಆರಿಫ್ ಹೇಳುತ್ತಾರೆ. ಅವರಿನ್ನೂ ತಮ್ಮ ಕುಟುಂಬದ ನಾಲ್ವರು ಸದಸ್ಯರೊಂದಿಗೆ ಪ್ಲಾಸ್ಟಿಕ್ ಬಿಡಾರದಲ್ಲೇ ರಾತ್ರಿ ಕಳೆಯುತ್ತಿದ್ದಾರೆ.

ಇಲಿಗಳು ಕಚ್ಚಿ ನವಜಾತ ಶಿಶು ಸಾವು



ಇಂದೋರ್: ನವಜಾತ ಶಿಶುವನ್ನು ಇಲಿಗಳು ಕಚ್ಚಿದ ಘಟನೆ ಇಲ್ಲಿನ ಮಹಾರಾಜ ಯಶವಂತರಾವ್ ಸರ್ಕಾರಿ ಆಸ್ಪತ್ರೆಯಲ್ಲಿ ನಡೆದಿದ್ದು, ಹೆಣ್ಣು ಶಿಶುವೊಂದು ಬುಧವಾರ ಸೆಪ್ಸಿಸೆಮಿಯಾದಿಂದ ಮೃತಪಟ್ಟಿದೆ ಎಂದು ಆಸ್ಪತ್ರೆ ಆಡಳಿತ ಮಂಡಳಿ ಹೇಳಿದೆ.

ಶಿಶುವು ಕೇವಲ 1.6 ಕೆ.ಜಿ. ತೂಕವಿತ್ತು. ಏಳು ದಿನಗಳ ಹಿಂದಷ್ಟೇ ಶಿಶುವಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಸೆಪ್ಟಿಸೆಮಿಯಾ ಕಾರಣದಿಂದ ಮಗುವಿನ ಆರೋಗ್ಯವು ತೀವ್ರ ಹದಗೆಟ್ಟಿತ್ತು. ಶಿಶುವಿಗೆ ಹುಟ್ಟುವಾಗಲೇ ಹಲವು ಸಮಸ್ಯೆಗಳಿದ್ದವು. ಕರುಳಿನಲ್ಲಿಯೂ ಸಮಸ್ಯೆ ಇತ್ತು ಎಂದು ಸರ್ಕಾರಿ ಆಸ್ಪತ್ರೆಯ ಉಪಸೂಪರಿಂಟೆಂಡೆಂಟ್ ಡಾ.ಜಿತೇಂದ್ರ ವರ್ಮಾ ಹೇಳಿದರು.

ಕುಟುಂಬಸ್ಥರ ಕೋರಿಕೆ ಮೇರೆಗೆ ಶಿಶುವಿನ ಮರಣೋತ್ತರ ಪರೀಕ್ಷೆ ನಡೆಸಲಿಲ್ಲ. ಮೃತದೇಹವನ್ನು ಹಾಗೆಯೇ ಹಸ್ತಾಂತರಿಸಲಾಯಿತು. ಶಿಶುವಿನ ಎಡಗೈನ ಎರಡು ಬೆರಳುಗಳನ್ನು ಇಲಿಗಳು ಕಚ್ಚಿದ್ದವು. ಇದರಿಂದ ಬೆರಳುಗಳಲ್ಲಿ ಸಣ್ಣಪುಟ್ಟ ಗಾಯಗಳಾಗಿದ್ದವು ಎಂದರು. ಈ ಪ್ರಕರಣ ಸಂಬಂಧ ಇಬ್ಬರು ಶುಶ್ರೂಷಕಿಯರನ್ನು ಮಂಗಳವಾರ ಅಮಾನತು ಮಾಡಲಾಗಿದೆ.

ಉಕ್ರೇನ್ ಮೇಲೆ ರಷ್ಯಾದಿಂದ 500 ಡ್ರೋನ್ ದಾಳಿ



ಕೀವ್: ರಷ್ಯಾ ಪಡೆಗಳು 500ಕ್ಕೂ ಹೆಚ್ಚು ಡ್ರೋನ್‌ಗಳನ್ನು ಬಳಸಿ ಮಂಗಳವಾರ ರಾತ್ರಿ ಉಕ್ರೇನ್ ಮೇಲೆ ದಾಳಿ ನಡೆಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ಯೂರೋಪಿನ ಮುಖಂಡರು ಉಕ್ರೇನ್‌ನ ಸೇನಾ ಬಲ ಹೆಚ್ಚಿಸುವುದು ಮತ್ತು ಕದನ ವಿರಾಮದಲ್ಲಿ ಅಮೆರಿಕದ ಮಧ್ಯಸ್ಥಿಕೆ ಕುರಿತು ಚರ್ಚೆ ನಡೆಸಿದ ಬೆನ್ನಲ್ಲೇ ರಷ್ಯಾ ದಾಳಿ ನಡೆಸಿದೆ. 'ರಷ್ಯಾ, 'ಪ್ರದರ್ಶನಾತ್ಮಕ ರಾತ್ರಿ ದಾಳಿ' ಮೂಲಕ ದೇಶದ ಮೂಲಸೌಕರ್ಯ ಮತ್ತು ಇಂಧನ ಸೌಲಭ್ಯಗಳನ್ನು ನಾಶಪಡಿಸುತ್ತಿದೆ' ಎಂದು ಝೆಲೆನ್‌ಸ್ಕಿ ಆರೋಪಿಸಿದ್ದಾರೆ. ಮಂಗಳವಾರ ರಾತ್ರಿ ನಡೆದ ದಾಳಿಯಲ್ಲಿ ಐವರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಸೇನೆ ಹೇಳಿದೆ. ಕದನ ವಿರಾಮಕ್ಕೆ ಸಂಬಂಧಿಸಿದಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ರಷ್ಯಾ ಅಧ್ಯಕ್ಷರೊಂದಿಗೆ ನೇರ ಮಾತುಕತೆ ನಡೆಸುವ ಅಮೆರಿಕದ ಪ್ರಸ್ತಾವಕ್ಕೆ ಝೆಲೆನ್‌ಸ್ಕಿ ಒಪ್ಪಿಗೆ ಸೂಚಿಸಿದ್ದಾರೆ. ಆದರೆ, ರಷ್ಯಾದ ಆಡಳಿತದ ಕಚೇರಿ ಕ್ರೆಮ್ಲಿನ್ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದೆ.

ಕೊಡವ ನ್ಯಾಷನಲ್ ಕೌನ್ಸಿಲ್‌ನಿಂದ ಕೈಲ್ ಪೊವ್ದ್ ಆಚರಣೆ

ಪರಂಬುವಿನ ಕೊಡವರ ನರಮೇಧದ ಸ್ಮಾರಕಕ್ಕೆ ಪುಷ್ಪ ನಮನ

ಮಡಿಕೇರಿ,ಸೆ.3– ಕೈಲ್ ಪೊವ್ದ್ ಹಬ್ಬದ ಪ್ರಯುಕ್ತ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ದೇವಟ್ ಪರಂಬುವಿನ ಕೊಡವರ ನರಮೇಧದ ಸ್ಮಾರಕ ಸ್ಥಳದಲ್ಲಿ ಪುಷ್ಪ ನಮನ ಸಲ್ಲಿಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಹಿರಿಯರಿಗೆ ಮೀದಿ ಇಟ್ಟು ತೋಕ್ ಪೂವ್ ಸಮರ್ಪಿಸಿದ ಸದಸ್ಯರು ಗೌರವ ಸಲ್ಲಿಸಿ ಮುಂದಿನ ಹೋರಾಟಕ್ಕೆ ಬೆಂಬಲ ಕೋರಿದರು. ಹಬ್ಬದ ಸಂಕೇತವಾಗಿ ಗಾಳಿಯಲ್ಲಿ ಗುಂಡು ಹಾರಿಸಿದ ಎನ್.ಯು.ನಾಚಪ್ಪ ಕೈಲ್ ಪೊವ್ದ್ ಮತ್ತು ಕೊಡವರ ಧಾರ್ಮಿಕ ಸಂಸ್ಕಾರ ಕೋವಿ ಹಕ್ಕಿನ ಕುರಿತು ಪ್ರತಿಪಾದಿಸಿದರು.

ದೇವಟ್ ಪರಂಬ್ ದುರಂತ ಸ್ಮಾರಕ ಸ್ಥಳದಲ್ಲಿ ಅಂತರರಾಷ್ಟ್ರೀಯ ಕೊಡವ ನರಮೇಧ ಸ್ಮಾರಕವನ್ನು ಸ್ಥಾಪಿಸಬೇಕು. ನಾಲ್ನಾಡ್ ಅರಮನೆ ಮತ್ತು ಮಡಿಕೇರಿ ಕೋಟೆಯಲ್ಲಿ ಹೊರಗಿನ ಪಾಲೇರಿ, ಕೆಳದಿ ರಾಜರಿಂದ ನಡೆದ ಅರಮನೆ ಪಿತೂರಿಯ ಕೊಡವರ ರಾಜಕೀಯ ಹತ್ಯೆಗಳು ಮತ್ತು ದೇವಟ್



ಕೈಲ್ ಪೊವ್ದ್ ಆಚರಣೆ ವೇಳೆ ಕೊಡವರ ಧಾರ್ಮಿಕ ಸಂಸ್ಕಾರ ಕೋವಿ ಹಕ್ಕಿನ ಬಗ್ಗೆ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಸಿಎನ್‌ಸಿ ಪದಾಧಿಕಾರಿಗಳು ಪ್ರತಿಪಾದಿಸಿದರು.

ಪರಂಬುವಿನಲ್ಲಿ ನಡೆದ ಕೊಡವರ ದುರಂತ ನರಮೇಧದ ಅಮಾನವೀಯ ಘಟನೆಗಳನ್ನು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಹತ್ಯಾಕಾಂಡದ ಸ್ಮರಣಾರ್ಥ ಪಟ್ಟಿಯಲ್ಲಿ ಸೇರಿಸಬೇಕು ಎಂದು ಒತ್ತಾಯಿಸಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಕಲಿಯಂಡ ಮೀನಾ, ಕಲಿಯಂಡ ಪ್ರಕಾಶ್, ಅಳಮಂಡ ಜೈ, ಮಂದಪಂಡ ಮನೋಜ್, ಮಂದಪಂಡ ಸೂರಜ್, ಚೆಯಬೆರ ಸತೀಶ್, ಮಂಗೇರಿರ ಜಗದೀಶ್ ಹಾಗೂ ಮಂದಪಂಡ ನಾಣಯ್ಯ ಅವರುಗಳು ಹಾಜರಿದ್ದು ಹಿರಿಯರಿಗೆ ಗೌರವ ಅರ್ಪಿಸಿದರು.

ಮತಗಳ್ಳತನದ ಬಗ್ಗೆ ಚುನಾವಣಾ ಆಯೋಗ ಉತ್ತರ ನೀಡಲಿ: ಸೊರಕೆ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ.

ಮಡಿಕೇರಿ,ಸೆ.3– ಲೋಕಸಭೆ ವಿರೋಧ ಪಕ್ಷದ ನಾಯಕರಾಗಿ 'ಶ್ಯಾಡೋ ಪ್ರೈಮ್ ಮಿನಿಸ್ಟರ್' ಆಗಿರುವ ರಾಹುಲ್ ಗಾಂಧಿ ಅವರು ಮಾಡಿರುವ ಮತ ಕಳ್ಳತನದ ಆರೋಪಗಳಿಗೆ ಚುನಾವಣಾ ಆಯೋಗ ಸ್ಪಷ್ಟ ಉತ್ತರಗಳನ್ನು ನೀಡಬೇಕು ಮತ್ತು ಆಗಿರುವ ಲೋಪಗಳನ್ನು ಸರಿಪಡಿಸುವುದು ಚುನಾವಣಾ ಆಯೋಗದ ಜವಾಬ್ದಾರಿಯಾಗಿದೆ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ಸ್ಪಷ್ಟಪಡಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಪ್ರತಿಯೊಬ್ಬರಿಗೂ 'ಮತ'ದಾನದ ಹಕ್ಕು ಕಳೆದು ಹೋಗದಂತೆ ನೋಡಿ ಕೊಳ್ಳುವುದು ಅವಶ್ಯಕವಾಗಿದೆ ರಾಹುಲ್ ಗಾಂಧಿ ಅವರು ಮಾಡಿರುವ ಮತಗಳ್ಳತನದ ಆರೋಪಕ್ಕೆ ಸಂಬಂಧಿಸಿದಂತೆ ಚುನಾವಣಾ ಆಯೋಗ ಮತಪಟ್ಟಿಯಿಂದ ತೆಗೆದು ಹಾಕಿರುವ ಸುಮಾರು 65 ಲಕ್ಷ ಮತಗಳ ಬಗ್ಗೆ ಮಾಹಿತಿಯನ್ನು ಸರ್ವೋಚ್ಛ ನ್ಯಾಯಾಲಯಕ್ಕೆ ನೀಡಿದೆ ಆದರೆ ಇದರ ಬಗ್ಗೆ ಇನ್ನಷ್ಟೆ ನ್ಯಾಯಾಲಯ ತನ್ನ ಅಭಿಪ್ರಾಯಗಳನ್ನು ತಿಳಿಸಬೇಕಿದೆ ಎಂದು ಹೇಳಿದರು. ಮತಗಳ್ಳತನದ ಕುರಿತು ರಾಹುಲ್ ಗಾಂಧಿಯವರು ವಿಚಾರಗಳನ್ನು ಸಂಸತ್‌ನಲ್ಲಿ ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಈ ಬಗ್ಗೆ ಜನಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ 1800 ಕಿಮೀ ಬೃಹತ್ ಪಾದಯಾತ್ರೆಗೆ ಚಾಲನೆಯನ್ನು ನೀಡಿದ್ದಾರೆ. ಶ್ಯಾಡೋ ಪ್ರೈಮ್ ಮಿನಿಸ್ಟರ್ ಆಗಿರುವ ರಾಹುಲ್ ಗಾಂಧಿಯವರ ಗಂಭೀರ ಆರೋಪಕ್ಕೆ ಚುನಾವಣಾ ಆಯೋಗ ಉತ್ತರವನ್ನು ನೀಡಬೇಕಿದೆ ಎಂದು ತಿಳಿಸಿದರು.

ಕಳೆದ ಚುನಾವಣಾ ಅವಧಿಯಲ್ಲಿ ಬೆಂಗಳೂರಿನ ಮಹದೇವಪುರ ಬಡಾವಣೆ ಸೇರಿದಂತೆ 9 ಕ್ಷೇತ್ರಗಳಿಗೆ ಪಕ್ಷದಿಂದ ಸಮಿತಿಯನ್ನು ರಚಿಸಿ, ಅಲ್ಲಿನ ಮತದಾರರ ಬಗ್ಗೆ ಮಾಹಿತಿಯನ್ನು ಕಲೆ ಹಾಕಿ ಅವಲೋಕಿಸಿದಾಗ ಒಂದೊಂದು ಕ್ಷೇತ್ರದಲ್ಲಿ 20ರಿಂದ 30 ಸಾವಿರ ಅಧಿಕ ಮತಗಳಿರುವುದು ಕಂಡು ಬಂದಿತ್ತು. ಅದರಂತೆ ಮಹಾರಾಷ್ಟ್ರದ ಸತಾರ ಮತ ಕ್ಷೇತ್ರದ ಚುನಾವಣೆ ಸಂದರ್ಭ ಅಲ್ಲಿಗೆ ತೆರಳಿ ಮತದಾರರ ವಿವರಗಳನ್ನು ಪರಿಶೀಲಿಸಿದ್ದಾಗಿ ತಿಳಿಸಿದ ವಿನಯ್ ಕುಮಾರ್ ಸೊರಕೆ ಆ ಮತ ಕ್ಷೇತ್ರದಲ್ಲಿ ಕಳೆದ 5 ವರ್ಷಗಳಲ್ಲಿ 21 ಸಾವಿರ ಮತಗಳ ಹೆಚ್ಚಳವಾಗಿತ್ತು. ಸಂಸತ್ ಮತ್ತು ವಿಧಾನ ಸಭೆಯ ಚುನಾವಣೆಯ ನಡುವಿನ ಅಲ್ಪ ಅಂತರದಲ್ಲಿ 45 ಲಕ್ಷಕ್ಕೂ ಹೆಚ್ಚಿನ ಮತಗಳು ಸೇರ್ಪಡೆಯಾಗಿತ್ತು ಎಂದು ವಿವರಿಸಿದರು.

ವಿವಿಧ ಮತ ಕ್ಷೇತ್ರಗಳಲ್ಲಿ ಒಂದೇ ವಿಳಾಸದಡಿ ವಿವಿಧ ಜಾತಿ ಸಮೂಹಗಳಿಗೆ ಸೇರಿದ ನೂರಾರು ಮತಗಳು ಇರುವುದು ಕಂಡು ಬಂದಿದೆ. ಇಂತಹ ವಿಚಾರಗಳನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ಉಪಾಧ್ಯಕ್ಷ ಲೋಬೋ, ಸಂಯೋಜಕರಾದ ಫಾರೂಕ್, ಮುಖ್ಯ ಸಂಯೋಜಕ ಜಾನ್, ರಾಜ್ಯ ಉಪಾಧ್ಯಕ್ಷ ಮುನೀರ್, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಟಿ.ಪಿ. ರಮೇಶ್ ಮೊದಲಾದವರು ಉಪಸ್ಥಿತರಿದ್ದರು.

ರಾಜಣ್ಣ ಸಿದ್ಧಾಂತ ಬಿಟ್ಟು ಹೋಗಲ್ಲ

ಕಾಂಗ್ರೆಸ್‌ನ ರಾಜಣ್ಣ ಅವರು ಬಿಜೆಪಿಗೆ ಹೋಗುವ ಸಾಧ್ಯತೆಯ ಬಗ್ಗೆ ಪ್ರಶ್ನಿಸಿದಾಗ ಪ್ರತಿಕ್ರಿಯಿಸಿದ ವಿನಯ್ ಕುಮಾರ್ ಸೊರಕೆ, ರಾಜಣ್ಣ ಅವರು ಯುವ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅವಧಿಯಿಂದಲೇ ನಾನು ಬಲ್ಲೆ. ಅವರು ಕಾಂಗ್ರೆಸ್ ಸಿದ್ಧಾಂತದ ಮೇಲೆ ಬೆಳೆದು ಬಂದವರಾಗಿದ್ದಾರೆ. ಇಂತಹ ಸಿದ್ಧಾಂತವನ್ನು ರಾಜಣ್ಣ ಬಿಟ್ಟು ಹೋಗುತ್ತಾರೆ ಎನ್ನುವ ವಿಶ್ವಾಸ ತನಗಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾಫಿ ಸಂಸ್ಕರಣಾ ಘಟಕದಲ್ಲಿ 50 ಲಕ್ಷಕ್ಕೂ ಅಧಿಕ ಮೌಲ್ಯದ

ಕಾಫಿ ಬೀಜ ಕಳವು: ಐವರ ಬಂಧನ



ಸುನೀಲ್.ಆರ್




ರಾಜು.ಆರ್



ಶರತ್.ಆರ್



ದಿನೇಶ್ ರಾವತ್



ಜೀತೇಂದ್ರಕುಮಾರ್

ಮಡಿಕೇರಿ,ಸೆ.3– ಕುಶಾಲನಗರದ ಕೈಗಾರಿಕಾ ಪ್ರದೇಶದಲ್ಲಿರುವ ಕಾಫಿ ಸಂಸ್ಕರಣಾ ಘಟಕದಲ್ಲಿ 50 ಲಕ್ಷಕ್ಕೂ ಅಧಿಕ ಮೌಲ್ಯದ ಕಾಫಿ ಕಳವು ಮಾಡಿದ್ದ ಪ್ರಕರಣವನ್ನು ಭೇದಿಸಿರುವ ಪೊಲೀಸರು ಕಾಫಿ ಸಂಸ್ಕರಣಾ ಘಟಕದಲ್ಲಿ ಕೆಲಸ ಮಾಡುವ ಕಾರ್ಮಿಕರು, ಆಟೋ ಚಾಲಕ ಸೇರಿ ಐವರನ್ನು ಬಂಧಿಸಿದ್ದಾರೆ.

ಬೈಲುಕುಪ್ಪೆ ಗ್ರಾಮ ನಿವಾಸಿ ಸುನೀಲ್.ಆರ್(34), ರಾಜು.ಆರ್(24) ಶರತ್.ಆರ್(24) ಬಿಹಾರ ರಾಜ್ಯದ ಪಶ್ಚಿಮ ಚಂಪಾರಣ್ ಜಿಲ್ಲೆಯ ದಿನೇಶ್ ರಾವತ್(44) ಜೀತೇಂದ್ರ ಕುಮಾರ್ ರಾಮ್(38) ಬಂಧಿತ ಆರೋಪಿಗಳಾಗಿದ್ದು, ಬಂಧಿತರಿಂದ ಕಾಫಿ ಸಂಸ್ಕರಣಾ ಘಟಕದಿಂದ ಕಳವು ಮಾಡಿದ್ದ 6495 ಕೆ.ಜಿ ಕಾಫಿ, ಕೃತ್ಯಕ್ಕೆ ಬಳಸಿದ್ದ 1 ಕಾರು, 2 ದ್ವಿಚಕ್ರ ವಾಹನ, 1 ಆಟೋ ರಿಕ್ಷಾವನ್ನು ವಶ ಪಡಿಸಿಕೊಳ್ಳಲಾಗಿದೆ.

ಘಟನೆ ಹಿನ್ನೆಲೆ: ಕುಶಾಲನಗರ ಕೈಗಾರಿಕಾ ಪ್ರದೇಶದಲ್ಲಿರುವ ಕಾಫಿ ಸಂಸ್ಕರಣಾ ಘಟಕದಲ್ಲಿ 6 ತಿಂಗಳಿನಿಂದ ಕಾಫಿ ಚೀಲಗಳ ತೂಕದಲ್ಲಿ ವ್ಯತ್ಯಾಸ ಕಂಡು ಬರುತ್ತಿತ್ತು. ಇದರಿಂದ ಅನುಮಾನಗೊಂಡ ಘಟಕದ ವ್ಯವಸ್ಥಾಪಕರು ಅಲ್ಲಿದ್ದ ಸಿ.ಸಿ. ಕ್ಯಾಮರಾಗಳನ್ನು ಪರಿಶೀಲನೆಗೆ ನಡೆಸಿದ್ದಾರೆ. ಈ ವೇಳೆ ಕಾಫಿ ಸಂಸ್ಕರಣಾ ಘಟಕದಲ್ಲಿ ಕೆಲಸ ಮಾಡುವ ಓರ್ವ ಸ್ಥಳೀಯ ಮತ್ತು ಬಿಹಾರ ಮೂಲದ ಇಬ್ಬರು ಕಾರ್ಮಿಕರು ಸಹಿತ ಕಾಫಿ ಸಾಗಾ ಟಕ್ಕೆ ಓರ್ವ ಆಟೋ ಚಾಲಕ ಕೂಡ ಕೈ ಜೋಡಿಸಿರುವುದು ಕಂಡು ಬಂದಿದೆ. ಮಾತ್ರವಲ್ಲದೇ ಸಂಸ್ಥೆಯ ಕಾರಿನಲ್ಲೂ ಕಾಫಿ ಸಾಗಾಟ ಮಾಡಿರುವುದು ಸಿಸಿ ಕ್ಯಾಮರಾದಲ್ಲಿ ದಾಖಲಾಗಿದೆ. ಈ ಹಿನ್ನೆಲೆಯಲ್ಲಿ ಕಾಫಿ ಸಂಸ್ಕರಣಾ ಘಟಕದ ಮ್ಯಾನೇಜರ್ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಕಳೆದ 6 ತಿಂಗಳಿಂದ 50 ಲಕ್ಷ ರೂ. ಅಧಿಕ ಕಾಫಿ ಕಳವು ಮಾಡಲಾಗಿದೆ ಎಂದು ದೂರು ದಾಖಲಿಸಿದ್ದರು. ಪ್ರಕರಣ ದಾಖಲಿಸಿಕೊಂಡ ಗ್ರಾಮಾಂತರ ಪೊಲೀಸರು ಕೃತ್ಯದಲ್ಲಿ ಪಾಲ್ಗೊಂಡ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ವಿರಾಜಪೇಟೆ ಪುರಸಭಾ ಕಾರ್ಮಿಕರಿಗೆ ಕ್ರೀಡಾಕೂಟ



ಕ್ರೀಡಾಕೂಟದಲ್ಲಿ ಭಾಗವಹಿಸಿದ್ದವರೊಂದಿಗೆ ಶಾಸಕ ಪೊನ್ನಣ್ಣ.

ವಿರಾಜಪೇಟೆ: ಪುರಸಭಾ ವ್ಯಾಪ್ತಿಯ ಎಲ್ಲಾ ಕೆಲಸ ಕಾರ್ಯಗಳಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡು ದುಡಿಯುವ ಕಾರ್ಮಿಕರಿಗೆ ಕ್ರೀಡಾಕೂಟ ಬದಲಾವಣೆ ನೀಡುತ್ತದೆ ಎಂದು ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಹೇಳಿದರು.

ವಿರಾಜಪೇಟೆ ಪುರಸಭೆಯ ಗಣೇಶೋತ್ಸವ ಕಾರ್ಯಕ್ರಮದ ಅಂಗವಾಗಿ ಪುರಸಭೆ ಕಾರ್ಮಿಕರಿಗಾಗಿ ಪುರಭವನ ಆವರಣದಲ್ಲಿ ನಡೆದ ಕ್ರೀಡಾಕೂಟಕ್ಕೆ ಶುಭ ಕೋರುತ್ತಾ ಮಾತನಾಡಿದ ಶಾಸಕರು ಒತ್ತಡದ ಜೀವನದ ನಡುವೆಯು ಕ್ರೀಡಾಕೂಟದಲ್ಲಿ ಭಾಗವಹಿಸಿದ ಪುರಸಭೆ ಕಾರ್ಮಿಕರನ್ನು ಶ್ಲಾಘಿಸಿ ಎಲ್ಲರಿಗೂ ಶುಭ ಹಾರೈಸಿದರು. ಇದೆ ಸಂದರ್ಭದಲ್ಲಿ ಶಾಸಕರನ್ನು ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಕ್ರೀಡಾಕೂಟದಲ್ಲಿ ವಿಜೇತ ಪುರಸಭೆ ಸಿಬ್ಬಂದಿಗಳು ಹಾಗೂ ಕಾರ್ಮಿಕರಿಗೆ ಶಾಸಕರು ಬಹುಮಾನ ವಿತರಿಸಿದರು.

ಈ ಸಂದರ್ಭ ಪುರಸಭೆ ಮುಖ್ಯಾಧಿಕಾರಿ ನಾಚಪ್ಪ, ಅಭಿಯಂತರ ಹೇಮ್ ಕುಮಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಪುರಸಭೆ ಅಧ್ಯಕ್ಷರಾದ ದೇಚಮ್ಮ ಕಾಳಪ್ಪ, ಸದಸ್ಯರಾದ ಮತೀನ್, ರಾಜೇಶ್ ಪದ್ಮನಾಭ, ಅಗಸ್ಟಿನ್ ಬಿನ್ನಿ, ಮಹಮ್ಮದ್ ರಾಫಿ, ಶಭರೀಶ್ ಶೆಟ್ಟಿ, ರಜನಿಕಾಂತ್, ಪುರಸಭೆ ಸಿಬ್ಬಂದಿ, ಪೌರಕಾರ್ಮಿಕರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರು–ಟ್ಯಾಂಕರ್ ಡಿಕ್ಕಿ: ಮಹಿಳೆ ಸಾವು

ನಾಪೋಕ್ಲು: ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ 275ರ ಕಲ್ಲುಗುಂಡಿ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮಹಿಳೆಯೊಬ್ಬರು ಸಾವನ್ನಪ್ಪಿ ಇಬ್ಬರು ಗಾಯಗೊಂಡಿರುವ ಘಟನೆ ನಡೆದಿದೆ.

ಕಲ್ಲುಗುಂಡಿ ಸಮೀಪ ಕಡೆಪಾಲ ಎಂಬಲ್ಲಿ ಕಾರು ಮತ್ತು ಟ್ಯಾಂಕರ್ ಮಧ್ಯೆ ಅಪಘಾತವಾಗಿದ್ದು, ಕುಶಾಲನಗರ ತಾಲೂಕಿನ ನೆಲ್ಯಹುದಿಕೇರಿ ಗ್ರಾಮದ ಶೋಭಾ(45) ಎಂಬುವವರು ಗಂಭೀರ ಗಾಯಗೊಂಡು ಆಸ್ಪತ್ರೆಗೆ ಸಾಗಿಸುವ ಸಂದರ್ಭ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಕಾರು ಚಲಾಯಿಸುತ್ತಿದ್ದ ದೇವಯ್ಯ(54) ಮತ್ತು ಪ್ರಯಾಣಿಕರಾದ ವನಜಾಕ್ಷಿ(44)ಅವರು ಗಾಯಗೊಂಡಿದ್ದು, ಸುಳ್ಯ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಮಡಿಕೇರಿಯಿಂದ ಸುಳ್ಯ ಕಡೆಗೆ ತೆರಳುತ್ತಿದ್ದ ಟ್ಯಾಂಕರ್(ಕೆಎ.19.ಎಡಿ9118) ಮತ್ತು ಸುಳ್ಯ ಭಾಗದಿಂದ ಮಡಿಕೇರಿ ಕಡೆಗೆ ಬರುತ್ತಿದ್ದ ಕಾರು(ಕೆಎ.01.ಎಂಜೆ.6018) ನಡುವೆ



ತಿರುವು ರಸ್ತೆಯಲ್ಲಿ ಅಪಘಾತ ಸಂಭವಿಸಿದೆ. ಘಟನೆ ಕುರಿತು ಸುಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಲ್ಲೇಟಿರ ಗುರುವಪ್ಪ ನಿಧನ

ನಾಪೋಕ್ಲು: ಇಲ್ಲಿಯ ಗ್ರಾಮ ನಿವಾಸಿ



ನಿವೃತ್ತ ಮುಖ್ಯ ಶಿಕ್ಷಕ ಕುಲ್ಲೇಟಿರ ಗುರುವಪ್ಪ (87) ಬುಧವಾರ ನಿಧನರಾದರು. ಮೃತರು ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂದು ಭಾಂದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ರುದ್ರ ಭೂಮಿಯಲ್ಲಿ ಗುರುವಾರ ಜರುಗಲಿದೆ.

ಚೇರಂಬಾಣೆ ವಿದ್ಯಾ ಸಂಸ್ಥೆ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ

ನಾಪೋಕ್ಲು: ಚೇರಂಬಾಣೆ ಶ್ರೀ ರಾಜರಾಜೇಶ್ವರಿ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ ಆಗಿದ್ದಾರೆ.

ಮಡಿಕೇರಿ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ದಸರಾ ಟೇಬಲ್ ಟೆನ್ನಿಸ್ ಕ್ರೀಡಾಕೂಟದಲ್ಲಿ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆಆಯ್ಕೆ ಆದರು. ವಿದ್ಯಾರ್ಥಿಗಳಾದ ವರುಣಿಕ ಪಿ.ಎಂ., ಮೋಕ್ಷಿ ಕೆ.ಜೆ., ದಿಶಾ ಕೆ.ಡಿ. ಹಾಗೂ ಅಹಾ ಬಿ.ಜಿ. ಇವರಿಗೆ ಶಿಕ್ಷಿ ಪಿ.ಸಿ.ರಾಧಿಕಾ ಮಾರ್ಗದರ್ಶನ ನೀಡಿದ್ದರು.

ಕೇಂದ್ರ ಸರ್ಕಾರ ಬಡವರ ರಕ್ತ ಹೀರುತ್ತಿದೆ

ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ವಿನಯ್ ಕುಮಾರ್ ಸೊರಕೆ ಆರೋಪ

ಚಾಮರಾಜನಗರ, ಸೆ.3– ಕೇಂದ್ರ ಬಿಜೆಪಿ ಸರ್ಕಾರ ಬಡವರ ರಕ್ತ ಹೀರುತ್ತಿದೆ ಎಂದು ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ವಿನಯ್ ಕುಮಾರ್ ಸೊರಕೆ ಆರೋಪಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಅವರು ಭೇಟಿ ನೀಡಿ ಪಕ್ಷದ ಕಾರ್ಯಕರ್ತರೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ನುಡಿದಂತೆ ಚುನಾವಣೆಯಾದ 6 ತಿಂಗಳಲ್ಲೇ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ಜನತೆ ಅನುಕೂಲ ಮಾಡಿದೆ. ಆದರೆ ಕೇಂದದಲ್ಲಿ ನರೇಂದ್ರ ಮೋದಿ ಅವರ ನೇತೃತ್ವ ಸರ್ಕಾರ ಬಡವರ ರಕ್ತ ಹೀರುತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ಸಿನಲ್ಲಿ ಚುನಾವಣೆ ಸಂದರ್ಭದಲ್ಲಿ ಮಾತ್ರ ಪಕ್ಷದಲ್ಲಿ ಪ್ರಚಾರ ಸಮಿತಿ ಮಾಡಲಾಗುತಿತ್ತು. ಈಗ ವರ್ಷಪೂರ್ತಿ ಪಕ್ಷದ ಜನಪರ ಕಾರ್ಯಕ್ರಮ, ಗ್ಯಾರಂಟಿ ಯೋಜನೆಗಳನ್ನು ಪ್ರಚಾರ ಮಾಡಲಾಗುತ್ತದೆ. ಬಿಜೆಪಿಯವರು ಶೇ.5ರಷ್ಟು ಕೆಲಸ ಮಾಡಿದರೆ ಸಾಮಾಜಿಕ ಜಾಲತಾಣದ ಮೂಲಕ 95 ರಷ್ಟು ಪ್ರಚಾರ ಮಾಡುತ್ತಾರೆ. ನಮ್ಮ ಪಕ್ಷದವರು ಶೇ.100ರಷ್ಟು ಕೆಲಸ ಮಾಡಿದರು ಶೇ.5ರಷ್ಟು ಪ್ರಚಾರ ತೆಗೆದುಕೊಳ್ಳುತ್ತಿಲ್ಲ. ಇದರಿಂದ ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮಗಳು ಜನರನ್ನು ಮುಟ್ಟುತ್ತಿಲ್ಲ. ಮುಂದಿನ ದಿನಗಳಲ್ಲಿ ನಮ್ಮ ಪಕ್ಷ ನಮ್ಮ ಸರ್ಕಾರದ ಕಾರ್ಯಕ್ರಮಗಳು ಪ್ರಚಾರದ ಮೂಲಕ ಜನತೆಗೆ ತಲುಪಿಸುವ ಸಲುವಾಗಿ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಸದೃಢಗೊಳಿಸಲು ರಾಜ್ಯಾದ್ಯಂತ ಪ್ರವಾಸಕೈಗೊಳ್ಳಲಾಗಿದೆ ಎಂದರು.

ಇದೇ ವೇಳೆ ಹೊಸಹಳ್ಳಿ ಮಧುಸೂದನ್ ಅವರನ್ನು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ನೇಮಿಸಲಾಗಿದೆ ಎಂದು ಅಧಿಕೃತವಾಗಿ ಘೋಷಿಸಿದರು. ಮುಂದಿನ ದಿನಗಳಲ್ಲಿ ಜಿಲ್ಲಾ ಸಮಿತಿ, ತಾಲೂಕು ಸಮಿತಿಗಳನ್ನು ರಚನೆ ಮಾಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಸಮಿತಿ ಮಾಡುವ ಮೂಲಕ ಕಾಂಗ್ರೆಸ್ ಪಕ್ಷ ಸರ್ಕಾರದ ಯೋಜನೆ, ಕಾರ್ಯಕ್ರಮಗಳನ್ನು ಪ್ರಚಾರ ಮಾಡುವ ಕೆಲಸ ಆಗಬೇಕು. ಮುಂಬರುವ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಹೆಚ್ಚಿನ ಸ್ಥಾನಗಳಲ್ಲಿ ಪಕ್ಷ ಅಧಿಕಾರಕ್ಕೆ ತಂದು ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಬಹುಮತದೊಂದಿಗೆ ಅಧಿಕಾರಕ್ಕೆ ತರಲು ಜಿಲ್ಲಾ ಸಮಿತಿ ಶ್ರಮವಹಿಸಿಬೇಕು ಎಂದು ಇದೇ ಸಂದರ್ಭದಲ್ಲಿ ಕರೆ ನೀಡಿದರು.

ನೂತನ ಅಧ್ಯಕ್ಷರಿಗೆ ಅಭಿನಂದನೆಗಳ ಮಹಾಪೂರ: ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಹೊಸಹಳ್ಳಿ ಮಧುಸೂದನ್ ಅವರಿಗೆ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು, ಶಾಲು ಹೊದಿಸಿ, ಹಾರಹಾಕಿ ಫಲ ತಾಂಬೂಲ ನೀಡಿ ಸ್ನೇಹಿತರು ಸನ್ಮಾನಿಸಿದರು. ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಪ್ರಚಾರ ಸಮಿತಿ ಉಪಾಧ್ಯಕ್ಷ ಕೋಟೆ ಎಂ.ಶಿವಣ್ಣ, ಅಬ್ದುಲ್ಲು ನ್ನಿರ್, ರಾಜ್ಯ ಸಂಯೋಜಕ ಎಸ್.ನಾರಾಯಣ್, ಸಿ.ಆರ್.ನಟರಾಜು, ಕೆಪಿಸಿಸಿ ಕಾರ್ಯಾಧ್ಯಕ್ಷ ಎಸ್.ಸಿ.ಬಸವರಾಜು, ಪ್ರಚಾರ ಸಮಿತಿ ಕಾರ್ಯದರ್ಶಿ ನಟರಾಜು, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಕರ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ, ರವಿಕುಮಾರ್, ಪ್ರಧಾನ ಕಾರ್ಯ ದರ್ಶಿ ಚಿಕ್ಕಮಹದೇವು, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ, ಎನ್‌ಎಸ್ಯುಐ ಜಿಲ್ಲಾಧ್ಯಕ್ಷ ಮೋಹನ್ ನಗು, ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಯೋಗೇಂದ್ರ ಇತರರು ಹಾಜರಿದ್ದರು.



ಚಾ.ನಗರದಲ್ಲಿ ಮಾಜಿ ಸಚಿವ ವಿನಯ್‌ಕುಮಾರ್ ಸೊರಕೆ ಅವರನ್ನು ಅಭಿನಂದಿಸಲಾಯಿತು.

ಟೊಮೆಟೊ ತುಂಬಿದ ಲಾರಿ ಪಲ್ಟಿ: ಕಾಡಾನೆಗೆ ಸಿಕ್ತು ಪುಷ್ಕಳ ಆಹಾರ!



ಚಾಮರಾಜನಗರ: ಚಿಕ್ಕಮಗಳೂರಿನಿಂದ ಕೇರಳಕ್ಕೆ ಲಾರಿಯಲ್ಲಿ ಟೊಮೆಟೊ ಸಾಗಿಸುವಾಗ ತಾಲೂಕಿನ ಪುಣಜನೂರು ಸಮೀಪ ಚಾಲಕನ ನಿಯಂತ್ರಣ ತಪ್ಪಿ ನಡುರಸ್ತೆಯಲ್ಲಿ ಪಲ್ಟಿಯಾಗಿದ್ದು, ಅದನ್ನು ಕಾಡಾನೆ ಬಂದು ತಿಂದ ಘಟನೆ ತಡ ರಾತ್ರಿ ನಡೆದಿದೆ. ಸುಮಾರು 210 ಬಾಕ್ಸ್ ಟೊಮೆಟೊ ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದನ್ನು ಕಂಡ ಕಾಡಾನೆ ಓಡೋಡಿ ಬಂದು ತಿಂದಿದೆ. ಕಾಡಾನೆಗೆ ಊಟ, ರೈತನಿಗೆ ಪ್ರಾಣ ಸಂಕಟ ಎಂಬಂತೆ ನಡು ರಸ್ತೆಯಲ್ಲಿ ಪಲ್ಟಿಯಾದ ಈಚರ್ ವಾಹನ ಕಂಡು ಕಾಡಾನೆಯೊಂದು ಓಡೋಡಿ ಬಂದು ಟೊಮೊಟೊ ತಿನ್ನುತ್ತಾ ನಿಂತಿತು.

ಬಳಿಕ ಕಾಡಾನೆಯನ್ನು ಪೊಲೀಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಪಟಾಕಿ ಸಿಡಿಸಿ ಓಡಿಸಿ, ಟ್ರ್ಯಾಕ್ಟರ್ ಮೂಲಕ ಲಾರಿಯನ್ನು ಪಕ್ಕಕ್ಕೆ ಸರಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಮೊದಲೇ ಬೆಲೆ ಇಲ್ಲದೆ ಪರದಾಡುತ್ತಿದ್ದ ರೈತನಿಗೆ ಟೊಮೆಟೊ ರಸ್ತೆ ಪಾಲಾಗಿ ಮತ್ತಷ್ಟು ಕಂಗಾಲಾಗುವಂತೆ ಮಾಡಿದೆ.

ಬೈಕ್‌ಗೆ ಟಿಪ್ಪರ್ ಡಿಕ್ಕಿ; ಸವಾರನಿಗೆ ತೀವ್ರ ಗಾಯ



ಗುಂಡ್ಲುಪೇಟೆ, ಬೇಗೂರು, ಸೆ.3– ಬೈಕ್‌ಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಸವಾರ ತೀವ್ರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಗರಗನಹಳ್ಳಿ ಗೇಟ್ ಬಳಿ ನಡೆದಿದೆ.

ತಾಲೂಕಿನ ಕೂತನೂರು ಗ್ರಾಮದ ಮಂಜು (34) ಗಾಯಗೊಂಡ ಸವಾರ. ಈತ ಗುಂಡ್ಲುಪೇಟೆಯಿಂದ ಬೈಕ್‌ನಲ್ಲಿ ತೆರಳುತ್ತಿದ್ದಾಗ ಎದುರಿನಿಂದ ಟಿಪ್ಪರ್ (ಕೆ.ಎ–10 ಎ–5041) ಡಿಕ್ಕಿ ಹೊಡೆದಿದೆ. ಇದರಿಂದ ಬೈಕ್ ಸವಾರನ ಕೈಗೆ ತೀವ್ರ ಗಾಯವಾಗಿದ್ದು, ತಲೆ, ಹೊಟ್ಟೆ, ಎದೆ ಭಾಗಕ್ಕೂ ಪೆಟ್ಟು ಬಿದ್ದಿದೆ. ವಿಷಯ ತಿಳಿದು ಸ್ಥಳಕ್ಕೆ ಬೇಗೂರು ಠಾಣೆ ಪೊಲೀಸರು ಭೇಟಿ ನೀಡಿ, ಗಾಯಾಳನ್ನು ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಚಿಕಿತ್ಸೆ ಕೊಡಿಸಿದ್ದಾರೆ. ನಂತರ ಹೆಚ್ಚಿನ ಚಿಕಿತ್ಸೆಗೆ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ. ಈ ಸಂಬಂಧ ಬೈಕ್ ಹಾಗೂ ಟಿಪ್ಪರ್ ಲಾರಿಯನ್ನು ಬೇಗೂರು ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪ್ರಸಾದ ವಿನಿಯೋಗ



ಚಾಮರಾಜನಗರದ ಹಳೆ ಖಾಸಗಿ ಬಸ್ ನಿಲ್ದಾಣದ ಅವರಣದ ಮಾರಿ ಗುಡಿ ಮುಂಭಾಗ ನಿರ್ಮಿಸಿರುವ ಭವ್ಯ ವೇದಿಕೆಯಲ್ಲಿ ಹಿಂದೂ ಜಾಗೃತಿ ಸಮಿತಿ ಹಾಗೂ ಮುದುಕು ಮಾರಮ್ಮ ಯುವಕರ ಸಂಘದಿಂದ ಪ್ರತಿಷ್ಠಾಪಿಸಿರುವ ಗಣಪತಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಸಾದ ವಿನಿಯೋಗ ನಡೆಸಲಾಯಿತು.

ಇಂದು ಏಡ್ಸ್ ಜನಜಾಗೃತಿಗಾಗಿ ಮ್ಯಾರಥಾನ್, ರೆಡ್ ರಿಬ್ಬನ್ ಓಟ

ಚಾಮರಾಜನಗರ, ಸೆ.3– ಯುವ ಜನೋತ್ಸವ–2025 ಕಾರ್ಯಕ್ರಮದ ಅಂಗವಾಗಿ ಹೆಚ್‌ಐವಿ ಏಡ್ಸ್ ನಿಯಂತ್ರಣ ಕಾರ್ಯಕ್ರಮದಡಿ ಪದವಿ ಕಾಲೇಜಿನ ವಿದ್ಯಾರ್ಥಿಗಳಿಂದ ಮ್ಯಾರಥಾನ್ ಹಾಗೂ ರೆಡ್ ರಿಬ್ಬನ್ ಓಟ ಸ್ಪರ್ಧೆಯನ್ನು ಸೆ.4ರಂದು ಬೆಳಿಗ್ಗೆ 8 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಮುಂಭಾಗದಿಂದ ಹಮ್ಮಿಕೊಳ್ಳಲಾಗಿದೆ.

ಮ್ಯಾರಥಾನ್ ಹಾಗೂ ರೆಡ್ ರಿಬ್ಬನ್ ಓಟ ಸ್ಪರ್ಧೆಯು ಜಿಲ್ಲಾಡಳಿತ ಭವನದ ಮುಂಭಾಗದಿಂದ ಡಿ.ವೈ.ಎಸ್.ಪಿ. ವೃತ್ತ, ನ್ಯಾಯಾಲಯ ರಸ್ತೆ, ಚರ್ಚ್ ಕ್ರಾಸ್, ನಿಜಗುಣ ರೆಸಿಡೆನ್ಸಿ ರಸ್ತೆ, ಸಿಎಸ್‌ಐ ಚರ್ಚ್, ಅರಣ್ಯ ಇಲಾಖೆಯ ವೃತ್ತ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮೂಲಕ ಪಚ್ಚಪ್ಪ ವೃತ್ತದಿಂದ ಮತ್ತೆ ಜಿಲ್ಲಾಡಳಿತ ಭವನದಲ್ಲಿ ಮುಕ್ತಾಯಗೊಳ್ಳಲಿದೆ ಎಂದು ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಜ್ಜಲಪಾಳ್ಯ, ಬಾನವಾಡಿ ಗ್ರಾಮಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

ಚಾಮರಾಜನಗರ: ರಾಷ್ಟ್ರೀಯ ಹೆದ್ದಾರಿ (209)ಗೆ ಹೊಂದಿಕೊಂಡ ಕಾಡಂಚಿನ ಗ್ರಾಮಗಳಾದ ಬೆಜ್ಜಲಪಾಳ್ಯ, ಬಾನವಾಡಿ ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ರಸ್ತೆಗಳು ಗ್ರಾಮಗಳ ಅಭಿವೃದ್ಧಿಯ ಸಂಕೇತವಾಗಿದ್ದು, ಬೆಜ್ಜಳಪಾಳ್ಯ ಗ್ರಾಮದಲ್ಲಿ ಎಸ್ಸಿಪಿ ಯೋಜನೆಯಡಿಯಲ್ಲಿ 50 ಲಕ್ಷರೂ. ಬಾನವಾಡಿ ಗ್ರಾಮಕ್ಕೆ ಟಿಎಸ್ಪಿ ಯೋಜನೆಯಡಿ 50ಲಕ್ಷ ರೂ ಸೇರಿದಂತೆ 1ಕೋಟಿ ರೂ. ವೆಚ್ಚದಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಲಾಗಿದೆ. ಗ್ರಾಮಸ್ಥರು ಮುಂದೆನಿಂತು ಗುಣಮಟ್ಟದ ರಸ್ತೆ ನಿರ್ಮಿಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು.

ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಜನತೆಯ ಆಶಯಕ್ಕೆ ಬದ್ಧರಾಗಿ ಗ್ರಾಮಗಳಲ್ಲಿ ರಸ್ತೆ ಚರಂಡಿ, ಸಮುದಾಯ ಭವನ ಆಶ್ರಯಮನೆ ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ಸರ್ಕಾರ ಮಂಜೂರುಮಾಡುವ ಅನುದಾನ ಹಾಗೂ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಲಾಗುತ್ತಿದೆ, ಕಾಮಗಾರಿ ನಿರ್ವಹಣೆ ಗುತ್ತಿಗೆದಾರು ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಬೇಕು ಎಂದರು.

ಗ್ರಾಪಂ ಉಪಾಧ್ಯಕ್ಷ ರಾಚಪ್ಪ, ಸದಸ್ಯ ಪಿ. ನಾಗನಾಯಕ, ಗಣೇಶ್‌ನಾಯಕ, ಮಾಜಿ ತಾಪಂ ಸದಸ್ಯ ಪಿ.ಕುಮಾರ್‌ನಾಯಕ್, ಗ್ರಾಪಂ ಮಾಜಿ ಉಪಾಧ್ಯಕ್ಷ ಷಮೀರ್ ಪಾಷ, ಶಿವಜಿನಾಯಕ, ಮುಖಂಡರಾದ ಜಡಯಪ್ಪ, ಉಲ್ಲೇಶ್‌ನಾಯಕ್, ಶಂಕರ್, ನಿಂಗಪ್ಪ,ರವಿ, ಬಿಸಲವಾಡಿರವಿ, ಪಿಡಿಓ ಲಕ್ಷಣ್‌ನಾಯಕ್, ಎಂಜಿನಿಯರ್ ಮಧು, ಗ್ರಾಮಸ್ಥರು, ಮುಖಂಡರು ಹಾಜರಿದ್ದರು.



ಪುಣಜನೂರು ಗ್ರಾಪಂ ವ್ಯಾಪ್ತಿಯ ಬಾನವಾಡಿ ಗ್ರಾಮದಲ್ಲಿ ಸಿಮೆಂಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ಹೊರೆಯಾಲದಿಂದ ವೃದ್ಧೆ ನಾಪತ್ತೆ



ಗುಂಡ್ಲುಪೇಟೆ: ತಾಲೂಕಿನ ಹೊರೆಯಾಲ ಗ್ರಾಮದ ಮಾಲಮ್ಮ ಎಂಬ ವೃದ್ಧೆ ಕಾಣೆಯಾಗಿದ್ದು, ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 87 ವರ್ಷದ ಮಾಲಮ್ಮ 5 ಅಡಿ ಎತ್ತರ, ದುಂಡು ಮುಖ, ಎಣ್ಣೆಗೆಂಪು ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಕೇಸರಿ ಬಣ್ಣದ ಸೀರೆ, ಕಪ್ಪು ಬಣ್ಣದ ಸ್ವೆಟರ್ ಧರಿಸಿದ್ದರು. ಇವರ ಸುಳಿವು ದೊರೆತಲ್ಲಿ ಬೇಗೂರು ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಅವರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಗರಸಭಾಧ್ಯಕ್ಷರಿಂದ ಆಂಗ್ಲ ಮಾಧ್ಯಮ ಶಾಲೆ ಉದ್ಘಾಟನೆ

ಕೊಳ್ಳೇಗಾಲ: ಪಟ್ಟಣದ ಬಸ್ತೀಪುರ ಬಡಾವಣೆಯಲ್ಲಿ ಬುಧವಾರ ನೂತನವಾಗಿ ಪ್ರಾರಂಭಿಸಲಾಗಿರುವ ಆಂಗ್ಲ ಮಾಧ್ಯಮದ ಶಾಲೆಯನ್ನು ನಗರಸಭೆ ಅಧ್ಯಕ್ಷೆ ರೇಖಾ ರಮೇಶ್ ಉದ್ಘಾಟಿಸಿದರು.

ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮದ ಕೊಠಡಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಮಕ್ಕಳು ಇಂಗ್ಲೀಷ್ ಕಲಿಯುವ ಉದ್ದೇಶದಿಂದ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಶಾಲೆ ಆರಂಭವಾಗಿರುವುದು ಸಂತಸದ ವಿಷಯವಾಗಿದೆ. ಪ್ರತಿಯೊಬ್ಬರೂ ಇಂಗ್ಲೀಷ್ ಭಾಷೆಯನ್ನು ಕಲಿಯುವುದರ ಜೊತೆಗೆ ಕನ್ನಡ ಭಾಷೆಯನ್ನು ಮರೆಯಬಾರದು, ಖಾಸಗಿ ಶಾಲೆಗಳ ಮಕ್ಕಳಂತೆ ನಮ್ಮ ಸರ್ಕಾರಿ ಶಾಲಾ ಮಕ್ಕಳು ಇಂಗ್ಲೀಷ್ ಕಲೆಯಬೇಕೆನ್ನುವ ಅಭಿಲಾಷೆ ಈನಿಟ್ಟಿನಲ್ಲಿ ಈಡೇರಲಿ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ ಮಾತನಾಡಿ, ನಮ್ಮ ತಾಲ್ಲೂಕಿನಲ್ಲಿ ಒಟ್ಟು 14 ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಶಾಲೆಗೆ ಅವಕಾಶ ಮಾಡಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪೋಷಕರ ಆಸೆಯಂತೆ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮವನ್ನು ತೆರೆಯಲಾಗಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶದ ಆಸಕ್ತಿವುಳ್ಳ ಪೋಷಕರು ಇದರ ಸದುಪಯೋಗ ಪಡಿಸಿಕೊಂಡು ಮಕ್ಕಳನ್ನು ಶೈಕ್ಷಣಿಕವಾಗಿ ಪ್ರಗತಿಗೆ ಸ್ಪಂದಿಸಬೇಕು ಎಂದರು.

ಈ ಸಂಧರ್ಭದಲ್ಲಿ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸುರೇಶ್, ಸದಸ್ಯ ಶಾಂತರಾಜು, ಸುಶೀಲಾ, ಸ್ವಾಮಿ ನಂಜಪ್ಪ ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾ ಉಪಾಧ್ಯಕ್ಷರು ಬಸ್ತೀಪುರ ರವಿ, ಬಿ.ಆರ್.ಪಿ ಹೀನಾ ಕೌಸರ್, ಇಸಿಓ ಬಸವರಾಜು, ಮುಖ್ಯ ಶಿಕ್ಷಕಿ ಹೇಮಾಕ್ಷಿ, ಸುನಂದಮ್ಮ, ಜಯಲಕ್ಷ್ಮಿ ವಿ, ಜಯಮ್ಮ.ಕೆ, ಸುಧಾರಾಣಿ, ಇದ್ದರು.



ಬಸ್ತೀಪುರ ಬಡಾವಣೆಯಲ್ಲಿ ಬುಧವಾರ ನೂತನವಾಗಿ ಪ್ರಾರಂಭಿಸಲಾಗಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮ ಆಂಗ್ಲ ಶಾಲೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಕನ್ನಡ, ಇಂಗ್ಲೀಷ್ ಟೈಪಿಂಗ್ ಬರುವ ಮತ್ತು ಸಿಎಸ್‌ಸಿ ಸೆಂಟರ್ ಅನುಭವವುಳ್ಳ, ಸಬ್ ರಿಜಿಸ್ಟಾರ್ ಕೆಲಸ ಗೊತ್ತಿರುವವರು ಬೇಕಾಗಿದ್ದಾರೆ. ಸ್ಥಳ : ಆಂದೋಲನ ಸರ್ಕಲ್, ಮುಡಾ ಕಾಂಪ್ಲೆಕ್ಸ್, ರಾಮಕೃಷ್ಣನಗರ
ಮೊ: 8310781679

RESIDENT GRADUATE ENGINEER
Divya Deepa Charitable Trust, Mysuru - a reputed not-for-profit organisation is looking for a Graduate Engineer with excellent communication skills.
www.divyadeepatrust.org
Mob: 9341369901, 8088586087, 9538499901

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

WANTED
LADY RECEPTIONIST - 1 post
LADY HELPER - 1 post
GENTS HAIR DRESSER - 1 post
Age between 18 - 50 years.
#40, 7th Main, Opp. IDBI Bank Double Road, Kuvempunagar, Mysore-570 023.
Mob: 9845034559

WANTED
HELPERS/MESSANGER - 1 year Experience
Qualification : SSLC Pass
Age : 20-30 Years
Interested candidates may send your Resume to finance@starofmysore.com or
9606810101 ☎ 0821-2496520/21
Those who are completed ITI/Diploma courses in 2024-25 can apply for apprentices training.

WANTED
COMPUTER TYPIST (Male) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
For evening: (Male / Female).
9.30 am to 2 pm.
Salary: Rs. 12,000/- per month.
7349337469, 9448525072

MUDA Site for SALE
ಇನ್ಫೋಸಿಸ್ ಪಕ್ಕದ "K.B.L ಸಿಲಿಕಾನ್ ಸಿಟಿ" ಲೇಔಟಿನಲ್ಲಿ ಸೈಟುಗಳು ಲಭ್ಯ.
Mob: 9886048471

ನಿವೃತ್ತ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್
ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ನಿವೃತ್ತ ಕೇಂದ್ರ, ರಾಜ್ಯ, ಬ್ಯಾಂಕ್ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. ವಿದ್ಯಾರ್ಹತೆ : SSLC & Above any Degree
ಸೆಮಿನಾರ್ ನಡೆಯುವ ಸ್ಥಳ : ಮೌರ್ಯ ರೆಸಿಡೆನ್ಸಿ ಹೋಟೆಲ್, ಹರ್ಷ ರಸ್ತೆ, ಮೈಸೂರು-01
ದಿನಾಂಕ : 06-09-2025, ಸಮಯ : 11 ಗಂಟೆಗೆ
ಲಘು ಉಪಹಾರದ ವ್ಯವಸ್ಥೆ ಇದೆ.
Call-9449068132

Highly Reputed Approved Financial Company is offering the opportunity for Retired, VRS, Home Makers Business Persons, Pvt Workers Job available
7892139551

ಕಾಫಿ ಎಸ್ಟೇಟ್ ಮಾರಾಟಕಿದೆ
20 ಎಕರೆ ಕಾಫಿ ಎಸ್ಟೇಟ್ ಕೊಡಗಿನಲ್ಲಿ ಮಾರಾಟಕ್ಕಿದೆ ರೆಸಾರ್ಟ್ ಮಾಡಲು ಸೂಕ್ತವಾಗಿದೆ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
8792306996

ಶ್ರೀ ಗಜಾನನ ಸರ್ವೀಸ್
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 7483296927

"ಶೋಭಾ ಡೆವಲಪರ್ಸ್"
ಸೈಟ್ ಮಾರಾಟಕ್ಕಿದೆ @ "ಶೋಭ ರಿಟ್ರೀಟ್" ಲೇಔಟ್, ಬೋಗಾದಿ ರಸ್ತೆ, ಮೈಸೂರು.
Mob: 9886048471

ಮನೆಗೆ ಅಡುಗೆ ಮಾಡುವ ಮಹಿಳೆ ಬೇಕಿದ್ದಾರೆ
Veg & Non Veg
ದಟ್ಟಗಳ್ಳಿ ತ್ರಿವೇಣಿ ಮಾರ್ಟ್ ಹತ್ತಿರ, ಮೈಸೂರು
ಸಂಬಳ : 21,000
ಊಟ, ವಸತಿ ನೀಡಲಾಗುವುದು
9686280584

MUDA APPROVED SITE FOR SALE
ಇಲವಾಲ ಹತ್ತಿರದ "ಮಯೂರ ಲೇಔಟ್"ನಲ್ಲಿ 20x40 ಅಳತೆ North Face ಸೈಟ್.
Mob: 9886048471

SITE FOR SALE
40x60 North Judicial Layout (Near Christ Public School)
Call-9880273834

R.V. CONSTRUCTIONS
Rate starts from Rs. 1690 per sq.ft.
No advance
Billing on stage by stage completion.
Office: 7975110915
D. Subbaiah Road, Mysore
Assist Major Bank Loans

JOBS
Kadkola Industrial Area
1) Machine Operators -5no B.E. Mech/ I.P, Diploma, ITI
2) Electrical Executive -1no B.E Elec/Diploma
3) Electrical Helper -1no
4) Accounts Executive -1no
Email : job.btcmysore@gmail.com
whatsapp resume
9019323999

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಶ್ರೀ ಸಂಜೀವಿನಿ ಗೋಲ್ಡ್
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ, ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ : 9400(24CT)
9108146123

COFFEE ESTATE FOR SALE
20 Acres Coffee Estate is for sale near Kodagu suitable for Resort
STRICTLY NO BROKERS
8792306996

ದಸರಾ ಹಬ್ಬದ ಪ್ರಯುಕ್ತ ಎಲ್ಲ ಪ್ರವಾಸಗಳು ಎಸಿ ಬಸ್ಸಿನಲ್ಲಿ ಇರುತ್ತದೆ
6 ದಿನಗಳ ಶಿರಡಿ ಪ್ರವಾಸ ಪಂಢರಪುರ, ತ್ರಯಂಬಕೇಶ್ವರ, ಗೃಷ್ಣೇಶ್ವರ, ಭೀಮಾಶಂಕರ, ಮಿನಿ ಬಾಲಾಜಿ, ಕೊಲ್ಹಾಪುರ, ಸವದತ್ತಿ 3/10/25
7 ದಿನಗಳ ಕೇರಳ ಪ್ರವಾಸ ಗುರುವಾಯೂರ್, ಮುನ್ನಾರ್, ಕಾಲಡಿ, ತೇಕಾಡಿ, ಅಲೆಪ್ಪಿ 3/10/25, 6 ದಿನಗಳ ಗೋವಾ ಮತ್ತು ಗೋಕರ್ಣ ಪ್ರವಾಸ, ದಾಂಡೇಲಿ, ದೂಧ್ ಸಾಗರ್, ಸಹಸ್ರಲಿಂಗ 3/10/25,
5 ದಿನಗಳ ಆಂಧ್ರ ಪ್ರದೇಶ ಪ್ರವಾಸ ಮಂತ್ರಾಲಯ, ಹೈದರಾಬಾದ್, ಶ್ರೀ ಶೈಲಂ, ಅಹೋಬಲಂ, ಮಹಾ ನಂದಿ 3/10/25 ಸುವರ್ಣ ಯಾತ್ರ
9480843945 / 9019462508

SITE FOR SALE
40X60 W/F
PARAMANANDHA SAGARA PHASE -1
MUDA APPROVED
RATE : 55 LAKHS
8861220989

SITE FOR SALE
30x40 North Face, Teachers Layout, Basaveshwara Block.
9844300009

REQUIRED
HOSTEL WARDENS
MALE Graduate with relevant experience in a Residential PU College.
Remuneration as per industry norms.
Accommodation with PF & ESI facilities.
Contact:
9108481695

ಶ್ರೀ ಮಣಿಕಂಠ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7022059340

MUDA APPROVED SITE'S FOR SALE @ S.S. LAYOUT
30X40, EAST FACING @ 25 LAKH'S,
40X27, NORTH FACING @ 26.5 LAKHS
NEXT TO LALBAHADUR SHASTHRI NAGAR
OFF T-NARSIPURA MAIN ROAD
7795609173

ಬಸವ ಮಾರ್ಗ ವ್ಯಸನಮುಕ್ತ ಕೇಂದ್ರ (ರಿ)
54ನೇ ಉಚಿತ ಕುಡಿತ ಬಿಡಿಸುವ ಶಿಬಿರ.
ಸೆಪ್ಟೆಂಬರ್ 7 ರಿಂದ 16ರ ವರೆಗೆ.
8803344999
9742559999

HOUSE FOR RENT
Srirampura 2nd Stage, North-East (First Floor).
Contact:
Mob: 7411348841

PGಯಲ್ಲಿ ವಾರ್ಡನ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ
ಕಡ್ಡಾಯವಾಗಿ PGಯಲ್ಲೇ ಉಳಿಯಬೇಕು. ಊಟ, ವಸತಿ ಇರುತ್ತದೆ. ಆಕರ್ಷಕ ಸಂಬಳ
9535744143, 9986622769

ಜೀವನ ಸಂಗಾತಿ
ಒಕ್ಕಲಿಗ, ಕುರುಬ, ಲಿಂಗಾಯತ, ನಾಯಕ, ಎಸ್‌ಸಿ ಎಲ್ಲಾ ಜಾತಿಯ ವಧು-ವರರು, ವಿಧುರ-ವಿಧವೆಯರು, ವಿಚ್ಛೇದಿತರು ಸಂಪರ್ಕಿಸಿ
7411191575

ಬೇಕಾಗಿದ್ದಾರೆ
ಹೋಂ ನರ್ಸ್, ಬಾಣಂತಿ ನೋಡಿಕೊಳ್ಳಲು
ಅನುಭವಸ್ಥರು, ಉತ್ತಮ ವೇತನ, ವಸತಿ ಸೌಲಭ್ಯವಿರುತ್ತದೆ.
50 ವರ್ಷ ಮೇಲ್ಪಟ್ಟವರಾಗಿರಬೇಕು.
ಉಳಿದುಕೊಳ್ಳುವವರು ಮಾತ್ರ
7022470930, 9611366401

ಬೇಕಾಗಿದ್ದಾರೆ
ನಗರದ ಪ್ರತಿಷ್ಠಿತ ಟ್ರಾವೆಲ್ ಏಜೆನ್ಸಿಯಲ್ಲಿ ಕೆಲಸ ಮಾಡಲು ಅನುಭವಿ ಚಾಲಕರು ಬೇಕಾಗಿದ್ದಾರೆ.
ವಯೋಮಿತಿ 40 ವರ್ಷದ ಒಳಗೆ ಆಸಕ್ತರು ಡಿ.ಎಲ್, ಆಧಾರ್ ಕಾರ್ಡ್ ದಾಖಲೆಯೊಂದಿಗೆ ಸಂಪರ್ಕಿಸಿ.
ಸಮಯ ಬೆಳಗ್ಗೆ 10.00 ರಿಂದ ಸಂಜೆ 5.00 ಗಂಟೆ
+91 98452 49401
0821-4005800

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ ಕೆಲಸ ಮಾಡಲು ಹುಡುಗರು (ಪುರುಷರು) ಬೇಕಾಗಿದ್ದಾರೆ ವಸತಿ ಮತ್ತು ಊಟದ ಸೌಲಭ್ಯ ಹಾಗೂ ಆಕರ್ಷಕ ಸಂಬಳವಿರುತ್ತದೆ. ಸಂಪರ್ಕಿಸಿ :
8431315761

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
6361740552
9449408551

ಮಾರಾಟಕ್ಕಿದೆ
ಬಟ್ಟೆ ಅಂಗಡಿ ಮತ್ತು ಸ್ಟೇಷನರಿ ಅಂಗಡಿಗೆ ಉತ್ತಮವಾದ ವುಡನ್ ರ್‍ಯಾಕ್ಸ್ ಮಾರಾಟಕ್ಕಿದೆ.
ಸಂಪರ್ಕಿಸಿ:
Mob: 9902843908

WANTED
Cook cum Property Manager for managing a Homestay near yelwala, Mysore. Couple or single person to stay at the property and manage.
9986742260, 7899165610

SITE FOR SALE
60x40, North facing, Ashwini Gardens, Next to MIT College. Thandavapura, Mysore.
9141576014, 6361406645

SITE FOR SALE
13 Lakhs 20x30, Varuna JSS Layout attached.
Contact:
8970057592, 8618513849

FOR RENT
6 BHK with attached at No. 135, 19th Cross, Vijayanagar 3rd Stage, 'C' Block, Mysore-570 030
Mob: 9663604699

ಸೈಟ್ ಮಾರಾಟಕ್ಕಿದೆ
40x60 ಅಳತೆಯ ಉತ್ತರ ದಿಕ್ಕಿನ ಖಾಲಿ ನಿವೇಶನ ಮಾನಸಿನಗರ (V.T.U) ಕಾಲೇಜ್ ಹತ್ತಿರ, ಬನ್ನೂರು ರಸ್ತೆ, ಮೈಸೂರು.
9739703467, 9686895205

URGENT SITE FOR SALE
Kuberananda Sagara -1
50 ft road South face
Price per sqft 2500/-
902 Total sqft 2783
Contact
1st stg JK 8951144240

ಶ್ರೀ ಲಕ್ಷ್ಮೀದೇವಿ ಸರ್ವೀಸ್
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8296341145

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ.
ಆಸಕ್ತರು ಸಂಪರ್ಕಿಸಿ:
6361056646, 7676844160

SITE FOR SALE
1472 sq.ft., NORTH EAST CORNER
Gateway Mysore near Manipal Hospital, Mysore
Call : 80504 55505

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

SITE WANTED
Sardar Vallabhai patel Nagar, J.S.S Layout, K.S.R.T.C. Layout, IPS Nagar, Measurement; 30x40, 30x50, 40x60
Contact
9663906675

ಬೇಕಾಗಿದ್ದಾರೆ
50 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಸ್ಥಳ : ಹೂಟಗಳ್ಳಿ, ನಂಜನಗೂಡು, ಕಡಕೊಳ, ಮೈಸೂರು.
9035801477
9535708461

PRAKRUTHI PROPERTIES
FOR SALE
30x40@ 22 lakhs Near RT Nagar
BSNL Lyt Sites Also Avl.
Apartments @ Ramakrishna Nagar
Residential & Commercial Plots in & around Mysore
20x30 New 2BHK House, As Per your Plan With Interiors @ Just 42 Lakh in Bogadi
95386 90359, 90359 90359

1 ಲಕ್ಷ 50 ಸಾವಿರದಲ್ಲಿ ಮೈಸೂರಿನಲ್ಲಿ ಸರಳ ಮದುವೆ ಮಾಡಿಸಿಕೊಡಲಾಗುವುದು
- ಮಿನಿ ಫಂಕ್ಷನ್ ಹಾಲ್,
- ತಿಂಡಿ 50 ಜನರಿಗೆ ಊಟ 200 ಜನರಿಗೆ
- ಫ್ಲವರ್ ಡೆಕೋರೇಷನ್,
- ಫೋಟೋ ಆಲ್ಬಮ್ ಮತ್ತು ವಿಡಿಯೋ,
- ವಾದ್ಯ ವೃಂದ
- ಪುರೋಹಿತರು

ಎಲ್ಲವೂ ಸೇರಿ ಕೇವಲ 1,50,000/-ದಲ್ಲಿ
ಮದುವೆ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
ಮೈಸೂರು ಮನೀಶ್ (ಷರತ್ತು ಅನ್ವಯ)
9342183867

ಟೈಲರಿಂಗ್ ತರಬೇತಿ
Limited Offer - * Basic Tailoring * Advance Tailoring * Fashion Trendy Tailoring * Embroidery Works.
ತಕ್ಷಣ ಸಂಪರ್ಕಿಸಿ:
ಗಾನವಿ ಇಂಟರ್‌ನ್ಯಾಷನಲ್, ಮೈಸೂರು
9620636665, 9620476665
9620436665, 6360737581

ಕೆಲಸಕ್ಕೆ ಬೇಕಾಗಿದ್ದಾರೆ
ಕೆಲಸ: ಲ್ಯಾಂಡ್ರಿಯಲ್ಲಿ ಸ್ಟೀಮ್ ಪ್ರೆಸ್ ಮಾಡುವುದು, ಸಮಯ : ಬೆಳಗ್ಗೆ 8ರಿಂದ ರಾತ್ರಿ 7ರವರೆಗೆ
ಸಂಬಳ : 14,000 - 16000
6366396536
ಸ್ಥಳ : ವಿಜಯನಗರ, 4ನೇ ಹಂತ, 2ನೇ ಘಟ್ಟ, ಮೈಸೂರು.

WANTED
Teaching staff for reputed institution English and Spoken English. Transport facilities available Drop your resume through WhatsApp
Contact no
8971577685, 9980631121

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ (SSLC AND ITI) Any Trade
Age limit : 18-40 years,
Salary : 15.000/-, ಸೌಲಭ್ಯ : ESI, PF & Canteen ಸೌಲಭ್ಯವಿರುತ್ತದೆ.
6362491336
7019380847, 9353430078

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಹೌಸ್ ಕೀಪಿಂಗ್ (Housekeeping) ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ ಕೆಲಸದ ಸಮಯ ಬೆಳಿಗ್ಗೆ 9 ರಿಂದ 5.30ರವರೆಗೆ ಬೇಕಾಗಿದ್ದಾರೆ, ವೇತನ 14000.
ESI , PF ಸೌಲಭ್ಯ ಇರುತ್ತದೆ
8951869646 / 9902645646

ತುರ್ತಾಗಿ ಕೆಲಸಕ್ಕೆ ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲೀಷ್ ಡಿಟಿಪಿ ಟೈಪಿಂಗ್ ಅನುಭವವುಳ್ಳ ಮಹಿಳೆಯರು ಕಂಪ್ಯೂಟರ್ ಸಂಪೂರ್ಣ ಜ್ಞಾನವುಳ್ಳವರು, ನೋಟರಿ ಕಛೇರಿ ಕೆಲಸಕ್ಕೆ ಬೇಕಾಗಿರುತ್ತಾರೆ.
ಮೊ.ಸಂಖ್ಯೆ:
9901369901, 0821-3501513

ಸುವರ್ಣಾವಕಾಶ
ಪ್ರಸಿದ್ಧ ಷೋರೂಮ್ ಮತ್ತು ಕಂಪನಿ ಕೆಲಸಕ್ಕೆ, ಯುವಕರು ಮತ್ತು ಯುವತಿಯರು, 22000/- Salary 100% ಗ್ಯಾರೆಂಟಿ ಕೆಲಸ
7337761765

ಸೈಟು / ಮನೆ
ಕೊಳ್ಳಲು / ಮಾರಲು
40X60 ಸೈಟು ಮಾರಾಟಕ್ಕಿದೆ
9538412881

SITE FOR SALE
NORTH PHASE Vijayanagar 4th Stage, 2nd Phase 20x30.
9380338443
9611339705

ನಿವೇಶನ ಮಾರಾಟಕ್ಕಿದೆ
40x100F H.D. ಕೋಟೆ ಟೌನ್‌ನಲ್ಲಿ
9844967934

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕು ಅನುಭವವುಳ್ಳವರಿಗೆ ಹಾಗೂ ಕುವೆಂಪುನಗರ ಸುತ್ತಮುತ್ತ ಇರುವವರಿಗೆ ಆದ್ಯತೆ.
9535370330

WANTED
Telecallers
Kannada, Tamil, Telugu
Male no -5, Female no -8
Receptionist no -2
Suma H R
7829803426, 9880653048

ಮೂಲ ಕ್ರಯಪತ್ರ ಕಳೆದಿದೆ
ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಹನಗೋಡು ಹೋಬಳಿ ಚಿಲ್ಕುಂದ ಗ್ರಾಮದಲ್ಲಿ ವಾಸವಾಗಿರುವ ಲೇಟ್: ಗೋಪಾಲಶೆಟ್ಟಿ @ ಗೋಪಾಲರವರ ಮಗನಾದ ರವಿಕುಮಾರ್ (26 ವರ್ಷ) ಆದ ನಾನು ನನ್ನ ಬಳಿ ಇದ್ದ ಹುಣಸೂರು ತಾಲ್ಲೂಕು ಹನಗೋಡು ಹೋಬಳಿ ಚಿಲ್ಕುಂದ ಗ್ರಾಮದ ಸರ್ವೆ ನಂಬರು 82/2ರ 2-00 ಎಕರೆ ಖುಷ್ಕಿ ಜಮೀನಿಗೆ ಸಂಬಂಧಿಸಿದ ಮೂಲ ಕ್ರಯಪತ್ರದ ಕಳೆದು ಹೋಗಿದೆ ಈ ದಾಖಲಾತಿಗಳು ಯಾರಿಗಾದರೂ ಸಿಕ್ಕಿದಲ್ಲಿ ಸಂಪರ್ಕಿಸಿ:
Mob: 7026137920

SITE FOR SALE
30x45 South Face 60 Feet Road Tripuramba Railway Layout, Nagarthahalli, Mysore, Rate 45 lakh
Ph : 9880746963

ನಿವೇಶನ ಮಾರಾಟಕ್ಕಿದೆ
30X40 ಪೂರ್ವ MUDA ಸೌಪರ್ಣಿಕ ಅಪಾರ್ಟ್‌ಮೆಂಟ್ ಹಿಂಭಾಗ, ವಿಜಯನಗರ 4ನೇ ಹಂತ, ಮೈಸೂರು. ಮಾಲೀಕರು
9591761616

HOUSE FOR RENT
Two Bed Rooms House For Rent, Ground Floor, D.No 55, Gokulam 1st Stage 6th Cross, Near Nirmala Convent, Mysore-2
9986589770, 9986724216

ಬೇಕಾಗಿದ್ದಾರೆ
ಯಲ್ಲೋ ಬೋರ್ಡ್ ಟ್ಯಾಕ್ಸಿ ಡ್ರೈವರ್– 3 ಹುದ್ದೆ (ಅನುಭವವಿರುವವರಿಗೆ ಮಾತ್ರ)
ಸಂಬಳ : 10,000/– ರಿಂದ 12,000/– + ಡ್ರೈವರ್ ಬಾಟಾ
ನೇರ ಸಂದರ್ಶನ : ದಿ ಕೋರಂ ಹೋಟೆಲ್ #2257/1, ವಿನೋಬ ರಸ್ತೆ, ಮೈಸೂರು–570001
Contact
9620274449, 9886577795

ಬೇಕಾಗಿದ್ದಾರೆ
1) ಕೌಂಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
2) ಕುಕ್ ಅಸಿಸ್ಟೆಂಟ್ ಬೇಕಾಗಿದ್ದಾರೆ.
ಸ್ಥಳ : ಹೋಟೆಲ್ ಹನುಮಂತು ಸರಸ್ವತಿಪುರಂ, ಮೈಸೂರು
9738405038

ಪ್ರಮಾಣ ಪತ್ರ
ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಗಂಜಾಂ ಗ್ರಾಮದಲ್ಲಿ ವಾಸವಾಗಿರುವ ಲಕ್ಷ್ಮಿ ಕೋಂ ಟಿ. ಸುರೇಶ್ ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಸರಿಯಾದ ಹೆಸರು ಲಕ್ಷ್ಮಿ ಎಂಬುದಾಗಿದ್ದು, ಎಲ್ಲಾ ದಾಖಲಾತಿ, ಆಧಾರ್ ಕಾರ್ಡ್, ಪಾನ್‌ಕಾರ್ಡ್, ರೇಷನ್ ಕಾರ್ಡಿನಲ್ಲಿ ನನ್ನ ಹೆಸರು ಲಕ್ಷ್ಮಿ ಎಂದೇ ನಮೂದಾಗಿರುತ್ತದೆ. ಆದರೆ ನನ್ನ ಹಳೆಯ ಗುರುತಿನ ಚೀಟಿ ಹಾಗೂ ಪಾಸ್‌ಪೋರ್ಟ್‌ನಲ್ಲಿ ಲಕ್ಷ್ಮಮ್ಮ ಎಂದು ನಮೂದಾಗಿರುತ್ತದೆ. ಹೀಗಾಗಿ ಲಕ್ಷ್ಮಿ ಮತ್ತು ಲಕ್ಷ್ಮಮ್ಮ ಈ ಎರಡೂ ಹೆಸರು ನನ್ನದೇ ಆಗಿರುತ್ತದೆ ಎಂದು ನೋಟರಿ ರವರು ಎದುರು ದಿನಾಂಕ 12-8-2025ರಂದು ಪ್ರಮಾಣೀಕರಿಸಿರುತ್ತೇನೆ. ಸಹಿ/– ಲಕ್ಷ್ಮಿ

SITE FOR SALE
SATAGALLI 'B' ZONE 30X40
Ph : 9844998724
(Broker Excuse)

Site for SALE
30x40 at Ramakrishna Nagar, Rajeev Nagar (Tippu Nagar). 40x60 at Saraswathipuram, Dattagalli, Vivekananda Nagar. 50x80 at Dattagalli.
Call: 7353430309

ಮೈಸೂರು ಮಿತ್ರ
46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕ್ಷೇತ್ರ ವ್ಯಾಪ್ತಿ ರಸ್ತೆಗಳ ದುರಸ್ತಿಗೆ ಆದ್ಯತೆ ಮೇರೆಗೆ ಕ್ರಮ

ಶಾಸಕ ಡಿ.ರವಿಶಂಕರ್ ಭರವಸೆ

ಕೆ.ಆರ್.ನಗರ, ಸೆ.3– ಕ್ಷೇತ್ರ ವ್ಯಾಪ್ತಿ ರಸ್ತೆಗಳ ಗುಂಡಿ ಮುಚ್ಚುವುದರ ಜೊತೆಗೆ ಅಗತ್ಯವಿರುವ ರಸ್ತೆಗಳನ್ನು ದುರಸ್ತಿಪಡಿಸಲು ಆದ್ಯತೆ ಮೇರೆಗೆ ಗಮನ ಹರಿಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಬಡಕನಕೊಪ್ಪಲು, ದೊಡ್ಡಕೊಪ್ಪಲು ಮತ್ತು ಕಾರ್ಗಹಳ್ಳಿ ಕೊಪ್ಪಲು ಗ್ರಾಮಗಳಲ್ಲಿ 6.95 ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಮೊದಲ ಹಂತದಲ್ಲಿ 25 ಕೋಟಿ ಅನುದಾನ ನೀಡಿದ್ದು, ಅದನ್ನು ಸದ್ಬಳಕೆ ಮಾಡಿಕೊಂಡು ಉತ್ತಮವಾಗಿ ಕೆಲಸ ನಿರ್ವಹಿಸುತ್ತೇನೆ ಎಂದರು.

ಬಡಕನಕೊಪ್ಪಲು ಗ್ರಾಮ ಪರಿಮಿತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ 1 ಕೋಟಿ ಹಾಗೂ ಕಾರ್ಗಹಳ್ಳಿ ಕೊಪ್ಪಲು ಮತ್ತು ದೊಡ್ಡಕೊಪ್ಪಲು ಗ್ರಾಮಗಳ ಪರಿಮಿತಿ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ 1 ಕೋಟಿ ಅನುದಾನ ನೀಡಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ಒದಗಿಸಿ ಕಾಮಗಾರಿ ಪೂರ್ಣಗೊಳಿಸಲಾಗುತ್ತದೆ ಎಂದರು.

ಜೊತೆಗೆ ಚಾಮರಾಜ ಎಡದಂಡೆ ನಾಲೆಯ 10ನೇ ಬ್ರಾಂಚ್‌ನ ಕೊನೆ ಭಾಗದಲ್ಲಿ ಚರಂಡಿ ಮತ್ತು ರಕ್ಷಣಾ ಕಾಮಗಾರಿಗೆ 4.90 ಕೋಟಿ ಅನುದಾನ ನೀಡಲಾಗಿದೆ. ಗ್ರಾಮಸ್ಥರ ಮನವಿಯಂತೆ ಬೀರೇಶ್ವರ ದೇವಾಲಯದ ಸುತ್ತ ಕಾಂಪೌಂಡ್ ನಿರ್ಮಾಣಕ್ಕೆ ಹಣ ನೀಡಲಾಗುತ್ತದೆ. ಸಾರ್ವಜನಿಕರು ಕಾಮಗಾರಿಗಳು ನಡೆಯುವಾಗ ಪರಿಶೀಲಿಸಿ ಯಾವುದೇ ಸಮಸ್ಯೆ ಮತ್ತು ದೂರುಗಳಿದ್ದರೂ ನನ್ನ ಹಾಗೂ ಅಧಿಕಾರಿಗಳ ಗಮನಕ್ಕೆ ತರಬೇಕೆಂದರು.



ದೊಡ್ಡಕೊಪ್ಪಲು ಗ್ರಾಮದಲ್ಲಿ ಕೈಗೊಂಡಿರುವ ಚಾಮರಾಜ ನಾಲೆ ಮತ್ತು ಗ್ರಾಮ ಪರಿಮಿತಿ ರಸ್ತೆ ಕಾಮಗಾರಿಗಳ ಪರಿಶೀಲನಾ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಇದಕ್ಕೂ ಮೊದಲು ಶಾಸಕರು ಬಡಕನಕೊಪ್ಪಲು ಗ್ರಾಮ ಪರಿಮಿತಿಯಲ್ಲಿ ಕೈಗೊಂಡಿರುವ ರಸ್ತೆ ಮತ್ತು ಚರಂಡಿ ಕಾಮಗಾರಿ ಪರಿಶೀಲಿಸಿ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಕೆಲಸ ನಿರ್ವಹಣೆ ಸಂಬಂಧ ಹಲವು ಸಲಹೆ ಮತ್ತು ಸೂಚನೆಗಳನ್ನು ನೀಡಿದರು.

ಈ ವೇಳೆ ಅಡಗೂರು ಗ್ರಾಪಂ ಅಧ್ಯಕ್ಷ ಈರೇಗೌಡ, ಹೊಸ ಅಗ್ರಹಾರ ಗ್ರಾಪಂ ಅಧ್ಯಕ್ಷ ಮಲ್ಲಿಕಾರ್ಜುನ, ಎಪಿಎಂಸಿ ಮಾಜಿ ಅಧ್ಯಕ್ಷ ಹೆಚ್.ಪಿ.ಪ್ರಶಾಂತ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್, ಸದಸ್ಯ ಮಹದೇವನಾಯಕ, ತಾಲೂಕು ಕುರುಬರ ಸಂಘದ ನಿರ್ದೇಶಕ ಕೆ.ಹೆಚ್.ಬುಡೀಗೌಡ, ತಾಲೂಕು ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಡಿ.ಸಿ.ರವಿ, ಜಿ.ಸುರೇಂದ್ರಮೂರ್ತಿ, ತಾಪಂ ಇಓ ವಿ.ಪಿ.ಕುಲದೀಪ್, ಮುಖಂಡರಾದ ಶ್ರೀನಿವಾಸ್, ಜಾಣೇಗೌಡ, ಸಂಪತ್, ಸಾಕರಾಜು, ಗುತ್ತಿಗೆದಾರ ರಾಜು, ಜಲ ಸಂಪನ್ಮೂಲ ಇಲಾಖೆ ಸಾಲಿಗ್ರಾಮ ವಿಭಾಗದ ಕಾರ್ಯಪಾಲಕ ಅಭಿಯಂತರ ಕುಶಕುಮಾರ್, ಕೆ.ಆರ್.ನಗರ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಆನಂದ್‌ರಾಜ್, ಸಹಾಯಕ ಅಭಿಯಂತರ ಕಿರಣ್, ಪಂಚಾಯತ್ ರಾಜ್ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ವಿನುತ್, ಸಹಾಯಕ ಅಭಿಯಂತರ ರವಿಕುಮಾರ್ ಮತ್ತಿತರರಿದ್ದರು.

ಕೋಟೆ, ಸರಗೂರು ಛಾಯಾಗ್ರಾಹಕರ ಸಂಘಕ್ಕೆ ನಿವೇಶನ ಮಂಜೂರು

ವಿಶ್ವ ಛಾಯಾಗ್ರಾಹಣ ದಿನಾಚರಣೆಯಲ್ಲಿ ಶಾಸಕ ಅನಿಲ್

ಹೆಚ್.ಡಿ.ಕೋಟೆ, ಸೆ.3– ಹೆಚ್.ಡಿ.ಕೋಟೆ, ಸರಗೂರು ತಾಲೂಕು ಛಾಯಾಗ್ರಾಹಕರ ಸಂಘಕ್ಕೆ ನಿವೇಶನ ಮಂಜೂರು ಮಾಡಿದ್ದೇನೆ ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆದ 186ನೇ ವಿಶ್ವ ಛಾಯಾಗ್ರಾಹಣ ದಿನಾಚರಣೆಯನ್ನು ಕ್ಯಾಮರಾ ಕ್ಲಿಕ್ಕಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಛಾಯಾಗ್ರಾಹಕರ ಹಲವು ವರ್ಷಗಳ ಬೇಡಿಕೆಯನ್ನು ನಿವೇಶನ ಮಂಜೂರು ಮಾಡುವ ಮೂಲಕ ಈಡೇರಿಸಿದ್ದೇನೆ. ಪುರಸಭಾಧ್ಯಕ್ಷೆ ಶಿವಮ್ಮ ಅವರ ಸಮ್ಮುಖದಲ್ಲಿ ನಿವೇಶನ ಮಂಜೂರಾತಿ ಪತ್ರವನ್ನು ಸಂಘದ ತಾಲೂಕು ಅಧ್ಯಕ್ಷ ರವಿಕುಮಾರ್ ಆರಾಧ್ಯ ಅವರಿಗೆ ನೀಡಲಾಗುವುದು. ಹೆಚ್.ಡಿ.ಕೋಟೆ, ಸರಗೂರು ತಾಲೂಕು ಛಾಯಾಗ್ರಾಹಕರ ಸಂಘ ಉತ್ತಮವಾಗಿ ಬೆಳೆದಿದ್ದು, ರಾಜ್ಯದಲ್ಲೇ ನಂ.1 ಸಂಘ ಎಂದು ಹೆಸರು ಪಡೆದಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಉತ್ತಮ ಭವನ ನಿರ್ಮಾಣ ಮಾಡಿ ಭವನದಲ್ಲಿ ಛಾಯಾಗ್ರಾಹಕರಿಗೆ ತರಬೇತಿ ಹಾಗೂ ಹೊರಗಿನಿಂದ ಬಂದ ಛಾಯಾಗ್ರಾಹಕರಿಗೆ ತಂಗುದಾಣ ಮಾಡುವ ಜೊತೆಗೆ ಸುಸಜ್ಜಿತ ಭವನ ನಿರ್ಮಿಸಲಾಗುವುದು ಎಂದರು.

ಛಾಯಾಗ್ರಾಹಕ ಸಂಘದ ತಾಲೂಕು ಅಧ್ಯಕ್ಷ ರವಿಕುಮಾರ್ ಆರಾಧ್ಯ ಮಾತನಾಡಿದರು. ಇದೇ ವೇಳೆ ಛಾಯಾಚಿತ್ರ ಪ್ರದರ್ಶನ ನಡೆಯಿತು. ಉತ್ತಮ ಛಾಯಾಚಿತ್ರ ತೆಗೆದ ಛಾಯಾಗ್ರಾಹಕರಿಗೆ ಬಹುಮಾನ ವಿತರಿಸಲಾಯಿತು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಫಲಿತಾಂಶ ಪಡೆದ ಛಾಯಾಗ್ರಾಹಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಹಿರಿಯ ಛಾಯಾಗ್ರಾಹಕರಾದ ಸೋಮಶೇಖರ್, ಶಾಲಿನಿ, ತ್ರಿಶಂಭು ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಶಾಸಕ ಅನಿಲ್ ಸಂಘಕ್ಕೆ ಮಂಜೂರಾದ ನಿವೇಶನ ಪತ್ರವನ್ನು ಸಂಘದ ಅಧ್ಯಕ್ಷರಿಗೆ ವಿತರಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಪುರಸಭಾಧ್ಯಕ್ಷೆ ಶಿವಮ್ಮ ಚಾಕಳ್ಳಿ ಕೃಷ್ಣ, ಕೆಪಿಎ ಬೆಂಗಳೂರು ಅಧ್ಯಕ್ಷ ನಾಗೇಶ್, ಗೌರವಾಧ್ಯಕ್ಷ ಕಾಶಿ ಮಹೇಶ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಧುದೇವಯ್ಯ, ಆದಿಕರ್ನಾಟಕ ಮಹಾಸಭಾಧ್ಯಕ್ಷ ಶಿವರಾಜ್, ವನ್ಯಜೀವಿ ಛಾಯಾಗ್ರಾಹಕರಾದ ರವಿಶಂಕರ್, ಪರಮೇಶ, ವಿಜಯ್, ಛಾಯಾಗ್ರಾಹಕ ಸಂಘದ ಮಾಜಿ ಜಿಲ್ಲಾಧ್ಯಕ್ಷ ಭರಣಿ ಮಹೇಶ್, ಅಂತಾರಾಷ್ಟ್ರೀಯ ಕ್ರೀಡಾಪಟು ಪೊಲೀಸ್ ಇಲಾಖೆಯ ಎಂ.ಡಿ.ನಾಗೇಂದ್ರ ಲಿಂಗರಾಜು, ಧನಂಜಯ, ಮೋಹನ್, ಪ್ರಧಾನ ಕಾರ್ಯದರ್ಶಿ ಕೆ.ಬೆಳ್ತೂರು ಕೃಷ್ಣ, ಗೌರವಾಧ್ಯಕ್ಷ ಕಾಶಿ ಮಹೇಶ್, ಉಪಾಧ್ಯಕ್ಷ ಹೆಗ್ಗಡಪುರ ಕುಮಾರ, ಕಾರ್ಯಾಧ್ಯಕ್ಷ ಕಾಳಾಚಾರಿ, ಸಹ ಕಾರ್ಯದರ್ಶಿ ಚಾಕಳ್ಳಿ ಸುರೇಶ, ಖಜಾಂಚಿ ಪರಮೇಶ್‌ಗೌಡ, ಸಲಹೆಗಾರ ಸತೀಶ್ ಬಿ.ಆರಾಧ್ಯ, ನಿರ್ದೇಶಕರಾದ ಸೋಮೇಶ್ ಶಾಲಿನಿ, ಶ್ರೀನಿವಾಸ್, ಚಿಕ್ಕನಾಯಕ, ಗುರು ಆಚಾರ್, ಛಾಯಾಗ್ರಾಹಕರ ಕುಟುಂಬದವರು ಹಾಜರಿದ್ದರು.



ಕಾರ್ಯಕ್ರಮವನ್ನು ಶಾಸಕ ಅನಿಲ್ ಉದ್ಘಾಟಿಸಿದರು.

> ಜಂಗಲ್ ಲಾಡ್ಜ್ ವತಿಯಿಂದ ರಾಜ್ಯಾದ್ಯಂತ ವೈಲ್ಡ್ ಲೈಫ್ ಛಾಯಾಚಿತ್ರ ಪ್ರದರ್ಶನ ಆಯೋಜಿಸಲಾಗುವುದು. ಮುಂದಿನ ತಿಂಗಳೊಳಗೆ ಎಲ್ಲಾ ಜಿಲ್ಲೆಯ ಅಧ್ಯಕ್ಷರ ಸಭೆ ಕರೆದು ದಿನಾಂಕ ನಿಗದಿಪಡಿಸಲಾಗುವುದು. ಮೊದಲ ಬಹುಮಾನ 1 ಲಕ್ಷ, ದ್ವಿತೀಯ ಬಹುಮಾನ 50 ಸಾವಿರ, ತೃತೀಯ ಬಹುಮಾನ 25 ನಿಗದಿ ಪಡಿಸಲಾಗಿದೆ. ಕೋಟೆ ಅರಣ್ಯ ಭಾಗದಿಂದ ಉತ್ತಮ ಚಿತ್ರಗಳನ್ನು ತೆಗೆಯುವ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಛಾಯಾಚಿತ್ರ ಪ್ರದರ್ಶನದಲ್ಲಿ ಭಾಗವಹಿಸಿ. – ಅನಿಲ್, ಶಾಸಕ.

ಹುಣಸೂರು ಟಿಎಪಿಸಿಎಂಎಸ್‌ಗೆ 20.51 ಲಕ್ಷ ನಿವ್ವಳ ಲಾಭ

ಹುಣಸೂರು, ಸೆ.3– ತಾಲೂಕಿನ ಟಿಎಪಿಸಿಎಂಎಸ್ 2024–25ನೇ ಸಾಲಿನಲ್ಲಿ 51.13 ಲಕ್ಷ ರೂ. ವಹಿವಾಟು ನಡೆಸಿ 20.51 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಹೆಚ್.ಟಿ.ಬಾಬು ತಿಳಿಸಿದರು.

ನಗರದ ಪರಸಯ್ಯನ ಛತ್ರದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘವು ಉತ್ತಮ ವಹಿವಾಟು ನಡೆಸುತ್ತಿದೆ. ಹಳೇ ರೈಸ್‌ಮಿಲ್ ಆವರಣದ ಮುಂಭಾಗ ಕೋಟಿ ರೂ. ವೆಚ್ಚದಲ್ಲಿ ಮಳಿಗೆ ನಿರ್ಮಿಸಿ ಬಾಡಿಗೆಗೆ ನೀಡಿದ್ದು, ಗೋದಾಮು, ಮಳಿಗೆಗಳು ಹಾಗೂ ಹಾಲಿ ಜಾಗದ ಬಾಡಿಗೆ ತಿಂಗಳಿಗೆ 1.73 ಲಕ್ಷ ರೂ. ಸೇರಿದಂತೆ ವಿವಿಧ ಮೂಲಗಳಿಂದ ಆದಾಯ ಬರುತ್ತಿದೆ ಎಂದರು.

ಹಳೇ ಸಾಲ ಬಾಕಿ: ಕಳೆದ 35 ವರ್ಷಗಳ ಹಿಂದೆ ಸದಸ್ಯರು ಪಡೆದ ಸಾಲ 29.77 ಲಕ್ಷ ರೂ. ಪಾವತಿಸಬೇಕಿದ್ದು, ಕಳೆದ ವಾರ್ಷಿಕ ಮಹಾಸಭೆಯಲ್ಲಿ ಈ ಸಾಲ ಕೈಬಿಡಲು ತೀರ್ಮಾನಿಸಲಾಗಿತ್ತು. ಆದರೆ ಸಹಕಾರ ಇಲಾಖೆ ಅಧಿಕಾರಿಗಳು ಹಾಗೇ ಮನ್ನಾ ಮಾಡಲು ಬರುವುದಿಲ್ಲ. ಮತ್ತೊಮ್ಮೆ ಮಹಾಸಭೆಯಲ್ಲಿ ಮಂಡಿಸುವಂತೆ ಸೂಚಿಸಿದ ಬಗ್ಗೆ ಸಭೆಯಲ್ಲಿ ಪ್ರಸ್ತಾಪವಾಗುತ್ತಿದ್ದಂತೆಯೇ ಸದಸ್ಯರಾದ ಶ್ರೀನಿವಾಸೇಗೌಡ, ಚಂದ್ರಣ್ಣ, ಚನ್ನೇಗೌಡ ಸೇರಿದಂತೆ ಅನೇಕ ಸದಸ್ಯರು ಬಾಕಿ ವಸೂಲಿಗೆ ಕ್ರಮ ಕೈಗೊಳ್ಳಿ ಎಂದು ಒತ್ತಾಯಿಸಿದರು.



ಸಭೆಯನ್ನು ಟಿಎಪಿಸಿಎಂಎಸ್ ಅಧ್ಯಕ್ಷ ಹೆಚ್.ಟಿ.ಬಾಬು ಉದ್ಘಾಟಿಸಿದರು.

ಸಿಇಓ ಹೇಮಲತಾ ಮಾತನಾಡಿ, ಸಾಕಷ್ಟು ಬಾರಿ ಸಾಲ ಮರು ಪಾವತಿಸುವಂತೆ ನೋಟೀಸ್ ನೀಡಿದ್ದರೂ ವಿಳಾಸದಲ್ಲಿ ಇಲ್ಲ ಎಂದು ವಾಪಸ್ ಬಂದಿದೆ ಎಂದು ಸ್ಪಷ್ಟನೆ ನೀಡಿದರು. ಈ ವೇಳೆ ಸದಸ್ಯ ಕೆ.ಸಿ.ರಾಮಕೃಷ್ಣ ಕಳೆದ ಸಭೆಯಲ್ಲಿ ಶಾಸಕರು ಸಾಲ ಮನ್ನಾ ಮಾಡುವಂತೆ ಸಲಹೆ ನೀಡಿದ್ದರು. ಅದರಂತೆ ಆಗಲಿ ಎಂದಾಗ ಹಲವು ಸದಸ್ಯರು ವಸೂಲಿಗೆ ಕ್ರಮವಾಗಬೇಕೆಂದು ಆಗ್ರಹಿಸಿದ್ದರಿಂದ ಯಾವುದೇ ತೀರ್ಮಾನ ಕೈಗೊಳ್ಳಲಾಗಲಿಲ್ಲ.

ಮರಣ ನಿಧಿ ಹೆಚ್ಚಿಸಿ: ಸದಸ್ಯರಾದ ನಾಗರಾಜಪ್ಪ, ಚನ್ನೇಗೌಡ, ಕಾಳಪ್ಪ ಮತ್ತಿತರರು ಮರಣ ನಿಧಿಯನ್ನು 10 ಸಾವಿರಕ್ಕೆ ಹೆಚ್ಚಿಸಬೇಕೆಂಬ ಒತ್ತಾಯಕ್ಕೆ ಉಪಾಧ್ಯಕ್ಷ ರೇವಣ್ಣ, ನಿರ್ದೇಶಕ ಬಸವಲಿಂಗಯ್ಯ ಮರಣ ನಿಧಿಯ ತಲಾ 500 ರೂ. ವಂತಿಕೆಯನ್ನು ಕೇವಲ 200 ಸದಸ್ಯರು ಮಾತ್ರ ಪಾವತಿಸಿದ್ದು, ಸದಸ್ಯರು ಪಾವತಿಸಿದಲ್ಲಿ ಹೆಚ್ಚಿಸಲು ಸಹಕಾರಿಯಾಗಲಿದೆ ಎಂದು ಸ್ಪಷ್ಟನೆ ನೀಡಿದರು.

ಸಭೆಯಲ್ಲಿ ನಿರ್ದೇಶಕರಾದ ಬಸವಲಿಂಗಯ್ಯ, ಕಲ್ಕುಣಿಕೆರಮೇಶ. ನಾಗರಾಜು, ಕೆಂಪೇಗೌಡ, ಚಂದ್ರಶೇಖರ್, ವೆಂಕಟೇಶ್, ಇಂದುಕಲಾ, ಮಂಗಳಗೌರಿ, ಸುಜಾತ, ಸಿಇಓ ಹೇಮಲತಾ, ಸದಸ್ಯರು ಹಾಗೂ ಸಿಬ್ಬಂದಿವರ್ಗ ಭಾಗವಹಿಸಿದ್ದರು.

ಪ್ರತಿಯೊಬ್ಬ ವಿದ್ಯಾರ್ಥಿಯು ಕ್ರೀಡೆಯಲ್ಲಿ ಭಾಗವಹಿಸಿ

ಬೆಟ್ಟದಪುರ, ಸೆ.3– ಆರೋಗ್ಯಕರ ಜೀವನಕ್ಕೆ ಕ್ರೀಡೆ ನೆರವಾಗಲಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಕ್ರೀಡೆಯಲ್ಲಿ ಭಾಗವಹಿಸಬೇಕು ಎಂದು ಕನ್ನಡ ಮಠದ ಶ್ರೀಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ನುಡಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಶಿಕ್ಷಣ ಇಲಾಖೆ ಹಾಗೂ ಎಸ್‌ಎಂಎಸ್ ವಿದ್ಯಾಸಂಸ್ಥೆ ಸಹಯೋಗದಲ್ಲಿ ನಡೆದ ಹೋಬಳಿ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟದಲ್ಲಿ ಮಾತನಾಡಿದ ಅವರು, ಕ್ರೀಡೆಯಲ್ಲಿ ಸೋಲನ್ನು ಕಂಡಾಗ ನಿರಾಸೆಯಾಗಬಾರದು. ಮತ್ತೆ ಸಿಗುವ ಅವಕಾಶ ಸದುಪಯೋಗಪಡಿಸಿಕೊಂಡು, ಕಠಿಣ ಶ್ರಮ ವಹಿಸಿ ಅಭ್ಯಾಸ ಮಾಡಿದರೆ ಜಯಗಳಿಸಲು ಸಾಧ್ಯ ಎಂದರು.

ಬಿಇಓ ರವಿಪ್ರಸನ್ನ ಮಾತನಾಡಿ, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು. ಸೋಲು ಗೆಲುವಿಗಿಂತ ಕ್ರೀಡೆಯಲ್ಲಿ ಪಾಲ್ಗೊಳ್ಳುವಿಕೆ ಮುಖ್ಯ. ಉತ್ತಮ ಆರೋಗ್ಯಕ್ಕೆ ಕ್ರೀಡಾ ಚಟುವಟಿಕೆ ಅವಶ್ಯಕ. ಮಕ್ಕಳಿಂದ ಹಿಡಿದು ಎಲ್ಲಾ ವಯಸ್ಸಿನವರೂ ಕ್ರೀಡೆಯಲ್ಲಿ ಭಾಗವಹಿಸಬೇಕು. ಇದರಿಂದ ಆರೋಗ್ಯ ಸುಧಾರಿಸಿಕೊಳ್ಳಬಹುದು. ಇದರಿಂದ ನಮ್ಮ ಜೀವನ ಶೈಲಿ ಬದಲಾಗುತ್ತದೆ ಎಂದರು.



ಕ್ರೀಡಾಕೂಟದ ಜ್ಯೋತಿಯನ್ನು ಕನ್ನಡ ಮಠದ ಶ್ರೀಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ಸ್ವೀಕರಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷ ರಾಜಶೇಖರ್, ಎಸ್‌ಐ ಅಜಯ್ ಕುಮಾರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣೇಗೌಡ, ಮುಖ್ಯಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ನಾಗಶೆಟ್ಟಿ, ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ದೇವರಾಜು, ಅನುದಾನಿತ ಶಾಲೆಯ ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ಕಿಶೋರ್, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಸುರೇಶ್ ನಾಯಕ, ಎಸ್‌ಎಂಎಸ್ ವಿದ್ಯಾಸಂಸ್ಥೆ ಅಧ್ಯಕ್ಷ ಬಿ.ವಿ.ಮಂಜುನಾಥ್, ಕಾರ್ಯದರ್ಶಿ ಛಾಯ, ದೈಹಿಕ ಪರಿವೀಕ್ಷಕ ರಮೇಶ್, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳಾದ ಚಂದ್ರಶೇಖರ್, ಸುರೇಶ್, ಪ್ರಾಂಶುಪಾಲ ರಾಜು, ವಿವಿಧ ಶಾಲೆಯ ಮುಖ್ಯಶಿಕ್ಷಕರಾದ ಮಹೇಶ್, ಮೇರಿ, ವೆಂಕಟೇಶ್, ದೇವರಾಜು, ವಿಜಯಕುಮಾರ್, ಮುಖಂಡ ಬಸವರಾಜು ಸೇರಿದಂತೆ ಇದ್ದರು.

ಶಾಸಕ ಜಿಟಿಡಿ ಪ.ಜಾತಿ/ಪಂಗಡ ವಿರೋಧಿಯಲ್ಲ



ತಿ.ನರಸೀಪುರ, ಸೆ.3– ಮಾಜಿ ಸಚಿವ, ಶಾಸಕ ಜಿ.ಟಿ.ದೇವೇಗೌಡರು ಪ.ಜಾತಿ/ ಪಂಗಡ ವಿರೋಧಿಯಲ್ಲ ಎಂದು ತಾಲೂಕಿನ ಸೋಮನಾಥಪುರ ಪಿಎಸಿಎಸ್ ನಿರ್ದೇಶಕ ಶ್ರೀರಂಗರಾಜಪುರ ಎಂ.ಸಿದ್ದರಾಜು ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಹಕಾರಿ ಕ್ಷೇತ್ರದಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಹೆಗ್ಗಳಿಕೆ ಹೊಂದಿರುವ ಜಿ.ಟಿ.ದೇವೇಗೌಡರು ವಿಧಾನಸಭೆ ಅಧಿವೇಶನದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಮೀಸಲಾತಿ ನೀಡುವ ಸಂಬಂಧ ನೀಡಿರುವ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿ ಅವರನ್ನು ಎಸ್ಸಿ/ಎಸ್ಟಿಗಳ ವಿರೋಧಿ ಎಂಬಂತೆ ಬಿಂಬಿಸಲಾಗಿದೆ. ವಾಸ್ತವದಲ್ಲಿ ಸಹಕಾರಿ ಸಂಘಗಳಲ್ಲಿ ಮೀಸಲಾತಿ ನೀಡುವ ಸರ್ಕಾರ ಷೇರುದಾರರಾಗುವ ಪರಿಶಿಷ್ಟರ ಆಸ್ತಿ ವಿವರವನ್ನು ಕೇಳುವುದರಿಂದ ಸಂಘಗಳನ್ನು ಮುಚ್ಚುವ ಸ್ಥಿತಿ ಬರುತ್ತದೆ ಎಂಬುದನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದಾರೆ ಎಂದಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಜಿ.ಟಿ.ದೇವೇಗೌಡರು, ಸ್ಥಳೀಯ ಅಧಿಕಾರ ಹಂಚಿಕೆ ಹಾಗೂ ಮನೆಯಲ್ಲೂ ಪ.ಜಾತಿ ಮತ್ತು ಪಂಗಡದ ಜನರಿಗೆ ಮುಕ್ತ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಮೀಸಲು ಕ್ಷೇತ್ರಗಳಿಂದ ಶಾಸಕ, ಸಚಿವ ಹಾಗೂ ಸಂಸದ ಆಗಿರುವವರ ಮನೆ ಬಾಗಿಲು ಜನರಿಗೆ ಬಂದ್ ಆಗಿರುವಂತಹ ಪ್ರಸ್ತುತ ದಿನಗಳಲ್ಲಿ ದೇವೇಗೌಡರ ಜನರೊಂದಿಗಿನ ಸ್ಪಂದನೆ ಹಾಗೂ ಭೇಟಿಯಾಗಲು ಅವಕಾಶ ನೀಡುವುದು ನಿಜಕ್ಕೂ ಮಾದರಿಯಾಗಿದೆ. ಹಾಗಾಗಿ ವಿಧಾನಸಭೆ ಅಧಿವೇಶನದಲ್ಲಿನ ಹೇಳಿಕೆ ಮುಂದಿಟ್ಟುಕೊಂಡು ಪರಿಶಿಷ್ಟರ ವಿರೋಧಿ ಎಂಬಂತೆ ಬಿಂಬಿಸುತ್ತಿರುವುದು ಸರಿಯಲ್ಲವೆಂದು ಎಂ.ಸಿದ್ದರಾಜು ತಿಳಿಸಿದ್ದಾರೆ.

ಸೆ.11, ವಾರ್ಷಿಕ ಮಹಾಸಭೆ

ಕಂಪಲಾಪುರ, ಸೆ.3– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸೆ.11 ರಂದು ಬೆಳಗ್ಗೆ 10 ಗಂಟೆಗೆ ಅಧ್ಯಕ್ಷ ಮಹದೇವ್ ಅಧ್ಯಕ್ಷತೆಯಲ್ಲಿ ಸಂಘದ ಆವರಣದಲ್ಲಿ ನಡೆಯಲಿದೆ. ಆಡಳಿತ ಮಂಡಳಿ ಹಾಗೂ ಸಂಘದ ಸದಸ್ಯರು ಸಭೆಗೆ ಆಗಮಿಸಬೇಕೆಂದು ಸಿಇಓ ಕೆ.ಎನ್.ಹರ್ಷ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೀಕ್ಷಾ ಭೂಮಿಗೆ ತೆರಳಲು ಅರ್ಜಿ ಆಹ್ವಾನ

ನಂಜನಗೂಡು, ಸೆ.3– ಪ್ರಸಕ್ತ ಸಾಲಿನಲ್ಲಿ ಮಹಾರಾಷ್ಟ್ರದ ನಾಗಾಪುರದ ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಬಸ್ಸುಗಳ ವ್ಯವಸ್ಥೆಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮಾಡಲಾಗುತ್ತಿದ್ದು, ಆಸಕ್ತ ಯಾತ್ರಾರ್ಥಿಗಳು ಇಲಾಖೆ ವೆಬ್‌ಸೈಟ್: https://swd.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಸೆ.9 ಕೊನೆ ದಿನ ಎಂದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸುನೀಲ್ ಬೋಸ್‌ಗೆ ಸನ್ಮಾನ

ಸಂಸದ ಸುನೀಲ್ ಬೋಸ್ ಅವರನ್ನು ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದಿಂದ ಸನ್ಮಾನಿಸಿ, ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಬಳಗದ ಗೌರವಾಧ್ಯಕ್ಷ ಸ್ವಾಮಿ, ರಾಜ್ಯಾಧ್ಯಕ್ಷ ನಂಜುಂಡ, ಕಾರ್ಯಾಧ್ಯಕ್ಷ ಬಸವರಾಜು, ಉಪಾಧ್ಯಕ್ಷ ಭರತ್, ಜಿಲ್ಲಾಧ್ಯಕ್ಷ ಕೆ.ಎಂ.ಮಧುಕುಮಾರ್, ಪ್ರಧಾನ ಕಾರ್ಯದರ್ಶಿ ನಾಗರಾಜು, ಮಾಧ್ಯಮ ಸಲಹೆಗಾರ ಮಂಜುನಾಥ್, ನಿರ್ದೇಶಕರಾದ ಮಹೇಶ್, ನಾಗೇಶ್, ಬಾಬು, ಹರೀಶ್, ಚಾಮರಾಜನಗರ ಜಿಲ್ಲಾಧ್ಯಕ್ಷ ಮಾಲಂಗಿ ಮಹೇಶ್ ಇತರರಿದ್ದರು.

ರೈತರಿಗೆ ಸಹಕಾರ ಸಂಘ ದಾರಿದೀಪವಾಗಿದೆ

ಮಲ್ಲುಂಡಿ, ಸೆ.3– ರೈತರಿಗೆ ಸಹಕಾರ ಸಂಘ ದಾರಿದೀಪವಾಗಿದೆ ಎಂದು ಕಸುವಿನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ಚಿನ್ನಸ್ವಾಮಿ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಕೃಷಿ ಉದ್ದೇಶಗಳಿಗೆ ಸಾಕಷ್ಟು ಸಾಲ ಸೌಲಭ್ಯ ನೀಡಲಾಗುತ್ತಿದೆ. ಷೇರುದಾರರ ಸಹಕಾರದಿಂದ ಸಂಘ 5,24,755 ರೂ. ನಿವ್ವಳ ಲಾಭಗಳಿಸಿದೆ. ಸಾಲ ಪಡೆದ ರೈತರು ಸಕಾಲದಲ್ಲಿ ಮರು ಪಾವತಿಸಿದಾಗ ಇನ್ನೂ ಹೆಚ್ಚಿನ ಲಾಭ ಬರಲಿದೆ. ಹೀಗಾಗಿ ಸಾಲ ಪಡೆಯುವುದು ದೊಡ್ಡದಲ್ಲ. ನಿಗದಿತ ಸಮಯದಲ್ಲಿ ಮರುಪಾವತಿಸಿದಾಗ ಮತ್ತೊಬ್ಬರಿಗೆ ಸಾಲ ಸೌಲಭ್ಯ ನೀಡಲು ಸಾಧ್ಯವಾಗುತ್ತದೆ.



ಸಭೆಯನ್ನು ಸಂಘದ ಅಧ್ಯಕ್ಷ ಚಿನ್ನಸ್ವಾಮಿ ಉದ್ಘಾಟಿಸಿದರು.

ಜಿಲ್ಲಾ ಸಹಕಾರ ಸಂಘ ನಮ್ಮ ಸಂಘವನ್ನು ಅತ್ಯುನ್ನತ ಸಂಘ ಎಂದು ಗುರುತಿಸಿ ಪ್ರಶಸ್ತಿ ನೀಡಿರುವುದು ಸಂತೋಷದ ವಿಚಾರ. ಇದಕ್ಕಾಗಿ ಎಲ್ಲಾ ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದ ಅವರು ಮುಂದಿನ ದಿನಗಳಲ್ಲಿ ರೈತರು ತಾವು ಪಡೆದ ಸಾಲವನ್ನು ನಿಗದಿತ ಸಮಯಕ್ಕೆ ಮರುಪಾವತಿ ಮಾಡಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದರು.

ಈ ವೇಳೆ ಸಂಘದ ಸಿಇಓ ಜಿ.ಶಿವಕುಮಾರ್ ವಾರ್ಷಿಕ ವರದಿ ಮಂಡಿಸಿದರು. ಸಂಘದ ಉಪಾಧ್ಯಕ್ಷ ಆರ್.ಅರುಣ್ ಕುಮಾರ್, ನಿರ್ದೇಶಕರಾದ ಕೆ.ಎನ್.ಮಲ್ಲೇಶ್, ಎಸ್.ಪುಟ್ಟಸ್ವಾಮಿ, ಕೆ.ಎನ್.ಶಿವಪ್ಪ, ಮಂಜುಳ, ನೀಲಮ್ಮ, ನಡಕೇರಯ್ಯ, ನಾಗರಾಜಚಾರ್, ಸಿದ್ದನಾಯ್ಕ, ಸಿಬ್ಬಂದಿಗಳಾದ ಎಸ್.ಪ್ರಸಾದ್, ಶಿವಪಾದ ಸೇರಿದಂತೆ ಇತರರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ನಿಮ್ಮ ಹಳೆಯ ಮನೆಯನ್ನು ಹಾಗೂ ಕಟ್ಟಡಗಳನ್ನು ಆಧುನಿಕ ಶೈಲಿಯಲ್ಲಿ ನುರಿತ ಕೆಲಸಗಾರರಿಂದ ನವೀಕರಿಸಿಕೊಡಲಾಗುವುದು.
8710958070

ಕಮರ್ಷಿಯಲ್ ಸ್ವತ್ತುಗಳು ಮಾರಾಟಕ್ಕಿದೆ
45x60 K.S.R.T.C ಬಸ್ ಡಿಪೋ ಹತ್ತಿರ, 80 ಅಡಿ ರಸ್ತೆ, 'N' ಬ್ಲಾಕ್ R-1- ಕಾರ್‌ಕೇರ್ ಸ್ವತ್ತು ಕುವೆಂಪುನಗರ, ಮೈಸೂರು 50X80 R.M.P. ಮುಖ್ಯ ರಸ್ತೆ, H.D.F.C. ಬ್ಯಾಂಕ್ ಪಕ್ಕ, ಖುಷಬ್ ಗ್ರಾನೈಟ್ ಸ್ವತ್ತು 80 ಅಡಿ ರಸ್ತೆ, ಕುವೆಂಪುನಗರ, ಮೈಸೂರು
9448166798

ಸ್ವಾಧೀನ ಪತ್ರ ಕಳೆದು ಹೋಗಿದೆ
68–P ಹೂಟಗಳ್ಳಿ ಕೈಗಾರಿಕಾ ಪ್ರದೇಶ ಕಾರ್ಖಾನೆಯ ಸ್ವಾಧೀನ ಪತ್ರ ಕಳೆದು ಹೋಗಿರುತ್ತದೆ. ಸಿಕ್ಕಲ್ಲಿ ದಯಮಾಡಿ ಸಂಪರ್ಕಿಸಿ
7619627212

26 ನಿವೇಶನಗಳು ನೋಂದಣಿಗೆ ಸಿದ್ಧವಿದೆ.
ಮೈಸೂರು ತಾ॥, ಜಯಪುರ ಹೋಬಳಿ, ಜಯಪುರ ಗ್ರಾಮ, H.D.ಕೋಟೆ ಮುಖ್ಯ ರಸ್ತೆ, H.P ಪೆಟ್ರೋಲ್ ಬಂಕ್ ಹಿಂಭಾಗ, 400 ಮೀಟರ್ ಒಳಭಾಗ
9448166798

ಬ್ರಾಹ್ಮಿನ್ ರಿಯಲ್ ಎಸ್ಟೇಟ್
ವಿವೇಕಾನಂದ ನಗರ ಮೈಸೂರು ಸೈಟು, ಮನೆ, ಜಮೀನು ಮಾರುವವರು / ಕೊಂಡುಕೊಳ್ಳುವವರು
9611509551

ಬೇಕಾಗಿದ್ದಾರೆ
ಬೇರೆ ಜಿಲ್ಲೆಯಲ್ಲಿ (FIELD WORK) ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ:– SSLC & PUC, PASS
9448186377, 9448247741

COMMERCIAL SITE SALE
150 feet road *Bhoomika Layout Elawala to Srirangapatna highway* 40X65 East face site 1.20 Cr negotiate
Contact 7835044955

WANTED
Delivery Bikers Salary 30000 - 35000
Contact 8310381391, 7892156457

WANTED
Govt. of Karnataka -Dept. of Tourism Food Craft Institute-Mysuru, Exhibition Ground, Ittigegudu Hotel Management Faculty and Spoken English Trainer The Positions are Purely Temporary/ Part time/ Short Term/ Ad-hoc Basis www.fcimysuru.com
Mobile 6362018821

ಮನೆ ಭೋಗ್ಯಕ್ಕಿದೆ
ಸಸ್ಯಹಾರಿಗಳಿಗೆ ಮಾತ್ರ ವಿಳಾಸ: ನಂದಿನಿ ಬಡಾವಣೆ, 2ನೇ ಹಂತ, ರಿಂಗ್ ರೋಡ್ ಹತ್ತಿರ, ಆಲನಹಳ್ಳಿ, ಮೈಸೂರು. 30x40, 3 BHK, Duplex house
9591823800, 9611066014

ಸರ್ಕಾರದ ಸಾಲ ಸೌಲಭ್ಯ, ಸಹಾಯಧನ ಕೊಡಿಸುವುದಾಗಿ ನೂರಾರು ಮಹಿಳೆಯರು, ಯುವಕರಿಗೆ ಲಕ್ಷಾಂತರ ರೂ. ವಂಚನೆ ಆರೋಪ

ಮಹಿಳೆ ಬಂಧನಕ್ಕೆ ಗ್ರಾಮಸ್ಥರ ಒತ್ತಾಯ

ತಿ.ನರಸೀಪುರ, ಸೆ.3– ಸರ್ಕಾರದ ಯೋಜನೆಗಳಿಂದ ಸಾಲ ಸೌಲಭ್ಯ ಹಾಗೂ ಸಹಾಯಧನವನ್ನು ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ಕೊಡಿಸುವುದಾಗಿ ನಂಬಿಸಿ ತಾಲೂಕಿನ ಕೊಳತ್ತೂರು ಗ್ರಾಮದ ಮಹಿಳೆಯೊಬ್ಬರು ಸುತ್ತಮುತ್ತಲಿನ ಗ್ರಾಮಗಳ ನೂರಾರು ಮಹಿಳೆಯರು ಮತ್ತು ಯುವಕರಿಂದ ಸುಮಾರು 27 ಲಕ್ಷ ರೂ. ಪಡೆದು ವಂಚಿಸಿದ್ದಾಳೆ ಎಂದು ಆರೋಪಿಸಿದ ಗ್ರಾಮಸ್ಥರು, ತಲಕಾಡು ಪೊಲೀಸ್ ಠಾಣೆಗೆ ತೆರಳಿ ವಂಚಕಿಯನ್ನು ಬಂಧಿಸುವಂತೆ ಆಗ್ರಹಿಸಿದ್ದಾರೆ.

ಪೊಲೀಸ್ ಠಾಣೆ ಮುಂಭಾಗ ಜಮಾವಣೆಗೊಂಡಿದ್ದ ಕೊಳತ್ತೂರು ಗ್ರಾಮದ ನೂರಾರು ಮಹಿಳೆಯರು, ಯುವಕರು ತಮ್ಮ ಗ್ರಾಮದ ಜೋಕ್ಸ್ ಕುಳ್ಳಯ್ಯನ ರಮೇಶ ಎಂಬಾತನ ಪತ್ನಿ ಜ್ಯೋತಿ ಎಂಬಾಕೆ ತಮಗೆ ವಂಚಿಸಿರುವುದಾಗಿ ಆರೋಪಿಸಿ, ಕೂಡಲೇ ಆಕೆಯನ್ನು ಬಂಧಿಸಬೇಕೆಂದು ಪಟ್ಟು ಹಿಡಿದು ಪ್ರತಿಭಟನೆ ನಡೆಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಆರ್.ಸೋಮಣ್ಣ ಮಾತನಾಡಿ, ಕೊಳತ್ತೂರು ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತೆಯೂ ಅಲ್ಲದ ಜ್ಯೋತಿ ಎಂಬಾಕೆ ಸಚಿವರ ಹೆಸರನ್ನು ಹೇಳಿಕೊಂಡು ಮಹಿಳಾ ಸ್ವಸಹಾಯ ಸಂಘಗಳ ಗುಂಪುಗಳಿಗೆ ಸಬ್ಸಿಡಿ ಸಾಲ ಕೊಡಿಸುತ್ತೇನೆ ಎಂದು 170 ರಿಂದ 180 ಮಹಿಳೆಯರ ಬಳಿ ತಲಾ 1,200 ರೂ.ಗಳನ್ನು ವಸೂಲಿ ಮಾಡಿದ್ದಾಳೆ. ಹತ್ತಾರು ಯುವಕರಿಗೆ ಕಾರ್ ಲೋನ್, ಇಟ್ಟಿಗೆ ಕಾರ್ಖಾನೆಗೆ ಸಹಾಯಧನ ಕೊಡಿಸುವುದಾಗಿ ತಲಾ 50 ಸಾವಿರ ಹಣ ವಸೂಲಿ ಮಾಡಿದ್ದಾಳೆ. ಇಷ್ಟಲ್ಲದೆ ಪಕ್ಕದ ದೊಡ್ಡೇಬಾಗಿಲು, ಹೆಮ್ಮಿಗೆ, ಮಾವಿನಹಳ್ಳಿ ಸುತ್ತಮುತ್ತಲಿನ ಗ್ರಾಮಗಳಲ್ಲೂ ಅಮಾಯಕರಿಗೆ ಸಚಿವರ ಹೆಸರಿನಲ್ಲಿ ಆಮಿಷವೊಡ್ಡಿ ವಸೂಲಿಗೆ ಇಳಿದಿದ್ದಾಳೆ. ಕೂಡಲೇ ಆಕೆಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.



ಲಕ್ಷಾಂತರ ರೂ. ವಂಚಿಸಿರುವ ಮಹಿಳೆ ಬಂಧನಕ್ಕೆ ಕೊಳತ್ತೂರು ಗ್ರಾಮಸ್ಥರು ಒತ್ತಾಯಿಸಿದರು.

ಕರುನಾಡು ಮಹಿಳಾ ಸಂಘಟನೆ ಜಿಲ್ಲಾ ಸಂಚಾಲಕಿ ನೇತ್ರಾವತಿ ಮಾತನಾಡಿ, ನಿತ್ಯವೂ ಕೂಲಿಗೆ ದುಡಿಯುವ ಅಕ್ಷರದ ಅರಿವಿಲ್ಲದ ನೂರಾರು ಮಹಿಳೆಯರಿಗೆ ಸರ್ಕಾರದ ಸಾಲ ಸೌಲಭ್ಯ ಕೊಡಿಸುತ್ತೇನೆಂದು ನಂಬಿಸಿ, ಹಣ ವಸೂಲಿ ಮಾಡಿ ವಂಚಿಸಿದ್ದಾಳೆ. ಕೆಲವು ಮೈಕ್ರೋ ಫೈನಾನ್ಸ್‌ಗಳಲ್ಲೂ ಸಬ್ಸಿಡಿ ಸಾಲ ಕೊಡುತ್ತಿದ್ದಾರೆಂದು ಕರೆದೊಯ್ದು, ಮಹಿಳೆಯರಿಗೆ ಸಾಲ ಕೊಡಿಸಿ, ಅವರ ಖಾತೆಗೆ ಜಮೆಯಾಗಿದ್ದ ಹಣವನ್ನು ತಾನೇ ಡ್ರಾ ಮಾಡಿಸಿಕೊಂಡಿದ್ದಾಳೆ. ಮೈಕ್ರೋ ಫೈನಾನ್ಸ್‌ನವರು ಸಾಲ ಮರುಪಾವತಿ ಮಾಡುವಂತೆ ಅಮಾಯಕ ಮಹಿಳೆಯರ ಮನೆ ಮುಂದೆ ನಿಲ್ಲುತ್ತಿದ್ದಾರೆ. ದುಡಿದು ಜೀವನ ಮಾಡುವವರು ಲಕ್ಷಾಂತರ ರೂ. ಸಾಲದ ಸುಳಿಗೆ ಸಿಲುಕಿಕೊಂಡಿದ್ದಾರೆ ಎಂದು ದೂರಿದರು.

ಈ ವೇಳೆ ಮಾತನಾಡಿದ ಠಾಣೆ ಎಎಸ್‌ಐ ಕೆ.ಪಿ.ನಾಗೇಂದ್ರಸ್ವಾಮಿ ಮಾತನಾಡಿ, ಕೊಳತ್ತೂರು ಗ್ರಾಮದಲ್ಲಿ ನೂರಾರು ಮಹಿಳೆಯರು ಹಾಗೂ ಯುವಕರಿಗೆ ವಂಚಿಸಿರುವ ಮಹಿಳೆ ಜ್ಯೋತಿ ವಿರುದ್ಧ ದಾಖಲೆ ಸಮೇತ ದೂರು ನೀಡಿದರೆ ಮೊಕದ್ದಮೆ ದಾಖಲಿಸಿ, ಬಂಧಿಸಲು ಕ್ರಮ ಕೈಗೊಳ್ಳುತ್ತೇವೆ. ಅಧಿಕೃತವಾಗಿ ದೂರು ಸ್ವೀಕರಿಸಿದ ಬಳಿಕ ಕಾನೂನು ಪ್ರಕ್ರಿಯೆಗಳನ್ನು ಆರಂಭಿಸುತ್ತೇವೆ. ಅಲ್ಲಿಯವರೆಗೂ ವಂಚನೆಗೊಳಗಾದ ಮಹಿಳೆಯರು ಹಾಗೂ ಯುವಕರು ಕಾಲಾವಕಾಶ ನೀಡಬೇಕೆಂದು ಮನವಿ ಮಾಡಿದರು. ನಂತರ ಪ್ರತಿಭಟನಾಕಾರರು ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆ ಸಮೇತ ದೂರು ನೀಡುವುದಾಗಿ ತಿಳಿಸಿ ತೆರಳಿದರು.

ಗ್ರಾಪಂ ಅಧ್ಯಕ್ಷ ರವಿಪ್ರಸಾದ್, ಮಾಜಿ ಉಪಾಧ್ಯಕ್ಷ ಕೆ.ಶಂಕರ, ಮಾಜಿ ಸದಸ್ಯ ಕೆ.ಎಂ.ಮಹದೇವಸ್ವಾಮಿ, ದಸಂಸ ಸಂಚಾಲಕ ಕೆ.ಎಂ.ಮಂಜುನಾಥ್, ಮುಖಂಡ ದೊಡ್ಡೇಬಾಗಿಲು ಮಹದೇವಯ್ಯ, ಯಜಮಾನರುಗಳಾದ ನಂಜಯ್ಯ, ನಂಜುಂಡಯ್ಯ, ವಿಷಕಂಠಯ್ಯ, ಅಂಗಡಿ ಕೈಲಾಸ ಮೂರ್ತಿ ಸೇರಿದಂತೆ ನೂರಾರು ಮಹಿಳೆಯರು ಹಾಗೂ ಯುವಕರು ಇದ್ದರು.

ಇದೇ ವೇಳೆ ಗಲಾಟೆಗೆ ಸಂಬಂಧಿಸಿದಂತೆ ಜ್ಯೋತಿ ಮತ್ತು ಆಕೆಯ ಪತಿ ವಿರುದ್ಧ ಗ್ರಾಮಸ್ಥರು ದೂರು ಹಾಗೂ ಗ್ರಾಮಸ್ಥರ ವಿರುದ್ಧ ಜ್ಯೋತಿ ನೀಡಿರುವ ಪ್ರತಿದೂರು ದಾಖಲಾಗಿದೆ. ಮಹಿಳೆಯರು ಮತ್ತು ಯುವಕರಿಂದ ಹಣ ಪಡೆದು ಜ್ಯೋತಿ ವಂಚಿಸಿದ್ದಾಳೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ದಾಖಲೆಯೊಂದಿಗೆ ದೂರು ನೀಡಿದರೆ ಎಫ್‌ಐಆರ್ ಹಾಕಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು-ಮೈಸೂರು ನೈಸ್ ರಸ್ತೆ ಯೋಜನೆ ಪರಿಶೀಲಿಸಲು ಸಂಪುಟ ಉಪ ಸಮಿತಿ ರಚನೆ

ಬೆಂಗಳೂರು, ಸೆ.3– ದೀರ್ಘಕಾಲದಿಂದ ನನೆಗುದಿಗೆ ಬಿದ್ದಿರುವ ಬೆಂಗಳೂರು-ಮೈಸೂರು ನೈಸ್ ರಸ್ತೆ ಯೋಜನೆಯನ್ನು ಪರಿಶೀಲಿಸಲು ರಾಜ್ಯ ಸರ್ಕಾರ ಸಚಿವ ಸಂಪುಟ ಉಪ ಸಮಿತಿ ರಚಿಸಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಬುಧವಾರ ತಿಳಿಸಿದ್ದಾರೆ.



ಡಾ.ಜಿ.ಪರಮೇಶ್ವರ್

ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್(ನೈಸ್) 2008ರಲ್ಲಿ ಪ್ರಾರಂಭಿಸಿದ ಈ ಯೋಜನೆಯು ಬೆಂಗಳೂರು ಮತ್ತು ಮೈಸೂರು ನಡುವೆ ಹೆಚ್ಚಿನ ವೇಗದ ಸಂಪರ್ಕ ಒದಗಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಹಲವು ವರ್ಷಗಳ ಕೆಲಸದ ಹೊರತಾಗಿಯೂ, ಇಲ್ಲಿಯವರೆಗೆ ಕೇವಲ 42 ಕಿಮೀ ಪೆರಿಫೆರಲ್ ರಸ್ತೆ ಮಾತ್ರ ಪೂರ್ಣಗೊಂಡಿದೆ ಎಂದು ಅವರು ಹೇಳಿದ್ದಾರೆ.

2008 ರಲ್ಲಿ ನೈಸ್ ಕಂಪನಿ ಕೈಗೆತ್ತಿಕೊಂಡ ಈ ಯೋಜನೆಯ ವ್ಯವಹಾರಗಳನ್ನು ಪರಿಶೀಲಿಸಲು ಸಂಪುಟ ಉಪ ಸಮಿತಿ ರಚಿಸಲಾಗಿದೆ. ಪೆರಿಫೆರಲ್ ರಸ್ತೆ ಕೇವಲ 42 ಕಿ.ಮೀ. ಮಾತ್ರ ಪೂರ್ಣಗೊಂಡಿದೆ. ಈ ಕಂಪನಿಗೆ ಭೂಮಿಯನ್ನು ಹಸ್ತಾಂತರಿಸಲಾಗಿದೆ. ಕಂಪನಿಯು ಹಲವಾರು ಬಾರಿ ಒಪ್ಪಂದವನ್ನು ಉಲ್ಲಂಘಿಸಿದೆ ಮತ್ತು ಭೂಮಿಯನ್ನು ಹಸ್ತಾಂತರಿಸದಿದ್ದಕ್ಕಾಗಿ ಸರ್ಕಾರವನ್ನು ದೂಷಿಸಿದೆ. ಸಂಪುಟ ಉಪಸಮಿತಿ ಇಡೀ ಯೋಜನೆಯ ಪ್ರತಿಯೊಂದು ಅಂಶವನ್ನು ಪರಿಶೀಲಿಸುತ್ತದೆ ಎಂದು ಅವರು ತಿಳಿಸಿದರು.

ಒಳಮೀಸಲಾತಿ ಅನ್ವಯ ಶಿಕ್ಷಣ, ಉದ್ಯೋಗ ನೇಮಕಾತಿಗೆ ರೋಸ್ಟರ್ ಬಿಂದು ಹಂಚಿಕೆ

ಮೈಸೂರು, ಸೆ.3(ಎಸ್‌ಪಿಎನ್)– ರಾಜ್ಯದಲ್ಲಿ ಸರ್ಕಾರದಿಂದ ಇತ್ತೀಚೆಗೆ ಪರಿಶಿಷ್ಟ ಜಾತಿಗಳಲ್ಲಿನ ಒಳ ಮೀಸಲಾತಿ ಹಂಚಿಕೆಯನ್ನು ಮಾಡಲಾಗಿದೆ. ಪರಿಶಿಷ್ಟ ಜಾತಿಗೆ ನೀಡಲಾಗಿದ್ದ ಶೇ.17 ಮೀಸಲಾತಿಯನ್ನು ಎಡಗೈ ಸಮುದಾಯ ಶೇ.6, ಬಲಗೈ ಸಮುದಾಯ ಶೇ.6 ಹಾಗೂ ಇತರೆ ಎಸ್ಸಿ ಸಮುದಾಯಕ್ಕೆ ಶೇ.5 ಮೀಸಲಾತಿ ಕೊಟ್ಟಿದೆ.

ಹಾಗಾದರೆ ಸಾಮಾನ್ಯ ವರ್ಗ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಮೀಸಲಾತಿ ಎಷ್ಟಿದೆ ಎಂಬುದರ ಆದೇಶ ಹೊರಡಿಸಿದೆ. ಈ ಮೀಸಲಾತಿ ಆಧಾರದಲ್ಲಿ ಶಿಕ್ಷಣ ಮತ್ತು ಉದ್ಯೋಗಕ್ಕೆ ಮೀಸಲಾತಿ ಕಲ್ಪಿಸಲಾಗುತ್ತದೆ. ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನಿಗದಿಪಡಿಸಲಾದ ಹೆಚ್ಚಿನ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ರಿಕ್ತ ಸ್ಥಾನಗಳಿಗೆ ಸಂಬಂಧಿಸಿದಂತೆ 28.12.2022 ರ ಸರ್ಕಾರದ ಆದೇಶದಲ್ಲಿ 100 ಬಿಂದುಗಳ ಪರಿಷ್ಕೃತ ರೋಸ್ಟರನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ. ಪರಿಶಿಷ್ಟ ಜಾತಿಗಳಲ್ಲಿರುವ 101 ಜಾತಿಗಳಿಗೆ ಒಳಮೀಸಲಾತಿ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಸರ್ಕಾರ ನಿಗದಿಪಡಿಸಿದ 100 ಬಿಂದುಗಳ ಮರು ಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿದೆ.

ಪ್ರವರ್ಗಗಳು	ಶೇಕಡವಾರು ಮೀಸಲಾತಿ (%)
ಪ್ರವರ್ಗ–1	04
ಪ್ರವರ್ಗ–II(ಎ)	15
ಪ್ರವರ್ಗ–II(ಬಿ)	04
ಪ್ರವರ್ಗ–III(ಎ)	04
ಪ್ರವರ್ಗ–III(ಬಿ)	05
ಪರಿಶಿಷ್ಟ ಜಾತಿ ಪ್ರವರ್ಗ–ಎ (ಪ.ಜಾ. ಪ್ರ–ಎ) ಎಡಗೈ ಸಮುದಾಯಗಳು	06
ಪರಿಶಿಷ್ಟ ಜಾತಿ ಪ್ರವರ್ಗ–ಬಿ (ಪ.ಜಾ. ಪ್ರ–ಬಿ ಬಲಗೈ ಸಮುದಾಯ	06
ಪರಿಶಿಷ್ಟ ಜಾತಿ ಪ್ರವರ್ಗ–ಸಿ (ಪ.ಜಾ. ಪ್ರ–ಸಿ)	05
ಪರಿಶಿಷ್ಟ ಪಂಗಡ (ಪ.ಪಂ)	07
ಸಾಮಾನ್ಯ ಅರ್ಹತೆ (ಸಾ.ಅ)	44
ಒಟ್ಟು	100

ಪರಿಶಿಷ್ಟ ಜಾತಿಗಳಲ್ಲಿರುವ 101 ಜಾತಿಗಳನ್ನು ಪ್ರವರ್ಗ–ಎ, ಪ್ರವರ್ಗ–ಬಿ ಮತ್ತು ಪ್ರವರ್ಗ–ಸಿ ಗಳೆಂದು 3 ಪ್ರವರ್ಗಗಳಾಗಿ ವರ್ಗೀಕರಿಸಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಶೇಕಡ 17 ರಷ್ಟು ಮೀಸಲಾತಿಯನ್ನು ಪ್ರವರ್ಗ–ಎ ರಲ್ಲಿನ ಸಮುದಾಯಗಳಿಗೆ ಶೇಕಡ 6, ಪ್ರವರ್ಗ–ಬಿ ರಲ್ಲಿನ ಸಮುದಾಯಗಳಿಗೆ ಶೇಕಡ 6 ಮತ್ತು ಪ್ರವರ್ಗ–ಸಿ ರಲ್ಲಿನ ಸಮುದಾಯಗಳಿಗೆ ಶೇಕಡ 5 ರಷ್ಟು ಮೀಸಲಾತಿಯನ್ನು 25.08.2025 ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ 28.12.2022 ರ ಸರ್ಕಾರದ ಆದೇಶದ ಅನುಬಂಧದಲ್ಲಿ ಪರಿಶಿಷ್ಟ ಜಾತಿಗಳಿಗೆ ಗುರುತಿಸಲಾಗಿರುವ 17 ಬಿಂದುಗಳನ್ನು ಮಾತ್ರ ಈ ಆದೇಶದ ಅನುಬಂಧದಲ್ಲಿರುವಂತೆ ಪುನರ್ ವರ್ಗೀಕರಿಸಿ ಆದೇಶಿಸಲಾಗಿದೆ. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಯಾವುದೇ ವೃಂದದ ಹುದ್ದೆಗಳಿಗೆ ನೇರ ನೇಮಕಾತಿಯ ಪ್ರಕ್ರಿಯೆಯನ್ನು 28.12.2022 ರ ಸದರಿ ಆದೇಶದ ಅನುಬಂಧದಲ್ಲಿ ನಿಗದಿಪಡಿಸಿರುವ 100 ಬಿಂದುಗಳ ರೋಸ್ಟರನ್ನು ಅನುಸರಿಸಿ, ರಿಕ್ತ ಸ್ಥಾನಗಳನ್ನು ವರ್ಗೀಕರಣ ಮಾಡಿ ಈಗಾಗಲೇ ಪ್ರಾರಂಭಿಸಿದ್ದಲ್ಲಿ ರೋಸ್ಟರಿನ ಯಾವ ಬಿಂದುವಿನವರೆಗೆ ಜಾರಿಗೊಳಿಸಲಾಗಿದೆಯೋ, ಆ ನಂತರದ ರೋಸ್ಟರ್ ಬಿಂದುವಿನಿಂದ ಪ್ರಾರಂಭಿಸಿ, ಈ ಆದೇಶದ ಅನುಬಂಧದಲ್ಲಿ ನಿಗದಿಪಡಿಸಿರುವ ರೋಸ್ಟರ್ ಬಿಂದುಗಳನ್ನು ಅನುಸರಿಸಿ ಮುಂದಿನ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವಿಶೇಷ ಕಾರ್ಯದರ್ಶಿ ಚಂದ್ರಶೇಖರ್ ಆದೇಶಿಸಿದ್ದಾರೆ.

ತಾಲೂಕು ಮಟ್ಟಕ್ಕೆ ಆಯ್ಕೆ

ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಶ್ರೀರಾಂಪುರದಲ್ಲಿರುವ ಮಹಾವೀರ ವಿದ್ಯಾ ಮಂದಿರ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಅಖಿಲ ಭಾರತ ಥಾಲ್ ಸೈನಿಕ ಶಿಬಿರಕ್ಕೆ ಇಬ್ಬರು ವಿದ್ಯಾರ್ಥಿಗಳು ಆಯ್ಕೆ



ಅಖಿಲ ಭಾರತ ಥಾಲ್ ಸೈನಿಕ ಶಿಬಿರಕ್ಕೆ ಆಯ್ಕೆಯಾದ ಇಬ್ಬರು ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಸೆ.3– ಮೈಸೂರು ವೆಸ್ಟ್ ಲಯನ್ಸ್ ಸೇವಾನಿಕೇತನ ಶಾಲೆಯ 9ನೇ ತರಗತಿ ವಿದ್ಯಾರ್ಥಿಗಳಾದ ಪೂರ್ವಿತಾ. ವಿ ಮತ್ತು ನೇಸರ. ಆರ್ ಅವರು ನವದೆಹಲಿಯಲ್ಲಿ ನಡೆಯಲಿರುವ ಪ್ರತಿಷ್ಠಿತ ಅಖಿಲ ಭಾರತ ಥಾಲ್ ಸೈನಿಕ ಶಿಬಿರದಲ್ಲಿ (ಎಐಟಿಎಸ್‌ಸಿ) ಭಾಗವಹಿಸಲು ಆಯ್ಕೆಯಾಗಿದ್ದಾರೆ.

ರಾಷ್ಟ್ರೀಯ ಮಟ್ಟದಲ್ಲಿ ಶಾಲೆ ಮತ್ತು ನಗರವನ್ನು ಪ್ರತಿನಿಧಿಸಲು ಕೆಡೆಟ್‌ಗಳು ಸೆಪ್ಟೆಂಬರ್ 1, 2025 ರಂದು ಮೈಸೂರಿನಿಂದ ಹೊರಡಲಿದ್ದಾರೆ. ಅವರ ಗೌರವಾರ್ಥ ಶಾಲೆಯಲ್ಲಿ ವಿಶೇಷ ರವಾನೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲೆಯ ಅಧ್ಯಕ್ಷ ಎಲ್. ನಾಗರಾಜನ್ ಶ್ರೀನಿವಾಸನ್, ಎಲ್.ಎನ್. ಪ್ರಕಾಶ್, ಎಲ್‌ಎನ್. ಡಾ. ಚಂದ್ರಶೇಖರ್, ಮತ್ತು ಎಲ್.ಎನ್. ಮುಕುಂದ್, ಪ್ರಾಂಶುಪಾಲರಾದ ಡಾ. ರೂಪಾ ಕರುಂಬಯ್ಯ, ಎಎನ್‌ಓ ನರಸಿಂಹ ಮತ್ತು ಪಿಇ ಶಿಕ್ಷಕಿ ಶ್ರೀಮತಿ. ಶ್ರೀಲತಾ ಅವರು ಕೆಡೆಟ್‌ಗಳಿಗೆ ಉತ್ತಮ ಸಾಧನೆ ಮಾಡಲು ಪ್ರೋತ್ಸಾಹಿಸಿದರು.

ದರ್ಶನ್ ಬಳ್ಳಾರಿ ಜೈಲಿಗೆ ವರ್ಗಾವಣೆ ಸಂಬಂಧ ಸೆ.9ಕ್ಕೆ ತೀರ್ಪು

ಬೆಂಗಳೂರು, ಸೆ.3– ರೇಣುಕಾಸ್ವಾಮಿ ಕೊಲೆ ಕೇಸ್‌ನ ಆರೋಪಿ ನಟ ದರ್ಶನ್‌ನನ್ನು ಬಳ್ಳಾರಿ ಜೈಲಿಗೆ ವರ್ಗಾಯಿಸುವ ಹಾಗೂ ದರ್ಶನ್‌ಗೆ ಹೆಚ್ಚುವರಿಯಾಗಿ ದಿಂಬು ಮತ್ತು ಬೆಡ್‌ಶೀಟ್ ನೀಡಬೇಕೆಂಬ ಎರಡು ಅರ್ಜಿಗಳ ಆದೇಶವನ್ನು 64ನೇ ಸೆಷನ್ಸ್ ಕೋರ್ಟ್ ಸೆ.9ಕ್ಕೆ ತನ್ನ ತೀರ್ಪನ್ನು ಕಾಯ್ದಿರಿಸಿದೆ.



ದರ್ಶನ್

ಬುಧವಾರ ಕೋರ್ಟ್‌ನಲ್ಲಿ ವಾದ ಮಂಡಿಸಿದ ದರ್ಶನ್ ಪರ ವಕೀಲ ಸುನೀಲ್ ಕುಮಾರ್, ದರ್ಶನ್‌ಗೆ ಜೈಲಿನಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ಎಳೆಎಳೆಯಾಗಿ ವಿವರಿಸಿದರು. ಖೈದಿಗಳ ಹಕ್ಕುಗಳ ಬಗ್ಗೆ ಸುಪ್ರೀಂಕೋರ್ಟ್‌ನ ಕೆಲ ತೀರ್ಪುಗಳನ್ನೂ ಕೂಡ ತಮ್ಮ ವಾದದಲ್ಲಿ ಉಲ್ಲೇಖ ಮಾಡಿದ ಅವರು ಯಾವುದೇ ಕಾರಣಕ್ಕೂ ದರ್ಶನ್‌ರನ್ನು ಬೇರೆ ಜೈಲಿಗೆ ಸ್ಥಳಾಂತರ ಮಾಡಬಾರದು ಎಂದು ವಾದಿಸಿದರು.

ಬಟ್ಟೆ, ಬೆಡ್, ಪ್ಲೇಟ್, ಚಪ್ಪಲಿ, ಸ್ಪೂನ್ ಸೇರಿ ಅಗತ್ಯ ವಸ್ತುಗಳನ್ನ ಸ್ವಂತವಾಗಿ ಪಡೆಯಲು ಪ್ರಿಸನ್ಸ್ ಕಾಯ್ದೆ 63ರ ಅಡಿ ಅವಕಾಶ ಇದೆ. ನಾವು ಹೆಚ್ಚುವರಿಯಾಗಿ ಕೇಳುತ್ತಿಲ್ಲ. ಮಂಗಳವಾರ ಜೈಲು ಅಧಿಕಾರಿಗಳೇ ನನಗೆ ಕರೆ ಮಾಡಿ ಅರ್ಜಿ ಹಿಂಪಡೆಯಲು ಕೇಳಿಕೊಂಡಿದ್ದಾರೆ. ಏನಿದೆಯೋ ಅದನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ ಎಂದು ಸುನೀಲ್ ಕುಮಾರ್ ವಾದದ ವೇಳೆ ತಿಳಿಸಿದ್ದಾರೆ.ಅದೇ ವೇಳೆ ಸರ್ಕಾರದ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ತೀರ್ಪನ್ನು ಸೆ.9ಕ್ಕೆ ಕಾಯ್ದಿರಿಸಿದರು.

ಕೋರ್ಟ್ ಹಾಲ್‌ಗೆ ನುಗ್ಗಿದ ಅಪರಿಚಿತ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಕೇಸಿನ ಆರೋಪಿಗಳಾದ ನಟ ದರ್ಶನ್ ಸೇರಿದಂತೆ 17 ಮಂದಿಗೆ ಮರಣದಂಡನೆ ಶಿಕ್ಷೆ ವಿಧಿಸಬೇಕೆಂದು ಕೋರಿ ಅಪರಿಚಿತ ವ್ಯಕ್ತಿಯೊರ್ವ ಅರ್ಜಿ ಹಿಡಿದು ಕೋರ್ಟ್ ಹಾಲ್‌ಗೆ ನುಗ್ಗಿರುವ ಘಟನೆ ನಡೆದಿದೆ.

ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ದರ್ಶನ್‌ನನ್ನು ದರ್ಶನ್‌ನನ್ನು ಈ ಹಿಂದೆ ಇದ್ದ ಬಳ್ಳಾರಿ ಜೈಲಿಗೆ ಶಿಫ್ಟ್ ಮಾಡುವ ಸಂಬಂಧ ಅಧಿಕಾರಿಗಳು ಸಲ್ಲಿಸಿದ್ದ ಅರ್ಜಿಯನ್ನು ಇಂದು(ಸೆ.3) ಬೆಂಗಳೂರಿನ 64ನೇ ಸೆಷನ್ ಕೋರ್ಟ್ ವಿಚಾರಣೆ ನಡೆಸುವ ವೇಳೆ ಅಪರಿಚಿತವ ವ್ಯಕ್ತಿ ನುಗ್ಗಿ ಬಂದಿದ್ದಾನೆ. ಇದರಿಂದ ಕೆಲ ಕಾಲ ಗೊಂದಲಕ್ಕೆ ಕಾರಣವಾಯಿತು.

ವಕೀಲರ ವಾದ–ಪ್ರತಿವಾದ ನಡೆಯುತ್ತಿದ್ದ ವೇಳೆ ಅಪರಿಚಿತ ವ್ಯಕ್ತಿ ಕೈಯಲ್ಲಿ ಅರ್ಜಿಯೊಂದನ್ನು ಹಿಡಿದುಕೊಂಡು ಕೋರ್ಟ್ ಹಾಲ್‌ನೊಳಗೆ ನುಗ್ಗಿದ್ದು, ದರ್ಶನ್ ಅಂಡ್ ಗ್ಯಾಂಗ್‌ಗೆ ಜಾಮೀನು ನೀಡಬಾರದು. ಅವರಿಗೆ ಮರಣ ದಂಡನೆ ನೀಡಬೇಕೆಂದು ನ್ಯಾಯಾಧೀಶರ ಮುಂದೆ ಮನವಿ ಮಾಡಿಕೊಂಡಿದ್ದಾನೆ.

ಈ ಅನಿರೀಕ್ಷಿತ ಬೆಳವಣಿಗೆಯಿಂದ ಗೊಂದಲಕ್ಕೊಳಗಾದ ನ್ಯಾಯಾಧೀಶರು, 'ಯಾರು ನೀನು?' ಎಂದು ಪ್ರಶ್ನಿಸಿದರು. ಅದಕ್ಕೆ ಉತ್ತರಿಸಿದ ಆ ವ್ಯಕ್ತಿ, 'ನಾನು ರವಿ ಬೆಳಗೆರೆ ಕಡೆಯವನು' ಎಂದು ಹೇಳಿದ್ದಾನೆ. ಬಳಿಕ ನ್ಯಾಯಾಧೀಶರು, ಯಾರಾರೋ ನೀಡುವ ಅರ್ಜಿಯನ್ನು ಪಡೆಯಲು ಸಾಧ್ಯವಿಲ್ಲ. ಏನೇ ಇದ್ದರೂ ಸರ್ಕಾರದ ಮುಖಾಂತರ ಬರುವಂತೆ ಹೇಳಿ ಅರ್ಜಿಯನ್ನು ತೆಗೆದುಕೊಂಡ ಹೋಗಿ ಎಂದು ವ್ಯಕ್ತಿಗೆ ಸೂಚಿಸಿದರು. ಜಡ್ಜ್ ಸೂಚನೆ ಬಳಿಕ ಆತ ಕೋರ್ಟ್‌ಹಾಲ್‌ನಿಂದ ಹೊರಗೆ ಹೋಗಿದ್ದಾನೆ. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕ್ರಿಯೆಗಳನ್ನು ನಿಯಮದ ಪ್ರಕಾರವೇ ನಡೆಸಬೇಕು ಮತ್ತು ಹೊರಗಿನ ವ್ಯಕ್ತಿಗಳ ಮಧ್ಯಪ್ರವೇಶಕ್ಕೆ ಅವಕಾಶವಿಲ್ಲ ಎಂದು ನ್ಯಾಯಾಧೀಶರು ಸ್ಪಷ್ಟಪಡಿಸಿದ್ದಾರೆ.

ಉಚಿತ ಔಷಧ ರಹಿತ ಬಣ್ಣ ಚಿಕಿತ್ಸೆ ಕಾರ್ಯಕ್ರಮ

ಮೈಸೂರು, ಸೆ.3– ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮತ್ತು ಬಸವ ಅಕ್ಕ ಅಕಾಡೆಮಿ, ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ ಸೆ. 7 ರಂದು ಬೆಳಿಗ್ಗೆ 9 ಗಂಟೆಯಿಂದ ಉಚಿತ ಔಷಧರಹಿತ ಬಣ್ಣ ಚಿಕಿತ್ಸೆಯನ್ನು ಆಯೋಜಿಸಲಾಗಿದೆ.

ಈ ಥೆರಪಿಯ ಮೂಲಕ ತಲೆ ನೋವು, ಜಠರ ಉರಿತ, ಆಮ್ಲತೆ, ನಿದ್ರಾಹೀನತೆ, ಮಲಬದ್ಧತೆ, ಕುತ್ತಿಗೆ ನೋವು, ಭುಜದ ನೋವು, ಬೆನ್ನು ನೋವು, ಮೊಣಕಾಲು ನೋವು, ಅಜೀರ್ಣ, ಮೂಲವ್ಯಾಧಿ, ಸಯಾಟಿಕಾ ಸೆಳೆತ, ಪಿತ್ತಜನಕಾಂಗದ ಕೊಬ್ಬು, ಜ್ವರ, ಶೀತ, ಕೆಮ್ಮು, ಚರ್ಮದ ಅಲರ್ಜಿ, ಮಧುಮೇಹ, ಮೂತ್ರಪಿಂಡದ ಕಲ್ಲು, ತಲೆಹೊಟ್ಟು, ಬಿಪಿ, ಮುಟ್ಟಿನ ಸಮಸ್ಯೆ, ಕೂದಲು ಉದುರುವಿಕೆ, ಅಸ್ತಮಾ, ಡಸ್ಟ್ ಅಲರ್ಜಿ, ಮನಸ್ಥಿತಿಯಲ್ಲಿ ಏರುಪೇರು, ಸರ್ವಿಕಲ್ ಸಮಸ್ಯೆ, ಪಾದಗಳಲ್ಲಿ ಉರಿಯುವಿಕೆ ಇತ್ಯಾದಿ ಕಾಯಿಲೆಗಳಿಗೆ ಔಷಧಿ ಇಲ್ಲದೆ ಪರಿಣಾಮಕಾರಿಯಾಗಿ ಬಣ್ಣ ಚಿಕಿತ್ಸೆ ನೀಡಲಾಗುತ್ತದೆ.

ಆಸಕ್ತರು ಈ ಉಚಿತ ಥೆರಪಿಯ ಪ್ರಯೋಜನವನ್ನು ಬಳಸಿಕೊಳ್ಳಲು ಕೋರಲಾಗಿದೆ. ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಹೊಸ ನ್ಯಾಯಾಲಯದ ಎದುರು, ಜಯನಗರ, ಮೈಸೂರು ಕಚೇರಿಗೆ ಭೇಟಿ ನೀಡುವುದು ಅಥವಾ ದೂರವಾಣಿ ಸಂಖ್ಯೆ 8431215071, 9513356653, 9483453005ಗೆ ಸಂಪರ್ಕಿಸಬಹುದು.

ಹಸಿರು ನಮ್ಮ ಉಸಿರು

ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಹಿರಿಯ ವಿದ್ಯಾರ್ಥಿನಿಯರ ಸಂಘದ ಸಮಾವೇಶ



ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಹಿರಿಯ ವಿದ್ಯಾರ್ಥಿನಿಯರ ಸಂಘದ ಸಮಾವೇಶ ನಡೆಯಿತು.

ಮೈಸೂರು, ಸೆ.3– ಮೈಸೂರಿನ ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ 20ನೇ ಹಿರಿಯ ವಿದ್ಯಾರ್ಥಿನಿಯರ ಸಮಾವೇಶ ಹಾಗೂ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವ ಕಾರ್ಯಕ್ರಮ ಪೂಜ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಲಾಯಿತು.

ಮುಖ್ಯ ಅತಿಥಿ ಎಂ. ಎ. ನೀಲಾಂಬಿಕಾ ಅವರು ಸ್ವಾಮೀಜಿಯವರ ಮಾತೃಸಹಜ ಸ್ವಭಾವ, ಮಹಿಳಾ ಶಿಕ್ಷಣ ಕ್ಷೇತ್ರಕ್ಕೆ ಅವರ ಮಹತ್ವದ ಕೊಡುಗೆಯ ಬಗ್ಗೆ ತಿಳಿಸಿಕೊಟ್ಟರು.

ಸಂಘದ ಕಾರ್ಯದರ್ಶಿ ವಾರ್ಷಿಕ ವರದಿಯನ್ನು ಮಂಡಿಸಿದರು, ನಂತರ ಸಂಘದ ವತಿಯಿಂದ 2024–25ನೇ ಶೈಕ್ಷಣಿಕ ಸಾಲಿನ ಎಲ್ಲಾ ವಿಭಾಗಗಳ ಹಾಗೂ ಡಿಸಿಇಟಿ ಶ್ರೇಷ್ಠ ವಿದ್ಯಾರ್ಥಿನಿಯರನ್ನು ಅವರ ಅತ್ಯುತ್ತಮ ಸಾಧನೆಗಾಗಿ ಗೌರವಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರು ಹಾಗೂ ಸಂಘದ ಅಧ್ಯಕ್ಷ ವಿ.ಬಿ. ಲೋಕೇಶ ಮಾತನಾಡಿ, ಹಿರಿಯ ವಿದ್ಯಾರ್ಥಿನಿಯರ ಹಾಗೂ ಕಾಲೇಜಿನ ಬಾಂಧವ್ಯ ಮತ್ತು ಪ್ರಾಮುಖ್ಯತೆಯನ್ನು ಹೇಳುತ್ತಾ, ಪ್ರಸ್ತುತ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಹಿರಿಯ ವಿದ್ಯಾರ್ಥಿಗಳ ಅನುಭವ, ಪರಿಣತಿ ಮತ್ತು ತಾಂತ್ರಿಕ ಮಾರ್ಗದರ್ಶನದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಸಂಘದ ಪದಾಧಿಕಾರಿಗಳು, ಕಾಲೇಜಿನ ನಿವೃತ್ತ ನೌಕರರು ಮತ್ತು ಸಿಬ್ಬಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ




ವಿದುಷಿ ಅದಿತಿ ಬಿ. ಪ್ರಹ್ಲಾದ್



ಶ್ರುತಿ



ರಮೇಶ್



ರಾಮಾನುಜಮ್

ಮೈಸೂರು, ಸೆ. 3– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಸೆ. 7ರಂದು ಭಾನುವಾರ ಸಂಜೆ 6 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–283ರ ಅಂಗವಾಗಿ ವಿದುಷಿ ಅದಿತಿ ಬಿ. ಪ್ರಹ್ಲಾದ್ ಅವರಿಂದ ಗಾಯನ ಏರ್ಪಡಿಸಲಾಗಿದೆ.

ವಿದುಷಿ ಅದಿತಿ ಬಿ. ಪ್ರಹ್ಲಾದ್‌ರವರು ಉದಯೋನ್ಮುಖ ಭರವಸೆಯ ಸಂಗೀತ ಕಲಾವಿದರು. ಇವರು ಐದನೆಯ ವರ್ಷದಿಂದಲೇ ಶಾಸ್ತ್ರೀಯ ಸಂಗೀತ ಕಛೇರಿ ನೀಡುತ್ತಿದ್ದಾರೆ. ಸಂಗೀತ ಶಿಕ್ಷಣವನ್ನು ವಿದ್ವಾನ್ ಬಿ.ಎ. ಕಮಲ್‌ಕುಮಾರ್‌ರವರ ಬಳಿ ಆರಂಭಿಸಿದರು. ವಿದ್ವಾನ್ ಎಸ್.ಆರ್. ವಿನಯ್ ಶರ್ಮರವರ ಬಳಿ ಕಲಿಕೆಯನ್ನು ಮುಂದುವರಿಸಿದರು. ಈಗ ವಿದ್ವಾಂಸರುಗಳಾದ ಎ.ಎಸ್. ಮುರಳಿ ಮತ್ತು ಎಚ್.ಎಸ್. ಸುಧೀಂದ್ರರವರ ಬಳಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ.

ವಯೊಲಿನ್ ಸಹಕಾರ ನೀಡಲಿರುವ ವಿದುಷಿ ಸಿ.ವಿ. ಶ್ರುತಿ ಅವರು ಸಂಗೀತದ ಕೌಟುಂಬಿಕ ಹಿನ್ನೆಲೆಯುಳ್ಳವರು. ಪ್ರಾಥಮಿಕ ಶಿಕ್ಷಣವನ್ನು ಅವರ ತಾತ ಸಿ.ಎಸ್. ನಾಗರಾಜ ಅವರಿಂದ ಪಡೆದು, ಬಳಿಕ ಮೈಸೂರಿನ ಖ್ಯಾತ ವಯೊಲಿನ್ ವಿದ್ವಾಂಸರಾದ ಶ್ರೀ ಎಚ್.ಕೆ. ನರಸಿಂಹ ಮೂರ್ತಿಯವರ ಬಳಿ ಶಿಷ್ಯವೃತ್ತಿ ಕೈಗೊಂಡರು. ಪ್ರಸ್ತುತ ಅಕ್ಕರೈ ಸಹೋದರಿಯರ ಬಳಿ ಉನ್ನತ ಸಂಗೀತ ಶಿಕ್ಷಣ ಮುಂದುವರಿಸಿದ್ದಾರೆ. ಮೃದಂಗ ವಾದನದಲ್ಲಿ ಸಹಕರಿಸಲಿರುವ ವಿದ್ವಾನ್ ಜಿ.ಎಸ್. ರಾಮಾನುಜಂ ಅವರು ಸಂಗೀತಗಾರರ ಮನೆತನದಿಂದ ಬಂದ ಪ್ರತಿಭಾನ್ವಿತರು. ಗಾನಕಲಾಭೂಷಣ ವಿದ್ವಾನ್ ಪಿ.ಜಿ. ಲಕ್ಷ್ಮೀನಾರಾಯಣ ಅವರ ಶಿಷ್ಯರು. ದೇಶ–ವಿದೇಶಗಳಲ್ಲಿ ನಡೆಯುವ ಕಛೇರಿಗಳಲ್ಲಿ ಹಲವಾರು ಖ್ಯಾತ ಸಂಗೀತಗಾರರಿಗೆ ಘಟಂ ಸಹಕಾರ ನೀಡಿದ್ದಾರೆ.

ಮೋರ್ಚಿಂಗ್ ಸಾಥ್ ನೀಡಲಿರುವ ವಿದ್ವಾನ್ ವಿ.ಎಸ್. ರಮೇಶ್ ಅವರು ಲಯವಾದ್ಯ ವಿಶಾರದರು. ಮೋರ್ಚಿಂಗ್, ಮೃದಂಗ ಹಾಗೂ ಘಟಂ ವಾದನಗಳಲ್ಲಿ ಪರಿಣತರು. ಸಂಗೀತದ ಕೌಟುಂಬಿಕ ಹಿನ್ನೆಲೆ ಹೊಂದಿರುವರು. ಗಾನಕಲಾ ಭೂಷಣ ವಿದ್ವಾನ್ ಪಿ.ಜಿ. ಲಕ್ಷ್ಮೀ ನಾರಾಯಣರವರ ಶಿಷ್ಯರು. ಮೈಸೂರು ಆಕಾಶವಾಣಿಯ ಮೋರ್ಚಿಂಗ್ ವಾದನದ 'ಎ' ಶ್ರೇಣಿ ಕಲಾವಿದರು. ಸಂಗೀತ ಕಲಾತಪಸ್ವಿ, ಕಲಾದೀಪ್ತಿ ಮುಂತಾದ ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ.

ನಾಳೆ ರಕ್ತದಾನ ಶಿಬಿರ

ಮೈಸೂರು, ಸೆ. 3– ಮೈಸೂರಿನ ಅನಾಥಾಲಯದ ಆವರಣದಲ್ಲಿ ತಾತಯ್ಯ ಜಯಂತಿ ಅಂಗವಾಗಿ ಸೆ. 5 ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 12.30 ರವರೆಗೆ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಾನವೀಯ ಸೇವೆಗೆ ತಮ್ಮ ಅಮೂಲ್ಯವಾದ ರಕ್ತವನ್ನು ದಾನ ಮಾಡುವಂತೆ ಸಂಘಟಕರು ಮನವಿ ಮಾಡಿದ್ದಾರೆ.

ವಾರ್ಷಿಕ ಮಹಾಸಭೆ

ಮೈಸೂರು, ಸೆ. 3– ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿಯ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಬಿ. ನಾಗರಾಜು ಅವರ ಅಧ್ಯಕ್ಷತೆಯಲ್ಲಿ ಸೆ. 14 ರಂದು ಮಧ್ಯಾಹ್ನ 3 ಗಂಟೆಗೆ ಸಂಘದ ಅಮೃತ ಮಹೋತ್ಸವ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ	(ದೂ: 2521923)
ಕೂಲಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಅಂದೊಂದಿತ್ತು ಕಾಲ(ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕೂಲಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಉಸಿರು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ರಿಪ್ಪನ್ ಸ್ವಾಮಿ (ಕ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಿಷ್ಣುವರ್ಧನ(ಕ) + ಸಿಂಹರೂಪಿಣಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಉಸಿರು (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಮಾನ್ಸೂನ್ ರೇಸ್

1ನೇ ದಿನ, ಗುರುವಾರ, 04–09–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಸೀಸನ್ ಓಪನರ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಟರ್‌ಕೋ ಮ್ಯಾನ್ 2. ಆ್ಯಬ್ಸಲೂಟ್ ಕ್ಯಾಥರೀನ್

II. ವರದ ಪ್ಲೇಟ್ –1100 ಮೀ. ಡಿII ರೇಟೆಡ್ 20 ರಿಂದ 45. ಮ.2.30ಕ್ಕೆ
1 ಕಿಂಗ್ ಸ್ಯಾಕ್ರಪೇಸ್ 2. ಅನುಸ್ತುಭ

III. ಬಿ.ಕೆ.ಕೃಷ್ಣದೇವರಾಜೇ ಅರಸ್–1200 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1 ಅಗೇರಾ 2 ಎಬೋಟ್ ಸಿ

IV. H.H.ಜಯಚಾಮರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ಆಲ್ಡ್ ಗೇಟ್ 2. ಝಾರಾ

V. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಲ್ಟಿ ಮಿಲಿಯನ್ –1400 ಮೀ. 3 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1 ಇಂಡಿಯನ್ ಬ್ರೋಕೆಡ್ 2. ಎಕೋಸ್ ಆಫ್ ಟೈಮ್

VI. ಸ್ಟಾರ್ ಆಫ್ ಮೈಸೂರ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಪ್ರಟಿ ಮೂವ್ 2. ದಿ ಗೋಲ್ಡ್ ಸನ್ ರೈಸ್

VII. ವರದ ಪ್ಲೇಟ್ –1100 ಮೀ. ಡಿI ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಓಷನ್ 2. ಪಾಲ್ಕನ್ ಪ್ಯೂರಿ

ದಿನದ ಅತ್ಯುತ್ತಮ	ಆಲ್ಡ್ ಗೇಟ್
ಡಬ್ಬಲ್	ಇಂಡಿಯನ್ ಬ್ರೋಕೆಡ್, ಪ್ರಟಿ ಮೂವ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಸೆ. 3– ಲಯನ್ಸ್ ಕ್ಲಬ್ ಆಫ್ ಮೈಸೂರು ಪ್ಲಾಟಿನಂ, ಶ್ರೀ ವಿನಾಯಕ ದೇವಸ್ಥಾನ ಸಂಸ್ಥೆ, ಜಿಲ್ಲಾ ಅಂಧತ್ವ ನಿವಾರಣಾ ಇಲಾಖೆ ಹಾಗೂ ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಸೆ 8 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ರಾಜೇಂದ್ರ ನಗರದ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 8553640944, 9945216163 ಸಂಪರ್ಕಿಸಬಹುದು.

ಸೆಪ್ಟೆಂಬರ್–ಅಕ್ಟೋಬರ್ ಕ್ರಾಂತಿ ಭವಿಷ್ಯ

ಸಿದ್ದರಾಮಯ್ಯ ಆಪ್ತ ಸಚಿವರೊಂದಿಗೆ ಗೋವಾ ಸಿಎಂ ಸಂಪರ್ಕ

■ 30ಕ್ಕೂ ಅಧಿಕ ಶಾಸಕರ ಬೆಂಬಲ ಈ ಸಚಿವರಿಗಿದೆ ■ ಈ ಮಾಹಿತಿಯನ್ನ ಬಿಜೆಪಿ ವರಿಷ್ಠರಿಗೆ ಒದಗಿಸಿರುವ ಗೋವಾ ಮುಖ್ಯಮಂತ್ರಿ ಡಾ.ಪ್ರಮೋದ್ ಸಾವಂತ್ ■ ಮುಂದುವರೆದ ಭಾಗವಾಗಿ ಕೇಂದ್ರ ಸಚಿವ ಕುಮಾರಸ್ವಾಮಿಯೊಂದಿಗೆ ಬುಧವಾರ ಮಾತುಕತೆ

ಬೆಂಗಳೂರು, ಸೆ.3 (ಕೆಎಂಶಿ)–ಬಿಹಾರ ವಿಧಾನಸಭಾ ಚುನಾವಣೆ ನಂತರ ಕರ್ನಾಟಕ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ನಡೆಯು ಬಹುದಾದ ಬೆಳವಣಿಗೆ ಹಿನ್ನೆಲೆಯಲ್ಲಿ ಕೇಂದ್ರ ಬಿಜೆಪಿ ಸೂಕ್ಷ್ಮ ಹೆಜ್ಜೆ ಇಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಪ್ರಭಾವೀ ಸಚಿವರೊಬ್ಬರು ಕಾಂಗ್ರೆಸ್‌ನ 30ಕ್ಕೂ ಹೆಚ್ಚು ಶಾಸಕರ ಜೊತೆಗೂಡಿ ಗೋವಾ ಸಿಎಂ ಡಾ.ಪ್ರಮೋದ್ ಸಾವಂತ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ ನಂತರ ಬಿಜೆಪಿ ಕರ್ನಾಟಕದ ಕಡೆ ಗಮನಹರಿಸಿದೆ.

ಕರ್ನಾಟಕ ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಗೋವಾ ಮುಖ್ಯಮಂತ್ರಿ ಅವರೇ ಕೇಂದ್ರದಲ್ಲಿನ ಪಕ್ಷದ ವರಿಷ್ಠರಿಗೆ ಕಾಲಾನುಕಾಲಕ್ಕೆ ವರದಿ ನೀಡುತ್ತಾ ಬಂದಿದ್ದಾರೆ. ಸಿದ್ದರಾಮಯ್ಯ ಬಣಕ್ಕೆ ಸೇರಿದ ಈ ಸಚಿವರು ಸಾವಂತ್ ಅವರನ್ನು ಎರಡು–ಮೂರು ಬಾರಿ ಭೇಟಿ ಮಾಡಿ ಪ್ರಸಕ್ತ ರಾಜ್ಯ ರಾಜಕೀಯ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಈ ಬೆಳವಣಿಗೆ ನಂತರವೇ ಕೇಂದ್ರ ಗೃಹ ಸಚಿವ ಅಮಿತ್ ಷಾ, ಕೇಂದ್ರ ಸಂಪುಟದಲ್ಲಿ ರಾಜ್ಯ ಪ್ರತಿನಿಧಿಸುತ್ತಿರುವ ಪ್ರಹ್ಲಾದ್ ಜೋಷಿ, ಎಚ್.ಡಿ.ಕುಮಾರಸ್ವಾಮಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರಿಂದ ಕರ್ನಾಟಕ ರಾಜಕೀಯ ಕುರಿತು ಪ್ರತ್ಯೇಕವಾಗಿ ಮಾಹಿತಿ ಪಡೆದುಕೊಂಡಿದ್ದಾರೆ.



ಗೋವಾ ಸಿಎಂ ಡಾ.ಪ್ರಮೋದ್ ಸಾವಂತ್, ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ದೆಹಲಿಯಲ್ಲಿ ಭೇಟಿಯಾಗಿ ಅಭಿನಂದಿಸಿದರು.

ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ರಾಜಕೀಯ ಕ್ರಾಂತಿ ಆಗಲಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹಾಗೂ ಕೆ.ಎನ್.ರಾಜಣ್ಣ ಬಹಿರಂಗ ಹೇಳಿಕೆ ನೀಡಿದ್ದರು. ರಾಜಣ್ಣ ಅವರನ್ನು ಸಂಪುಟದಿಂದ ಪಕ್ಷದ ವರಿಷ್ಠರೇ ವಜಾಗೊಳಿಸಿದ ನಂತರ ಅವರು ಶಿವಕುಮಾರ್ ವಿರುದ್ಧ ಬಹಿರಂಗವಾಗಿಯೇ ರಾಜಕೀಯ ಕದನಕ್ಕೆ ಇಳಿದಿದ್ದಾರೆ.

ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಬಣಕ್ಕೆ ಸೇರಿದ ಶಾಸಕರು ಆರೋಪ ಮತ್ತು ಪ್ರತ್ಯಾರೋಪ ಮಾಡುತ್ತಿರುವ ಬೆನ್ನಲ್ಲೇ ಪ್ರಮೋದ್ ಸಾವಂತ್ ಇಂದು ದೆಹಲಿಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಕರ್ನಾಟಕ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡಿದ್ದಾರೆ. ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಸೇರಲು ಸಾವಂತ್ ಅವರೇ ಪ್ರಮುಖ ರೂವಾರಿ. ಅಲ್ಲದೆ, ಹಿಂದೆ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ಭಿನ್ನಾಭಿಪ್ರಾಯದಿಂದ ಪತನಗೊಂಡಾಗ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ತರಲು ಗೋವಾ ಮುಖ್ಯಮಂತ್ರಿ ಅವರೇ ತಮ್ಮ ರಾಜಕೀಯ ಚಾಣಕ್ಯತನ ತೋರಿದ್ದರು. ಸಿದ್ದರಾಮಯ್ಯ ಆಡಳಿತದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ರಾಜಕೀಯವಾಗಿ ಬಳಕೆ ಮಾಡಿಕೊಳ್ಳಲು ಮತ್ತೊಮ್ಮೆ ಸಾವಂತ್ ರಂಗ ಪ್ರವೇಶ ಮಾಡಿದ್ದಾರೆ.

ಸೆ.6ಕ್ಕೆ ನಾಡೋಜ ಡಾ. ದೇಜಗೌ ಸಂಸ್ಮರಣೆ

ಮೈಸೂರು, ಸೆ.3– ಅದಮ್ಯ ರಂಗಶಾಲೆ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ ಸಾಹಿತಿ ನಾಡೋಜ ಡಾ. ದೇಜಗೌ ಸಂಸ್ಮರಣೆ, ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ ಪ್ರದಾನ ಹಾಗೂ ಶಿಕ್ಷಕ ಕವಿಗಳ ಕವಿಗೋಷ್ಠಿ ಸಮಾರಂಭವನ್ನು ಸೆ.6 ರಂದು ಸಂಜೆ 4 ಗಂಟೆಗೆ ಏರ್ಪಡಿಸಲಾಗಿದೆ.



ಡಾ. ದೇಜಗೌ

ಜಾನಪದ ವಿದ್ವಾಂಸ ಮತ್ತು ಸಾಹಿತಿ ಡಾ.ಡಿ.ಕೆ ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಮಾರಂಭವನ್ನು ಮೈಸೂರು ವಿಶ್ವವಿದ್ಯಾನಿಲಯದ ಕಲಾನಿಕಾಯದ ಡೀನ್ ಹಾಗೂ ಸಾಹಿತಿ ಪ್ರೊ.ಎಂ.ಎಸ್. ಶೇಖರ್ ಉದ್ಘಾಟಿಸುವರು. ಬೆಂಗಳೂರಿನ ಕನ್ನಡ ಜನಶಕ್ತಿ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಸಿ.ಕೆ.ರಾಮೇಗೌಡ 'ನಾಡೋಜ ಡಾ. ದೇಜಗೌ ಜೀವನ–ಸಾಧನೆ' ಕುರಿತು ಮಾತನಾಡುವರು. ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಶಿಕ್ಷಣ ಕ್ಷೇತ್ರದ ಸಾಧಕರಿಗೆ 'ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ' ಪ್ರದಾನ ಮಾಡಲಿದ್ದಾರೆ. ಮುಖ್ಯಅತಿಥಿಯಾಗಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಪಾಲ್ಗೊಳ್ಳುವರು.

ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ ಪುರಸ್ಕೃತರು : ಮೈಸೂರಿನ ದೇವರಾಜ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಜಿ. ರಮಾನಂದ, ಅರಕಲಗೂಡಿನ ಬಿಜಿಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್.ಬಿ. ಮಹೇಶ್, ಹೆಚ್.ಡಿ.ಕೋಟೆ ತಾಲೂಕಿನ ತುಂಬಸೋಗೆಯ ಎಂಎಂಕೆ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎಸ್.ಪಿ. ಪ್ರಕಾಶ್ ಹಾಗೂ ತುಮಕೂರು ಜಿಲ್ಲೆಯ ಇರಕಸಂದ್ರ ಕಾಲೋನಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಡಾ. ರವಿಕುಮಾರ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಇದೇ ಸಂದರ್ಭದಲ್ಲಿ ಜಿಲ್ಲೆಯ ಸರ್ಕಾರಿ ಮತ್ತು ಖಾಸಗಿ ಶಾಲಾ ಮತ್ತು ಕಾಲೇಜಿನ ಶಿಕ್ಷಕ ಕವಿಗಳ ಜಿಲ್ಲಾ ಮಟ್ಟದ ಕವಿಗೋಷ್ಠಿ ನಡೆಯಲಿದ್ದು, ಸುಮಾರು 30 ಮಂದಿ ಕವಿ–ಕವಯತ್ರಿಯರು ತಮ್ಮ ಸ್ವರಚಿತ ಕವನಗಳನ್ನು ವಾಚನ ಮಾಡಲಿದ್ದಾರೆ. ಜೊತೆಗೆ ಗಾಯಕರದ ಆರ್.ಎಚ್. ಶ್ರೀದೇವಿ ಹಾಗೂ ಅವ್ವ ಪರಮೇಶ್ ಅವರಿಂದ 'ಗೀತ ಗಾಯನ' ಕೂಡ ನಡೆಯಲಿದೆ.

Kumuda Spa
AVAIL KUMUDA SPA'S COMPLIMENTARY
DASARA OFFER
Complimentary Pedicure or Haircut and blow dry for 90 MIN MASSAGE.
Complimentary Foot massage for HAIRSPA
Complimentary Foot or Head massage for FACIAL.
Complimentary Clean up for Ladies Full BODY WAXING.
9632769550
0821-4193567

MEGAVIN Vascular Care
ನಿಮ್ಮ ವೆರಿಕೋಸ್ ಅನ್ನು ನಾವು ಹಾರೈಕೆ ಮಾಡುತ್ತೇವೆ.
ಶಸ್ತ್ರಚಿಕಿತ್ಸೆ ಇಲ್ಲದೆ! ಲೇಸರ್ ಚಿಕಿತ್ಸೆ
ಕಾಲುಗಳಲ್ಲಿ ನೋವು, ಸೆಳೆತ, ತುರಿಕೆ, ಊತ, ಚರ್ಮದ ಬಣ್ಣ ಕಪ್ಪಾಗುವುದು, ಗಾಯಗಳು / ಹುಣ್ಣುಗಳು
ಸಂದರ್ಶನ
ಪ್ರತಿ ಶುಕ್ರವಾರ ಬೆಳಗ್ಗೆ 10 ರಿಂದ ಮಧ್ಯಾಹ್ನ 2
5ನೇ, 12ನೇ, 19ನೇ, 26ನೇ ಸೆಪ್ಟೆಂಬರ್ 2025
ರಾಮ ಕೃಷ್ಣ ಹಾಸ್ಪಿಟಲ್ ವಿದ್ಯಾರಣ್ಯಪುರ, ಮೈಸೂರು
ಸಂಜೆ ಓಪಿಡಿ
ಮಾನಸ ಆರ್ಥೋಪೆಡಿಕ್ ಆಸ್ಪತ್ರೆ, ಟಿ.ಕೆ. ಬಡಾವಣೆ, ಮೈಸೂರು
ಡಾ. ವಿನಯ್ ನ್ಯಾಪತಿ
ಕ್ಲಿನಿಕಲ್ & ವ್ಯಾಸ್ಕುಲಾರ್ ಇಂಟರ್‌ವೆನ್ಷನಲ್ ರೇಡಿಯೋಲಜಿಸ್ಟ್
ಕರೆಮಾಡಿ: 9035223471/9880462229

ಎರಡನೇ ವರ್ಷದ ಸವಿನೆನಪು



ಶಿವಸ್ವಾಮಿ (ಶಿವು 10ನೇ ಕ್ರಾಸ್)

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪ್ರಸನ್ನಕುಮಾರ್ H.M.P ಎಂಟರ್‌ಪ್ರೈಸಸ್ ಮತ್ತು ಸ್ನೇಹಿತರು ನಂಜನಗೂಡು

FOR RENT
M.S. BUILDING
Near Raju Corner, oppsite Navil Bhandar
No. 8177, 60ft., Road, 2nd Phase, 4th Stage, Vijayanagar.
Total Built Up Area 7200sq.ft.
• Basement (1500sq.ft.,)
• Ground floor (1500sq.ft.,)
• 1st floor (1800sq.ft.,)
• 2nd floor (1800sq.ft.,)
Lift Available
Contact between 9am-6pm
98801 61968 / 0821 2448854

Neem BOND PLATINUM
PLYWOOD & DOORS @ FACTORY DEPOT RATES
15 YEARS REPLACEMENT GUARANTEED
ISO 9001:2015 Certified Company Depot
Build Mart 9901291267 9845426862

ಹಸಿರು ನಮ್ಮ ಉಸಿರು

COMMERCIAL SPACE FOR RENT
Ground Floor 1600sqft
Suitable for Office, Storage and distribution
Location: BK Street (Behind DD URS road)
Mob: 7619546887

ಬೇಕಾಗಿದ್ದಾರೆ
ಸಿದ್ಧಾರ್ಥನಗರದ ಮೈಸೂರು ರೇಡಿಯನ್ಸ್ ಹೋಟೆಲ್‌ಗೆ ರಿಸೆಪ್ಷನಿಸ್ಟ್ ಮತ್ತು ರೂಮ್‌ಬಾಯ್ಸ್ ಬೇಕಾಗಿದ್ದಾರೆ.
Mob: 8296792009

G9 projects Designing your Dreams Vee2 Developers
MUDA APPROVED
Khata Ready
SHOURYA LAYOUT
ADJOINING VIJAYANAGAR 4TH STAGE
20X30 Site
₹ 27 LAKHS ONLY
8088-707-707

ಬೇಕಾಗಿದ್ದಾರೆ
ಪ್ರಕಾಶನ ಕಂಪನಿಗೆ ಅಗತ್ಯವಿರುವ ವೆಬ್ ಆಫ್‌ಸೆಟ್ ಮುದ್ರಕರು ಬೇಕಾಗಿದ್ದಾರೆ
ಸಿಟ್‌ಲೈನ್ ಎಕ್ಸ್‌ಪ್ರೆಸ್ ಮತ್ತು ಓರಿಯಂಟ್‌ನಂತಹ ವೆಬ್ ಆಫ್‌ಸೆಟ್ ಮುದ್ರಣ ಯಂತ್ರಗಳನ್ನು ನಿರ್ವಹಿಸಲು ಅನುಭವಿ ಮುದ್ರಕರು ಬೇಕಾಗಿದ್ದಾರೆ.
ತಮ್ಮ ಸ್ವ–ವಿವರವನ್ನು ವಾಟ್ ಆಪ್ ಮೂಲಕ ಕಳುಹಿಸಿ/ಕರೆಮಾಡಿ
9606810101 0821-2496520/21

WANTED IMMEDIATELY (EXPERIENCED)
1) Semi-Qualified CA/ Articleship Completed CA
2) Accountant (Salary - 15,000/- to 50,000/-)
Wrok Location: #20, 1st Floor, Buddha-marga, Siddartha Layout, Opp. New DC Office, Mysore
Office: 0821-3588801
Phone: 9353787677

WE'RE HIRING
SALES MANAGER
Are you a dynamic professional with excellent communication skills in English, Hindi, and Kannada?
We are looking for a well-experienced Sales Manager (Age: 30-40) with a strong track record and leadership mindset. Any graduate can apply.
Attractive Salary Package
Promising Career Growth
Apply now: saraswathidayananda017@gmail.com
Don't miss this opportunity to lead and grow!

MYSORE ADVOCATE'S HOUSING CO-OPERATIVE SOCIETY LTD., MYSORE

Mysore Bar Association Building, Mysore Law Courts Premises, Chamarajapuram, Mysore-5

ಸಾರ್ವಜನಿಕರ ಗಮನಕ್ಕೆ

ಮೈಸೂರು ವಕೀಲರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರುರವರು ಕರ್ನಾಟಕ ಗೃಹ ಮಂಡಳಿ ಮತ್ತು ಸುಬ್ರಮಣ್ಯ ಕನ್‌ಸ್ಟ್ರಕ್ಷನ್ ಅಂಡ್ ಡೆವೆಲಪ್‌ಮೆಂಟ್ ಕಂಪನಿರವರ ಜಂಟಿ ಸಹಭಾಗಿತ್ವದಲ್ಲಿ ಕೇರ್ಗಳ್ಳಿ ಮತ್ತು ಕೆಮ್ಮಣ್ಣುಪುರ ಗ್ರಾಮದ ಸರ್ವೇ ನಂಬರ್‌ಗಳಲ್ಲಿ ವಸತಿ ಬಡಾವಣೆಯನ್ನು ಮಾಡಲು ದಿನಾಂಕ: 23.01.2004 ರಂದು ಮಾಡಿಕೊಂಡ ಎಂ.ಓ.ಎ ಮತ್ತು 10.12.2004 ರಂದು ಎಂ.ಓ.ಎ ಮಾಡಿಕೊಂಡಿದ್ದು ಇದರ ಪೈಕಿ ಮೈಸೂರು ಜಿಲ್ಲೆ ಮತ್ತು ತಾಲ್ಲೂಕು ಜಯಪುರ ಹೋಬಳಿ ಕೇರ್ಗಳ್ಳಿ ಮತ್ತು ಕೆಮ್ಮಣ್ಣುಪುರ ಗ್ರಾಮದ ಸರ್ವೆ ನಂಬರ್‌ಗಳಾದ 191/3, 192, 193, 197, 198/1, 198/2, 199/1, 199/2, 199/3, 199/4, 199/4ಬಿ, 199/5, 199/6, 199/7, 199/8, 199/9, 204, 210, 211/1, 214/1, 214/2, 214/3, 216/1, 216/2, 219/1, 220/1, 220/2ಎ, 220/2ಬಿ, 221, 222, 222/1, 223, 224/1, 224/2, 224/3, 225, 226/1, 226/2, 226/3, 229/3, 227, 228, 230, 231, 232/2, 232/3, 233/2ಬಿ, 237, 238, 239/4, 239/5, 267 ಒಟ್ಟು ವಿಸ್ತೀರ್ಣ 106 ಎಕರೆ 31.08 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸದರಿ ಎಂ.ಓ.ಎ ದಿನಾಂಕ: 23–01–2004 ಹಾಗೂ 10–12–2004 ಆಧಾರದ ಮೇಲೆ ವಿವಿಧ ಅಳತೆಯ ಒಟ್ಟು 794 ನಿವೇಶನಗಳನ್ನು ಕೊಂಡುಕೊಳ್ಳಲು ನಮ್ಮ ಸಂಘದ ಸದಸ್ಯರ ಪರವಾಗಿ ನೋಂದಾಯಿತ ಒಡಂಬಡಿಕೆ ಕರಾರು ಪತ್ರವನ್ನು ದಿನಾಂಕ: 31–05–2013, 14–01–2019 ಮತ್ತು 03–03–2022 ಮಾಡಿಕೊಂಡಿದ್ದು, ಅದರಂತೆ ನಾವುಗಳು ಸುಬ್ರಮಣ್ಯ ಕನ್‌ಸ್ಟ್ರಕ್ಷನ್ ಅಂಡ್ ಡೆವೆಲಪ್‌ಮೆಂಟ್ ಕಂಪನಿ ಮತ್ತು ಕರ್ನಾಟಕ ಗೃಹ ಮಂಡಳಿರವರ SCDCL/KHB ESCROW ಖಾತೆಗೆ ಸಂಘದ ಸದಸ್ಯರಿಂದ ಪಡೆದ ಹಣವನ್ನು ಪಾವತಿ ಮಾಡಲಾಗಿರುತ್ತದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ತಮ್ಮ ಆಡಳಿತ ಮಂಡಳಿಯ ಸಭೆಯಲ್ಲಿ ತಾತ್ಕಾಲಿಕ ನಕ್ಷೆ ಅನುಮೋದಿಸಿದ್ದು ನಂತರದಲ್ಲಿ ಸುಬ್ರಮಣ್ಯ ಕನ್‌ಸ್ಟ್ರಕ್ಷನ್ ಅಂಡ್ ಡೆವೆಲಪ್‌ಮೆಂಟ್ ಕಂಪನಿ ಮತ್ತು ಕರ್ನಾಟಕ ಗೃಹ ಮಂಡಳಿಯವರು ಈ ಮೇಲ್ಕಂಡ ಸರ್ವೇನಂಬರ್‌ಗಳಿಗೆ ಸಂಬಂಧಿಸಿದಂತೆ ದಿನಾಂಕ: 16–09–2023ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ತಾತ್ಕಾಲಿಕ ಅನುಮೋದನೆಗೊಂಡ ಬಡಾವಣೆ ನಕ್ಷೆಯನ್ನು ಪಡೆದುಕೊಂಡಿರುತ್ತಾರೆ. ಸುಬ್ರಮಣ್ಯ ಕನ್‌ಸ್ಟ್ರಕ್ಷನ್ ಅಂಡ್ ಡೆವೆಲಪ್‌ಮೆಂಟ್ ಕಂಪನಿ ಮತ್ತು ಕರ್ನಾಟಕ ಗೃಹ ಮಂಡಳಿಯವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ: 16–01–2025ರಂದು ಕಾರ್ಯಾದೇಶವನ್ನು ಪಡೆದುಕೊಂಡಿರುತ್ತಾರೆ. ಮೈಸೂರು ವಕೀಲರ ಗೃಹ ನಿರ್ಮಾಣ ಸಹಕಾರ ಸಂಘ ಮಾಡಿಕೊಂಡ ಎಂ.ಓ.ಎ ಪ್ರಕಾರ ವಿವಿಧ ಅಳತೆಯ ನಿವೇಶನಗಳು ಈ ಕೆಳಕಂಡಂತಿರುತ್ತದೆ ಹಾಗಾಗಿ ಈ ವಿಷಯವನ್ನು ಸಾರ್ವಜನಿಕ ಗಮನಕ್ಕೆ ತಂದಿರುತ್ತೇವೆ.

ನಿವೇಶನಗಳ ಅಳತೆ	ನಿವೇಶನಗಳ ಸಂಖ್ಯೆ
30 feet x 40 feet	427
40 feet x 60 feet	218
50 feet x 80 feet	39
30 feet x 50 feet	110
Total No. of sites	794

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
Sd/- Chief Executive Officer

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.

ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ

ಸನ್ಮಾನ್ಯ ಸಹಕಾರಿ ಬಂಧುಗಳೇ ಮೇಲ್ಕಂಡ ಸಂಘದ 2024–25ನೇ ಸಾಲಿನ **ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು** ದಿನಾಂಕ : 06–09–2025 ಶನಿವಾರ ಬೆಳಿಗ್ಗೆ 11–00 ಗಂಟೆಗೆ **ಸ್ಥಳ: ಸಂಘದ ಕಛೇರಿ ಆವರಣ, ತಿ.ನರಸೀಪುರದಲ್ಲಿ ಏರ್ಪಡಿಸಿರುತ್ತದೆ.** ಸಂಘದ ಅಧ್ಯಕ್ಷರಾದ **ಶ್ರೀಯುತ ಮಲ್ಲಣ್ಣರವರ** ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತೆ. ಸಂಘದ ಮಾನ್ಯ ಸದಸ್ಯರುಗಳು ಹಾಗೂ ಆಹ್ವಾನಿತರು ಸಕಾಲಕ್ಕೆ ಆಗಮಿಸಿ ಮಹಾಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ಈ ಮೂಲಕ ಕೋರಲಾಗಿದೆ.

ಆಹ್ವಾನ ಪತ್ರಿಕೆ ತಲುಪದೇ ಇರುವ ರೈತರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಬೇಕೆಂದು ಮನವಿ

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಡಿ.ಎಂ ಶಿವಕುಮಾರ್
ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿ.

ಸ್ಥಳ: ತಿ.ನರಸೀಪುರ
ದಿನಾಂಕ: 03–09–2025

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀರಂಗಪಟ್ಟಣ ತಾಲ್ಲೂಕು, ಮೊಗರಹಳ್ಳಿ, ಕೆಆರ್‌ಎಸ್ ಮುಖ್ಯರಸ್ತೆ, ಮನೆ ನಂ. 603ರಲ್ಲಿ ವಾಸವಾಗಿರುವ ಶ್ರೀ ಚೇತನ್.ಪಿ ಇವರ ಇರಾದೆ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ. ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ಇದರ ಮಾಲೀಕರಾದ ಶ್ರೀಮತಿ. ಶಶಿಕಲಾ ಸಿಂಹನ್ ರವರಿಂದ ಖರೀದಿಸುವವರಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆಯಾರಿಗಾದರೂ, ಯಾವುದೇ ರೀತಿಯ ಹಕ್ಕು, ಭಾದ್ಯತೆ, ಹಿತಾಸಕ್ತಿ, ಸ್ವಾಧೀನ ಹಾಗೂ ತಂಟೆ ತಕರಾರುಗಳು ಇದ್ದಲ್ಲಿ ಈ ಕೆಳಗೆ ಸಹಿ ಮಾಡಿರುವ ವಕೀಲರ ಕಛೇರಿಗೆ, ಈ ಪ್ರಕಟಣೆ ದಿನಾಂಕದಿಂದ 07 ದಿನಗಳ ಒಳಗಾಗಿ ದಾಖಲೆಗಳೊಡನೆ, ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸುವುದು. ತಪ್ಪಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಆಕ್ಷೇಪಣೆಗಳು ವಿವಾದಗಳು ಇರುವುದಿಲ್ಲವೆಂದು ಪರಿಗಣಿಸಿ ಸ್ವತ್ತನ್ನು ಖರೀದಿಸಲು ನನ್ನ ಕಕ್ಷಿದಾರರು ಮುಂದುವರಿಯುತ್ತಾರೆ. ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ಭಾದ್ಯರಲ್ಲವೆಂದು ಸಹ ತಿಳಿಯುವುದು. **ಷೆಡ್ಯೂಲ್ ಸ್ವತ್ತಿನ ವಿವರ :** ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಶಾದನಹಳ್ಳಿ ಗ್ರಾಮದ ಸರ್ವೆ ನಂ.68/1. ಹಾಗೂ 69ರಲ್ಲಿನ ವಿಸ್ತೀರ್ಣ 15 ಎಕರೆ 09 ಗುಂಟೆ ಪರಿವರ್ತಿತ ಜಮೀನಿನಲ್ಲಿ ಅಭಿವೃದ್ಧಿ ಪಡಿಸಿರುವ ನಿವೇಶನ ಸಂಖ್ಯೆ : 198, Naganahalli Grama panchayath Khata Form No.9 and 11A, property No. 733/198 (No.39,; Page 10, Book-01) Unique No.152200401024021319 ವಿಸ್ತೀರ್ಣ ಪೂರ್ವ–ಪಶ್ಚಿಮ 9.00 ಮೀಟರ್, ಉತ್ತರ– ದಕ್ಷಿಣ 12.00 ಒಟ್ಟು 108 ಚದರ ಮೀಟರ್‌ಗಳ ನಿವೇಶನಕ್ಕೆ ಚಕ್ಕುಬಂಧಿ – ಪೂರ್ವಕ್ಕೆ : ನಿವೇಶನ ಸಂಖ್ಯೆ 199, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 197 ಉತ್ತರಕ್ಕೆ : ನಿವೇಶನ ಸಂಖ್ಯೆ 191, ದಕ್ಷಿಣಕ್ಕೆ : ರಸ್ತೆ ಈ ಮಧ್ಯೆ ಇರುವ ವಾಸ ಉಪಯೋಗಿ ನಿವೇಶನ ಸಾರ್ವಜನಿಕ ಪ್ರಕಟಣೆಗೆ ಒಳಪಟ್ಟ ಸ್ವತ್ತಾಗಿರುತ್ತದೆ.

ಸಹಿ/– ಎಸ್.ಕುಮಾರ ಸ್ವಾಮಿ, ಬಿ.ಕಾಂ, ಎಲ್.ಎಲ್.ಬಿ, ವಕೀಲರು, ಕಛೇರಿ ವಿಳಾಸ : ಚೇಂಬರ್ ನಂ.729/1. ಗೌಂಡ್ ಫ್ಲೋರ್, ಸಾಯಿ ಬಾಬ ದೇವಸ್ಥಾನ ಎದುರು, ತ್ಯಾಗರಾಜ ರಸ್ತೆ, ಮೈಸೂರು–04 ದೂ.: 9448277346

ಮೈಸೂರು
ದಿನಾಂಕ : 04–09–2025

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈನಾಪ್ರಾ/ವ.ಕ–8/38/2025–26 ದಿನಾಂಕ: 20–06–2025

ಪತ್ರಿಕಾ ಪ್ರಕಟಣೆ

ಶ್ರೀಮತಿ ಎಸ್.ಶಾಂತಿ ಕೋಂ ಶ್ರೀ ಎನ್.ಮೋಹನ್ ಎಂಬುವರಿಗೆ ಸಾತಗಳ್ಳಿ 1ನೇ ಹಂತ ಬಡಾವಣೆಯ ನಿ.ಸಂಖ್ಯೆ 943 ಅಳತೆ **6.00 x 9.00** ಮೀಟರ್ ನಿವೇಶನವು ದಿನಾಂಕ: 27–10–1987 ರಂದು ಮಂಜೂರಾಗಿದ್ದು, ದಿನಾಂಕ: 04–04–1988 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ. ಹಾಗೂ ದಿನಾಂಕ: 11–05–2010 ರಂದು ನಿವೇಶನದ ಖಾತಾ ಮತ್ತು ಕಂದಾಯ ಪತ್ರ ಪಡೆದಿರುತ್ತಾರೆ.

ನಂತರ ಮಂಜೂರಾತಿದಾರರಾದ ಶ್ರೀಮತಿ ಎಸ್. ಶಾಂತಿ ರವರು ತಮ್ಮ ಪ್ರತಿನಿಧಿ ಶ್ರೀ ಪರ್ವೀಜ್ ಅಹಮದ್‌ರವರಿಗೆ ಉಪ ನೋಂದಣಾಧಿಕಾರಿ ಮೈಸೂರು ಉತ್ತರ ರವರ ಕಛೇರಿಯಲ್ಲಿ 4ನೇ ಪುಸ್ತಕದ 439ನೇ ಸಂಪುಟದಲ್ಲಿ 117–118 ನೇ ಪುಟದಲ್ಲಿ 811ನೇ ನಂಬರಾಗಿ ದಿನಾಂಕ: 15–11–1994 ರಂದು ನೊಂದಾಯಿತ ಜಿ.ಪಿ.ಎ ನೀಡಿರುತ್ತಾರೆ.

ಜಿ.ಪಿ.ಎ. ದಾರರಾದ ಶ್ರೀ ಪರ್ವೀಜ್ ಅಹಮದ್ ರವರು ನಿ.ಸಂಖ್ಯೆ 943 ಅನ್ನು ಶ್ರೀಮತಿ ರಫಿಯಾ ಬಾನು ಎಂಬುವರಿಗೆ ಉಪ ನೋಂದಣಾಧಿಕಾರಿ ಮೈಸೂರು ದಕ್ಷಿಣ ಕಛೇರಿಯಲ್ಲಿ 1ನೇ ಪುಸ್ತಕದ ದಸ್ತಾವೇಜು ನಂಬರ ಎಂವೈಎನ್–1–12629–2010–11 ಆಗಿ ಸಿ.ಡಿ.ನಂಬರ ಎಂವೈಎನ್‌ಡಿ252 ನೇ ದ್ದರಲ್ಲಿ ದಿನಾಂಕ: 23–10–2010 ರಂದು ನೊಂದಾಯಿತ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಪ್ರಾಧಿಕಾರದಿಂದ ವರ್ಗಾವಣೆ ಪತ್ರ ಪಡೆದಿರುತ್ತಾರೆ. ಹಾಗೂ ಕ್ರಯಪತ್ರ ನೀಡುವಂತೆ ಕೋರಿರುತ್ತಾರೆ.

ಕ್ರಯದಾರರಾದ ಶ್ರೀಮತಿ ರಫಿಯಾ ಬಾನು ರವರು ಶ್ರೀ ಅಸ್ಗರ್ ಅಹಮದ್ ಎಂಬುವರಿಗೆ ಉಪ ನೋಂದಣಾಧಿಕಾರಿ ಮೈಸೂರು ದಕ್ಷಿಣ ಕಛೇರಿಯಲ್ಲಿ 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಎನ್‌ಡಿ–1–07551–2011–12 ಆಗಿ ಸಿಡಿ ನಂಬರ್ ಎಂವೈಎನ್‌ಡಿ 282ನೇದ್ದರಲ್ಲಿ ದಿನಾಂಕ: 14–07–2011 ರಂದು ನೊಂದಾಯಿತ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ವರ್ಗಾವಣೆ ಪತ್ರ ಪಡೆದಿರುತ್ತಾರೆ.

ಕ್ರಯದಾರರಾದ ಶ್ರೀಮತಿ ರಫಿಯಾ ಬಾನು ರವರು ಶ್ರೀ ಅಸ್ಗರ್ ಅಹಮದ್ ಎಂಬುವರಿಗೆ ಉಪ ನೊಂದಣಾಧಿಕಾರಿ ಮೈಸೂರು ದಕ್ಷಿಣ ಕಛೇರಿಯಲ್ಲಿ 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಎನ್‌ಡಿ–1–07551–2011–12 ಆಗಿ ಸಿ.ಡಿ. ನಂಬರ್ ಎಂವೈಎನ್‌ಡಿ 292ನೇದ್ದರಲ್ಲಿ ದಿನಾಂಕ 14–07–2011 ರಂದು ನೋಂದಾಯಿತ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ವರ್ಗಾವಣೆ ಪತ್ರ ಪಡೆದಿರುತ್ತಾರೆ.

ಕ್ರಯದಾರರಾದ ಶ್ರೀ ಅಸ್ಗರ್ ಅಹಮದ್ ರವರು ಶ್ರೀ ಪ್ರಕಾಶ್ ಕುಮಾರ್ ಜೈನ್ ಎಂಬುವರಿಗೆ ಉಪ ನೊಂದಣಾಧಿಕಾರಿ ಮೈಸೂರು ದಕ್ಷಿಣ ಕಛೇರಿಯಲ್ಲಿ 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಎನ್–1–13716–2011–12 ಆಗಿ ಸಿ.ಡಿ. ನಂಬರ್ ಎಂವೈಎನ್‌ಡಿ 291ನೇದ್ದರಲ್ಲಿ ದಿನಾಂಕ: 04–10–2011 ರಂದು ನೋಂದಾಯಿತ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ವರ್ಗಾವಣೆ ಪತ್ರ ಪಡೆದಿರುತ್ತಾರೆ ಹಾಗೂ ಕ್ರಯಪತ್ರ ನೀಡುವಂತೆ ಕೋರಿರುತ್ತಾರೆ.

ಶ್ರೀ ಪ್ರಕಾಶ್ ಕುಮಾರ್ ಜೈನ್ ರವರು ಕ್ರಯಪತ್ರ ಕೋರಿ ಅರ್ಜಿಸಲ್ಲಿಸಿರುವುದರಿಂದ ಸದರಿಯವರಿಗೆ ಕ್ರಯಪತ್ರ ನೀಡಬೇಕಾಗಿದ್ದು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರುರವರಿಗೆ ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರಿನ ವಾಸಿಯಾದ ಪುಪಲರಾಮ ಬಿನ್ ಲೇ॥ ವೆಂಕಟೇಶರಾವ್ ರವರಿಗೆ ಸೇರಿದ ಸ್ವತ್ತಿನ ಕ್ರಯಪತ್ರ ಎನ್‌ಜೆಜಿ–1–7262–2007–08 ದಿನಾಂಕ 16.01.2008,ಮತ್ತು ಎನ್‌ಜೆಜಿ–1–7558–2008–08 ದಿನಾಂಕ 29.01.2008, ಈ 2 ಮೂಲ ಕ್ರಯಪತ್ರಗಳು ದಿನಾಂಕ 02.09.2025 ರಂದು ಕಳೆದು ಹೋಗಿರುತ್ತದೆ. ಇದರ ಸಂಬಂಧ ದಿನಾಂಕ 02.09.2025 ರಂದು ಮೈಸೂರಿನ ದೇವರಾಜ ಪೊಲೀಸ್ ಠಾಣೆಗೆ 1781509/2025 ದೂರನ್ನು ದಾಖಲಿಸಿರುತ್ತಾರೆ. ಸದರಿ ಮೇಲ್ಕಂಡ ಈ 2 ಮೂಲ ಕ್ರಯಪತ್ರಗಳು ದೊರಕಿದಲ್ಲಿ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಸಾರ್ವಜನಿಕ ಪ್ರಕಟಣೆ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ತಲುಪಿಸತಕ್ಕದ್ದು. ಒಂದೊಮ್ಮೆ ಯಾವುದೇ ವ್ಯಕ್ತಿ /ವ್ಯಕ್ತಿಗಳು ಸದರಿ ಪತ್ರಗಳನ್ನು ದುರುಪಯೋಗ ಪಡಿಸಿಕೊಂಡಲ್ಲಿ ಸದರಿ ವ್ಯಕ್ತಿಗಳೇ ಹೊಣೆಗಾರರಾಗುತ್ತಾರೆ. ಹಾಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– : ದರ್ಶನ್ ಜಿ.ಎಸ್, ವಕೀಲರು #1028/3B, ಜಯಲಕ್ಷ್ಮೀ ವಿಲಾಸ ರಸ್ತೆ, ಚಾಮರಾಜಪುರಂ, ಮೈಸೂರು–570005 ಮೊ: 7022933168

ದಿನಾಂಕ : 03/09/2025, ಸ್ಥಳ : ಮೈಸೂರು

CHANGE OF NAME

I, **Monnappa Nambudumada Thammaiah,** Father of Agalya Monnappa, residing at Flat # 214, AB South Residence, Dubai South, Dubai, UAE, holder of Indian Passport No P6367882, issued at Bengaluru on 01/12/2016, permanent resident of Kandalagala Village and Post, Virajpet Tq, Kodagu, PIN: 571218, Karnataka, India and presently residing at Flat # 214, AB South Residence, Dubai South, Dubai, UAE, do hereby solemnly affirm and oath that I have changed my daughter's name from **AGALYA MONNAPPA** to **NIYARA MONNAPPA** with immediate effect, sworn in front of Dubai Court NOC dated 26.08.2025.

- Monnappa Nambudumada Thammaiah
Mob : +971 55 404 8694

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್ ಪುಟ್ಟಸ್ವಾಮಿಗೌಡರವರ ಧರ್ಮಪತ್ನಿ ಶ್ರೀಮತಿ. ತಾಯಮ್ಮ ಮತ್ತು ಕುಟುಂಬದವರು, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಚಿನಕುರುಳಿ ಹೋಬಳಿ, ಹೊಸ ಕನ್ನಂಬಾಡಿ ಗ್ರಾಮದಲ್ಲಿರುವ ಜಮೀನಿನ ಸರ್ವೆ ನಂ. 43/4 ರಲ್ಲಿ ವಿಸ್ತೀರ್ಣ 01 ಎಕರೆವುಳ್ಳ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಜಿ. ವೆಂಕಟೇಶ್‌ರವರ ಸರ್ವೆ ನಂ. 43/5 ರಲ್ಲಿ 12 ಅಡಿ ಅಗಲ ಓಡಾಡಲು ಬಿಟ್ಟಿರುವ ಜಾಗ, ಪಶ್ಚಿಮಕ್ಕೆ: ಸರ್ವೆ ನಂ. 43/2 ರ ಜಮೀನು, ಉತ್ತರಕ್ಕೆ: ಜಿ. ವೆಂಕಟೇಶ್‌ರವರ ಸರ್ವೆ ನಂ. 43/5 ಜಮೀನು ಮತ್ತು ದಕ್ಷಿಣಕ್ಕೆ: ಸರ್ವೆ ನಂ. 43/1 ರಲ್ಲಿ ವಿಶಾಲಾಕ್ಷಮ್ಮರವರ ಜಮೀನು.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು ಎಸ್‌ಎಲ್‌ಡಿ ಲಾ ಫರ್ಮ್ ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641. email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, (1) ಸಣ್ಣಬೀರಮ್ಮ ಕೋಂ. ಲೇಟ್ ರಾಮಯ್ಯ (2) ಸಣ್ಣತಾಯಮ್ಮ ಬಿನ್ ಲೇಟ್ ರಾಮಯ್ಯ (3), ಬಸಮ್ಮ ಬಿನ್ ಲೇಟ್ ರಾಮಯ್ಯ (4) ದಾಸಪ್ಪ ಬಿನ್ ಲೇಟ್ ರಾಮಯ್ಯ (5) ಗೌರಮ್ಮ ಬಿನ್ ಲೇಟ್ ರಾಮಯ್ಯ, (6) ರಾಮಯ್ಯ ಬಿನ್ ಲೇಟ್ ನಂಜಯ್ಯ (7) ನಂಜಪ್ಪ ಬಿನ್ ಲೇಟ್ ನಂಜಯ್ಯ (8) ಪ್ರೇಮ ಬಿನ್ ಲೇಟ್ ನಂಜಯ್ಯ (9) ಲೀಲಾ ಬಿನ್ ಲೇಟ್ ನಂಜಯ್ಯ (10) ಕವಿತಾ ಬಿನ್ ಲೇಟ್ ನಂಜಯ್ಯ ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಹಡಜನ ಗ್ರಾಮದ ಸರ್ವೆ ನಂಬರ್: 185/2 ರಲ್ಲಿನ ಎರಡು ಎಕರೆ ಎಂಟು ಗುಂಟೆ ಪೈಕಿ ಒಂದು ಎಕರೆ ನಾಲ್ಕು ಗುಂಟೆ (1.04.00.00) 11ಇ ನಕ್ಷೆ ಸಂಖ್ಯೆ: 26040725668715001 ಖುಷ್ಕಿ ಜಮೀನು ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ಬ್ಲಾಕ್ 1 ; ಪಶ್ಚಿಮಕ್ಕೆ: ಲಾ.ಸ.ನಂ. 185/1 ; ಉತ್ತರಕ್ಕೆ: ಗ್ರಾಮ ಸರ್ಕಾರಿ ಉತ್ತನಹಳ್ಳಿ ಗಡಿ ; ದಕ್ಷಿಣಕ್ಕೆ: ಲಾ.ಸ.ನಂ. 184.

ಸಹಿ/– ಎಂ.ಎನ್. ಪ್ರಕಾಶ್ ಕಾಳಪ್ಪ, ವಕೀಲರು, KAR-1996-2000, Advocate & Legal Consultant, #67/7A, P.R.I. Complex, No. 2 & 3, 1st Floor, New Sayyaji Rao Road, Fort Mohalla, Mysore-570 004. Mob: 9343112535. Email: mnprakashkalappa@gmail.com

ಮೈಸೂರು: 03–09–2025

ದಿ ಮೈಸೂರು ಕಾಫಿ ಸಂಸ್ಕರಣಾ ಸಹಕಾರ ಸಂಘ ನಿ.

ಕೆ.ಆರ್.ಎಸ್.ರಸ್ತೆ, ಯಾದವಗಿರಿ, ಮೈಸೂರು.

ಕ್ರ.ಸಂ.ಎಂಸಿಪಿಸಿಎಸ್‌ನಿ/ಪ್ರಕಟಣೆ/3/2025–26 ದಿನಾಂಕ : 02–09–2025

ಪ್ರಕಟಣೆ

2024–25ನೇ ಸಾಲಿನ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆ.

ಮೇಲ್ಕಂಡ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ದಿನಾಂಕ: 09–09–2025 ಮಂಗಳವಾರ ಸಮಯ: ಪೂರ್ವಾಹ್ನ 11.30 ಗಂಟೆಗೆ ಸಂಘದ ಆವರಣದಲ್ಲಿ ಶ್ರೀ ಎ.ಎಸ್ ಪೊನ್ನಣ್ಣ ಅಧ್ಯಕ್ಷರು, ಮಾನ್ಯ ಶಾಸಕರು,ವಿರಾಜಪೇಟೆ ಕ್ಷೇತ್ರ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು–ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಭೆಯ ಆಹ್ವಾನ ಪತ್ರಿಕೆ ತಲುಪದೆ ಇದ್ದವರು ಇದನ್ನೆ ಆಹ್ವಾನ ಪತ್ರಿಕೆ ಎಂದು ತಿಳಿದು ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡಲು ಕೋರಿದೆ.

ಅಧ್ಯಕ್ಷರು/ಉಪಾಧ್ಯಕ್ಷರು/ಆಡಳಿತ ಮಂಡಳಿಯ ಅನುಮತಿಯ ಮೇರೆಗೆ
ಸಹಿ/– ಮುಖ್ಯಕಾರ್ಯನಿರ್ವಹಣಾಧಿಕಾರಿ ದಿ ಮೈಸೂರು ಕಾಫಿ ಸಂಸ್ಕರಣಾ ಸಹಕಾರ ಸಂಘ ನಿ., ಮೈಸೂರು

ಇಮೇಲ್ – mcpcs1959@gmail.com , ಮೊ ನಂ– 9845807364

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.

2024–25ನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನಾ ಪತ್ರ

ಒಕ್ಕೂಟದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 06.09.2025ನೇ ಶನಿವಾರ ಬೆಳಗ್ಗೆ 11.00 ಗಂಟೆಗೆ ವಿನಾಯಕ ಕನ್ವೆನ್ಷನ್ ಹಾಲ್, ಪಡುವಾರಹಳ್ಳಿ (ವಿನಾಯಕ)ಗ್ರಾಮಾಭ್ಯುದಯ ಟ್ರಸ್ಟ್ (ರಿ.), ವಿನಾಯಕನಗರ (ಪಡುವಾರಹಳ್ಳಿ), ಮೈಸೂರು ಇಲ್ಲಿ ಒಕ್ಕೂಟದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಆರ್. ಚಲುವರಾಜು ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದ್ದು, ಸದಸ್ಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರತಿನಿಧಿಗಳು ಸಭೆಗೆ ಸಕಾಲದಲ್ಲಿ ಹಾಜರಾಗಬೇಕಾಗಿ ಕೋರಿದೆ. ಪೂರ್ಣ ವಿವರಗಳನ್ನೊಳಗೊಂಡ ಸಭಾ ಸೂಚನಾ ಪತ್ರವನ್ನು ಎಲ್ಲಾ ಸದಸ್ಯ ಸಂಘಗಳಿಗೂ ಮುದ್ದಾಂ ನೀಡಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/–
ಸುರೇಶ ನಾಯ್ಕ್ .ಕೆ.ಎಸ್
ವ್ಯವಸ್ಥಾಪಕ ನಿರ್ದೇಶಕರು

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು